ವಿಶ್ವವಾಣಿ

ವಿಶ್ವಾಸವೇ ವಿಶ್ವ

ಅಕ್ಟೋಬರ್ 2 ರಾಷ್ಟ್ರಪಿತ ಗಾಂಧೀಜಿ ಜನ್ಮದಿನ. ಮಕ್ಕಳ ನೆಚ್ಚಿನ ಬಾಪುವನ್ನು ಸ್ಮರಿಸಲು ವಿಶ್ವವಾಣಿ ಅವಕಾಶ ಮಾಡಿಕೊಡುತ್ತಿದೆ. ಒಂದರಿಂದ ಏಳನೇ ತರಗತಿವರೆಗಿನ ವಿದ್ಯಾರ್ಥಿಗಳು ಮಹಾತ್ಮನ ವೇಷ ಧರಿಸಿ, ಆ ಫೋಟೋ ನಮಗೆ ವಾಟ್ಸ್ ಆ್ಯಪ್ ಮಾಡಬಹುದು. ಅಥವಾ ಗಾಂಧೀಜಿಯ ಚಿತ್ರ ಬರೆದು, ಫೋಟೋ ವಾಟ್ಸ್ ಆ್ಯಪ್ ಮಾಡಬಹುದು. ಅಕ್ಟೋಬರ್ ಒಂದರ ಸಂಜೆ 4 ಗಂಟೆಗೆ ಮುನ್ನ ಫೋಟೋಗಳು ನಮಗೆ ತಲುಪಬೇಕು. ಒಬ್ಬ ವಿದ್ಯಾರ್ಥಿ ಗಾಂಧಿ ವೇಷ ಅಥವಾ ಚಿತ್ರ ಇವುಗಳಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬಹುದು. ಚಿತ್ರದ ಜತೆ ನಿಮ್ಮ ಹೆಸರು, ತರಗತಿ, ಶಾಲೆಯ ಹೆಸರು, ಊರಿನ ಹೆಸರು ಮರೆಯಲು ಮರೆಯದಿರಿ.

ವಿಶ್ವವಾಣಿ ವಾಟ್ಸ್ ಆ್ಯಪ್ ನಂಬರ್
63623 93988

ಪುಟ ತೆರೆದಂತೆ...

ರಾಜ್ಯದಲ್ಲೀಗ ರಾಜೀನಾಮೆಯ ರಾಜಕೀಯ!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ನಮ್ಮ ಕಥೆ ಬರೆವವರಾರು ಗೊತ್ತೇ?
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ದಾರಿದೀಪೋಕ್ತಿ

ದ್ವೇಷ, ಅಸೂಯೆ ಭಾವ ಹೊಂದಿರುವವರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳಬಾರದು. ನೀವು ಅವರನ್ನು ಸ್ನೇಹಿತರೆಂದು ಪರಿಗಣಿಸುತ್ತೀರಿ. ಆದರೆ ಅಸಲಿಗೆ ಅವರು ಅಪಾಯಕಾರಿಗಳು. ನಿಮ್ಮನ್ನು ಪ್ರತಿಸ್ಪರ್ಧಿಗಳು ಎಂದೇ ಅವರು ಭಾವಿಸಿರುತ್ತಾರೆ. ಅಂಥವರ ಬಗ್ಗೆ ಜಾಗರೂಕರಾಗಿರಬೇಕು.

ವಕ್ರತುಂಡೋಕ್ತಿ

ಕೆಲವರು ತಾವು ಶ್ರೀಮಂತ ಎಂದು ಕರೆಯಿಸಿಕೊಳ್ಳಬೇಕೆಂದು ಬಯಸುವುದಿಲ್ಲ. ಖರ್ಚಿಗೆ ಕಮ್ಮಿಯಾಗದಿದ್ದರೆ ಸಾಕು ಎಂದುಕೊಳ್ಳುತ್ತಾರೆ.

ಇಡಗುಂಜಿ ಮೇಳಕ್ಕೆ ವಿಶ್ವಸಂಸ್ಥೆಯ ಮಾನ್ಯತೆ

ಕಾರವಾರ: ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಸಂಸ್ಥೆಗೆ ವಿಶ್ವಸಂಸ್ಥೆಯ ಮಾನ್ಯತೆ ಲಭ್ಯವಾಗಿದೆ. 1934ರಲ್ಲಿ ಸ್ಥಾಪನೆಯಾದ ಮಂಡಳಿಗೆ ಈಗ 90ನೇ ವರ್ಷದ ಸಂಭ್ರಮ. ಈ ಸಂದರ್ಭದಲ್ಲಿ ವಿಶ್ವಮನ್ನಣೆ ಸಂಸ್ಥೆಗೆ ದೊರಕಿದ್ದು ಸಂತೋಷದ ಸಂಗತಿ ಸಂಸ್ಥೆಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದ್ದಾರೆ.

14 ಸೈಟ್ ವಾಪಸ್ ಪಡೆಯಲು ಮುಡಾಗೆ ಸಿಎಂ ಪತ್ನಿ ಪತ್ರ, ಇಡೀ ಪ್ರಕರಣಕ್ಕೆ ಹೊಸ ಟ್ವಿಸ್ಟ್ । ಪತಿಯ ಗೌರವಕ್ಕಿಂತ ನಿವೇಶನ ದೊಡ್ಡದಲ್ಲ ಎಂದ ಪಾರ್ವತಿ

ಮುಡಾ ಸೈಟ್ ಬೇಡಾ!

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರಿ ವಿವಾದಕ್ಕೆ ಕಾರಣ ವಾಗಿದ್ದ ಮುಡಾ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿದೆ. ವಿವಾದದ ಕೇಂದ್ರವಾಗಿದ್ದ 14 ನಿವೇಶನಗಳನ್ನು ವಾಪಸು ಪಡೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಮುಡಾಕ್ಕೆ ಪತ್ರ ಬರೆದಿದ್ದಾರೆ.

ದಿನದಿಂದ ದಿನಕ್ಕೆ ಮುಡಾ ಪ್ರಕರಣ ರಾಜಕೀಯ ತೀವ್ರತೆ ಪಡೆ ದುಕೊಂಡ ಹಾಗೂ ಪ್ರಕರಣದಲ್ಲಿ ಇ.ಡಿ. ಪ್ರವೇಶಿಸುವ ಸಾಧ್ಯತೆ ದಟ್ಟವಾದ ಹಿನ್ನೆಲೆಯಲ್ಲಿ ಪಾರ್ವತಿ ಅವರು ಈ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಪಾರ್ವತಿ ಅವರ ಈ ನಡೆಯಿಂದ ಇಡೀ ಪ್ರಕರಣವೇ ತಿರುವು ಪಡೆಯುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ನಿವೇಶನಗಳನ್ನು ವಾಪಸು ನೀಡಿರು ವುದರಿಂದ ಮುಂದಿನ ದಿನದಲ್ಲಿ ಕಾನೂನು ಹೋರಾಟದ ಸಮಯದಲ್ಲಿ ಸಿದ್ದರಾಮಯ್ಯ ಅವರು ಅಧಿಕಾರ ದುರ್ಬಳಕೆ ಮಾಡಿ ಕೊಂಡಿದ್ದಾರೆ ಎನ್ನುವ ಕಾರಣಕ್ಕೆ ದೂರು ದಾಖಲಿಸಲಾಗಿದೆ. ಆದರೆ ಇದೀಗ ಈ ಎಲ್ಲ ನಿವೇಶನ ಗಳನ್ನು ವಾಪಸು ನೀಡಿರು ವುದರಿಂದ, ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎನ್ನುವ ವಾದ ಮಂಡಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಸಮಗ್ರ ತನಿಖೆಗೆ ಆಗ್ರಹ: ಆರೋಪ ಕೇಳಿ ಬಂದ ದಿನವೇ ನಿವೇಶನ ವಾಪಸು ಮಾಡಲು ನಿರ್ಧರಿಸಿದ್ದ ಬಂದ ದಿನವೇ ನಾನು ಈ ನಿರ್ಧರಿಸಿದ್ದೆ. ಆದರೆ ಆರೋಪ ರಾಜಕೀಯ ದುರು ದ್ದೇಶದಿಂದ ಮಾಡಲಾಗಿದ್ದು, ಈ ಅನ್ಯಾಯದ ವಿರುದ್ಧ ಹೋರಾ ಡಬೇಕು. ಅವರ ಸಂಚಿಗೆ ನಾವು ಬಲಿಯಾಗಬಾರದು ಎಂದು ಕೆಲವು ಹಿತೈಷಿ ಗಳು ಹೇಳಿದ ಕಾರಣಕ್ಕೆ ನಿವೇಶನ ವಾಪಸು ನೀಡಿರಲಿಲ್ಲ. ಆದರೀಗ ನನ್ನ ಈ ನಿರ್ಧಾರ ಅಚಲವಾಗಿದ್ದು, ಈ ನಿವೇಶನ ಗಳನ್ನು ವಾಪಸು ನೀಡುವುದರೊಂದಿಗೆ ಮುಡಾಕ್ಕೆ ಸಂಬಂಧಿಸಿದ ಎಲ್ಲ ಆರೋಪಗಳ ಬಗ್ಗೆ ಸಮಗ್ರ ತನಿಖೆ ಮಾಡಬೇಕೆಂದು ಆಗ್ರಹಿಸುತ್ತೇನೆ ಎಂದು ಮನವಿ ಮಾಡಿದ್ದಾರೆ.

ಈ ನಿವೇಶನಗಳು ತೃಣಕ್ಕೆ ಸಮ

ನಿವೇಶನ, ಮನೆ, ಆಸ್ತಿ, ಸಂಪತ್ತು ಯಾವುದೂ ಪತಿಯ ಗೌರವ, ನೆಮ್ಮದಿಗಿಂತ ದೊಡ್ಡದಲ್ಲ. ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಅವರಿಂದ ಏನನ್ನೂ ನನಗಾಗಲೀ, ನನ್ನ ಕುಟುಂಬಕ್ಕಾಗಲೀ ಬಯಸದ ನನಗೆ ಈ ನಿವೇಶನ ತೃಣಕ್ಕೆ ಸಮ. ವಿವಾದಕ್ಕೆ ಕಾರಣವಾಗಿರುವ ಮುಡಾದ 14 ನಿವೇಶನಗಳನ್ನು ವಾಪಸ್ ಮಾಡಲು ನಿರ್ಧರಿಸಿದ್ದೇನೆ. ಈ ಬಗ್ಗೆ ನನ್ನ ಪತಿಯವರ ಅಭಿಪ್ರಾಯ ಏನಿದೆ ಎನ್ನುವುದು ನನಗೆ ತಿಳಿದಿಲ್ಲ. ಇದು ನಾನು ನನ್ನ ಆತ್ಮಸಾಕ್ಷಿಯ ಕರೆಗೆ ಓಗೊಟ್ಟು ಪ್ರಜ್ಞಾಪೂರ್ವಕವಾಗಿ ಕೈಗೊಂಡಿರುವ ತೀರ್ಮಾನ ಎಂದು ಸಿಎಂ ಪತ್ನಿ ಪಾರ್ವತಿ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚೆ

ಮುಖ್ಯಮಂತ್ರಿ ಅವರ ವಿರುದ್ಧ ಇಡಿಯಲ್ಲಿ ಪ್ರಕರಣ ದಾಖಲಾಗು ತ್ತಿದ್ದಂತೆ, ಮುಂದಿನ ಕಾನೂನು ಹೋರಾಟಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತ ನಿವಾಸ ಕಾವೇರಿಯಲ್ಲಿ ಆಪ್ತ ಸಚಿವರೊಂದಿಗೆ ಚರ್ಚಿಸಿದರು. ಲೋಕಾಯುಕ್ತ ತನಿಖೆಗೆ ತಡೆಯಾಜ್ಞೆ ಹಾಗೂ ಮುಡಾ ಪ್ರಕರಣದಲ್ಲಿ ಇ.ಡಿ ವ್ಯಾಪ್ತಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಸಭೆಯಲ್ಲಿ ಲೋಕಾಯುಕ್ತ ತನಿಖೆಗೆ ತಡೆಯಾಜ್ಞೆ ಪಡೆಯುವ ಸಂಬಂಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

ಮುಡಾಕ್ಕೆ ಬರೆದ ಪತ್ರದಲ್ಲಿ ಏನಿದೆ?

ಮೈಸೂರು ತಾಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೇ ನಂ 464ರಲ್ಲಿ 3 ಎಕರೆ 16 ಗುಂಟೆ ವಿಸ್ತೀರ್ಣದ ನನ್ನ ಜಮೀನನ್ನು ಪ್ರಾಧಿಕಾರ ಭೂಸ್ವಾಧೀನವಿಲ್ಲದೆ ಉಪಯೋಗಿಸಿಕೊಂಡಿದ್ದಕ್ಕಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪರಿಹಾರವಾಗಿ ವಿಜಯನಗರ 3 ಮತ್ತು 4 ನೇ ಹಂತದಲ್ಲಿ ವಿವಿಧ ಅಳತೆಯ 14 ನಿವೇಶನಗಳನ್ನು ಮಂಜೂರು ಮಾಡಿರುವುದು ನಿಮಗೆ ತಿಳಿದಿದೆ. ಮುಂದುವರಿದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನನ್ನ ಪರವಾಗಿ ಕಾರ್ಯಗತಗೊಳಿಸಿದ 14 ನಿವೇಶನಗಳ ಕ್ರಯಪತ್ರಗಳನ್ನು ರದ್ದುಗೊಳಿಸುವ ಮೂಲಕ ನಾನು ಪರಿಹಾರದ ನಿವೇಶನಗಳನ್ನು ಒಪ್ಪಿಸಲು ಮತ್ತು ಹಿಂತಿರುಗಿಸಲು ಬಯಸುತ್ತೇನೆ. ನಿವೇಶನಗಳ ಸ್ವಾಧೀನವನ್ನು ಸಹ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮರಳಿ ಹಸ್ತಾಂತರಿಸುತ್ತಿದ್ದೇನೆ. ದಯವಿಟ್ಟು ಈ ನಿಟ್ಟಿನಲ್ಲಿ ಅದಷ್ಟು ಬೇಗ ಅಗತ್ಯ ಕ್ರಮಗಳನ್ನು ಕೈಗೊಳ್ಳಿ ಎಂದು ಬರೆದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಇಡಿಗೆ ದೂರು

ಇದಕ್ಕೂ ಮೊದಲು ಸೋಮವಾರ ಸಂಜೆ ಮುಡಾ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜಾರಿ ನಿರ್ದೇಶನಾಲಯ(ಇಡಿ) ಇಸಿಐಆರ್(ಮಾಹಿತಿ ವರದಿ) ದಾಖಲಿಸಿದೆ. ದೂರುದಾರ ಸ್ನೇಹಮಯಿ ಕೃಷ್ಣ ಅವರು ಇ-ಮೇಲ್ ಮೂಲಕ ಸಲ್ಲಿಸಿರುವ ದೂರಿನ ಸಂಬಂಧ ಇಡಿ ಪ್ರಕರಣ ದಾಖಲಿಸಿಕೊಂಡಿದೆ. ಅದರಂತೆ ಮುಖ್ಯಮಂತ್ರಿ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದ್ದು, ಲೋಕಾಯುಕ್ತ ಎಫ್‌ಐಆರ್ ಆಧರಿಸಿ ಪ್ರಕರಣದ ಮಾಹಿತಿ ವರದಿ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಬೇಕಾಗಿದೆ. ಲೋಕಾಯುಕ್ತ ದಾಖಲಿಸಿರುವ ಎಫ್‌ಆರ್‌ಆರ್ ನ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಎಫ್‌ಐಆರ್ ಅಧ್ಯಯನ ಮಾಡುತ್ತಿದೆ. ಇಸಿಐಆರ್ ಪೊಲೀಸ್ ಎಫ್‌ಐಆರ್‌ಗೆ ಸಮನಾಗಿರುತ್ತದೆ. ಇದೇ ಆಧಾರದಲ್ಲಿ ಪ್ರಕರಣ ದಾಖಲಿಕೊಳ್ಳಲಾಗುತ್ತದೆ ಎಂದು ಜಾರಿ ನಿರ್ದೇಶನಾಲಯದ ಮೂಲಗಳು ತಿಳಿಸಿದೆ. ಮುಡಾ ಪ್ರಕರಣದ ಅಕ್ರಮಗಳ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಅಗತ್ಯ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಅಕ್ರಮ ಹಣ ವರ್ಗಾವಣೆ ನಿಯಂತ್ರಣ ಕಾಯಿದೆ (ಪಿಎಂಎಲ್‌ಎ) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತದೆ. ಪ್ರಕರಣ ದಾಖಲಾದ ನಂತರ ಮುಖ್ಯಮಂತ್ರಿಗಳು ಮತ್ತು ಅವರ ಕುಟುಂಬದ ಸದಸ್ಯರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದೂ ಸೇರಿದಂತೆ ಹಲವು ಕಠಿಣ ಕ್ರಮಕ್ಕೆ ಅವಕಾಶವಿದೆ. ಇದರೊಂದಿಗೆ ಮುಖ್ಯಮಂತ್ರಿ ಸೇರಿದಂತೆ ಎಲ್ಲ ಆರೋಪಿಗಳಿಗೆ ಸಮನ್ಸ್ ನೀಡಿ ವಿಚಾರಣೆ ನಡೆಸುವುದಕ್ಕೂ ಜಾರಿ ನಿರ್ದೇಶನಾಲಯಕ್ಕೆ ಅವಕಾಶವಿದೆ.

→ 4

ಸರಕಾರ ಉರುಳಿಸಲು ಬಿಜೆಪಿ 1200 ಕೋಟಿ ಸಂಗ್ರಹಿಸಿರುವ ಬಗ್ಗೆ ತನಿಖೆಯಾಗಲಿ: ಪರಂ, ಇಡಿ ತನಿಖೆಗೆ ಡಿಕೆಶಿ ಆಗ್ರಹ

ಯತ್ನಾಳ್ ಆರೋಪ ಬಿಜೆಪಿಗೆ ಉರುಳು

ಇಡಿಗೆ ದೂರು ಸಲ್ಲಿಸಲು ಸರಕಾರ ಸಿದ್ಧತೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಸಾಲು ಸಾಲು ಆರೋಪ-ಪ್ರತ್ಯಾರೋಪದ ನಡುವೆ

ಬಿಜೆಪಿಯ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಯನ್ನೇ ಮುಂದಿಟ್ಟು ಕೊಂಡು ಬಿಜೆಪಿ ವಿರುದ್ಧ ಮತ್ತೊಂದು ಅಸ್ತ್ರ ಹೂಡಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ದಾವಣಗೆರೆಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಅವರು ಕಾಂಗ್ರೆಸ್ ಸರಕಾರವನ್ನು ಕೆಡವಲು ಬಿಜೆಪಿಯು 1200 ಕೋಟಿ ರು.ಗಳನ್ನು ಎತ್ತಿಟ್ಟಿದೆ ಎನ್ನುವ ವಿವಾದಾತ್ಮಕ ಹೇಳಿಕೆಯನ್ನು ನೀಡಿದ್ದರು. ಯತ್ನಾಳ್ ಹೇಳಿಕೆಯನ್ನು ಬಿಜೆಪಿ ನಾಯಕರು ಸ್ಪಷ್ಟವಾಗಿ ತಳ್ಳಿಹಾಕಿದರೂ, ಕಾಂಗ್ರೆಸ್ ಈ ಹೇಳಿಕೆಯನ್ನು ಮುಂದಿಟ್ಟು ಕೊಂಡು ಜಾರಿ ನಿರ್ದೇಶನಾಲ ಯಕ್ಕೆ ದೂರು ನೀಡಲು ಸಿದ್ಧತೆ ನಡೆಸಿದೆ.

> ಕಾಂಗ್ರೆಸ್ ಸರಕಾರ ಬೀಳಿಸಲು 1200 ಕೋಟಿ ಮೀಸಲಿಡಲಾಗಿದೆ ಎನ್ನುವ ಯತ್ನಾಳ್ ಅವರ ಹೇಳಿಕೆ ಕುರಿತು ಯಾವ ರೀತಿಯ ಹೋರಾಟ ನಡೆಸಬೇಕು ಎಂಬ ಬಗ್ಗೆ ಪಕ್ಷದ ನಾಯಕರೊಂದಿಗೆ ಚರ್ಚಿಸಲಾಗಿದೆ. ಪೊಲೀಸ್ ಹಾಗೂ ಐಟಿಯವರಿಗೆ ದೂರು ನೀಡಲಾಗುವುದು.
> \- **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಸುಭದ್ರ ಸರಕಾರ ಅಸ್ಥಿರಗೊಳಿಸಲು ಬಿಜೆಪಿ ಮುಂದಾಗಿದೆ ಎನ್ನುವುದನ್ನು ಮುಂದಿಟ್ಟು ಕೊಂಡು ರಾಜಕೀಯ ಹೋರಾಟದೊಂದಿಗೆ, ಕಾನೂನು ಹೋರಾಟದ ಮೂಲಕ ಬಿಜೆಪಿ ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನಕ್ಕೆ ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ. ಅದರಲ್ಲಿಯೂ ಇ.ಡಿ., ಐಟಿಗೆ ದೂರು ನೀಡುವ ಮೂಲಕ, ಬಿಜೆಪಿಯನ್ನು ಮುಜು ಗರಕ್ಕೆ ಸಿಲುಕಿಸುವ ಪ್ರಯತ್ನ ನಡೆಯುತ್ತಿದೆ.

→ 4

ಜಾರಿ ನಿರ್ದೇಶನಾಲಯ ಬಳಸಿ ಚುನಾವಣಾ ಬಾಂಡ್ ಮೂಲಕ ಸುಲಿಗೆ ಪ್ರಕರಣ । ಸಚಿವೆ ಸೇರಿ ಬಿಜೆಪಿ ನಾಯಕರ ವಿರುದ್ದದ ತನಿಖೆಗೆ ತಡೆಯಾಜ್ಞೆ

ಬಾಂಡ್ ತನಿಖೆಗೆ ಹೈ ತಡೆ

ಬೆಂಗಳೂರು: ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಪಡೆಯಲು ಜಾರಿ ನಿರ್ದೇಶ ನಾಲಯ ದುರ್ಬಳಕೆ ಮಾಡಿಕೊಂಡಿರುವ ಆರೋಪದ ಮೇಲೆ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಸೇರಿದಂತೆ ಬಿಜೆಪಿ ಪ್ರಮುಖರ ವಿರುದ್ಧ ದಾಖಲಾದ ಎಫ್‌ಐಆರ್ ಸಂಬಂಧಿತ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಬಿಜೆಪಿಯ ನಳಿನ್ ಕುಮಾರ್ ಕಟೀಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ, ತನಿಖೆಗೆ ಮಧ್ಯಂತರ ತಡೆ ಯಾಜ್ಞೆ ನೀಡಿ ವಿಚಾರಣೆ ಅ.22ಕ್ಕೆ ಮುಂದೂಡಿದೆ.

ಐಪಿಸಿ ಸೆಕ್ಷನ್ 383 ಅನ್ವಯಿಸಲು ಮಾಹಿತಿದಾರರಿಗೆ ಕೃತ್ಯ ಭಯ ಉಂಟು ಮಾಡಬೇಕು. ಆಗ ಮಾತ್ರ ಸುಲಿಗೆ ಕಾಣಲಿದೆ. ಕ್ರಿಮಿನಲ್ ಕಾನೂನು ಯಾರು ಬೇಕಾದರೂ ಚಾಲನೆ ನೀಡಬಹುದು. ಆದರೆ, ಸೆಕ್ಷನ್ 384ಕ್ಕೆ ಬಾಧಿತರು ಚಾಲನೆ ನೀಡಬಹುದು. ಇಲ್ಲಿ ದೂರುದಾರರು ಯಾರು ಎಂಬುದು ಮಹತ್ವ ಪಡೆಯಲಿದೆ.

→ 4

ಸಮಾಚಾರ ಸಣ್ಣದಲ್ಲ

ಬಸ್ ಉರುಳಿ ಪ್ರಯಾಣಿಕರಿಗೆ ಗಾಯ

ಹಿರಿಯೂರು: ತಾಲೂಕಿನ ಓಬಳಾಪುರದಿಂದ ಜವನಗೊಂಡನಹಳ್ಳಿ ಮಾರ್ಗವಾಗಿ ಹಿರಿಯೂರಿಗೆ ಆಗಮಿಸುತ್ತಿದ್ದ, ಗ್ರಾಮೀಣ ಸಾರಿಗೆ ಕೆ ಎಸ್ ಆರ್ ಟಿ ಸಿ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ಓಬಳಾಪುರ ಬಳಿ ಸೋಮವಾರ ಬೆಳಗ್ಗೆ ಪಲ್ಟಿಯಯಾಗಿದ್ದು,ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಶಾಲಾ ವಿದ್ಯಾರ್ಥಿಗಳು ವೃದ್ಧರು ಸೇರಿದಂತೆ ಹಲವಾರು ಜನ ಗಾಯಗೊಂಡಿದ್ದು. ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಇನ್ಸ್‌ಪೆಕ್ಟರ್ ಕಾಳಿಕೃಷ್ಣ ಬೇಟಿ ನೀಡಿ ತನಿಖೆ ನಡೆಸುತ್ತಿದ್ದಾರೆ.

ಜಿಲ್ಲೆಯಲ್ಲಿ 13.4 ಮಿ.ಮೀ ಮಳೆ

ಚಿತ್ರದುರ್ಗ: ಭಾನುವಾರ ರಾತ್ರಿ ಸುರಿದ ಮಳೆ ವಿವರದನ್ವಯ ಚಿತ್ರದುರ್ಗ ಜಿಲ್ಲೆಯಲ್ಲಿ ಸರಾಸರಿ 13.4 ಮಿ.ಮೀ ಮಳೆಯಾಗಿದೆ. ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ 17.1 ಮಿ.ಮೀ, ಚಿತ್ರದುರ್ಗ ತಾಲ್ಲೂಕಿನಲ್ಲಿ 17.7 ಹಿರಿಯೂರು ತಾಲೂಕು 10 ಮಿ.ಮೀ, ಹೊಳಲ್ಕೆರೆ ತಾಲೂಕು 10.4 ಮಿ.ಮೀ, ಹೊಸದುರ್ಗ ತಾಲೂಕಿನಲ್ಲಿ 10.3 ಹಾಗೂ ಮೊಳಕಾಲ್ಮುರು ತಾಲೂಕಿನಲ್ಲಿ 13.6 ಮಿ.ಮೀ ಮಳೆಯಾಗಿದೆ. ಹೋಬಳಿವಾರು ಮಳೆ ವಿವರ: ಚಳ್ಳಕೆರೆ ತಾಲೂಕಿನ ಚಳ್ಳಕೆರೆಯಲ್ಲಿ 16.5 ಮಿ.ಮೀ, ನಾಯಕನಹಟ್ಟಿ 31.8 ಮಿ.ಮೀ, ಪರಶುರಾಂಪುರ 14.6 ಮಿ.ಮೀ, ತಳಕು 9.2 ಮಿ.ಮೀ ಮಳೆಯಾಗಿದೆ. ಚಿತ್ರದುರ್ಗ ತಾಲ್ಲೂಕಿನ ಚಿತ್ರದುರ್ಗದಲ್ಲಿ 9.5 ಮಿ.ಮೀ, ಭರಮಸಾಗರ 22.5 ಮಿ.ಮೀ, ಹಿರೇಗುಂಟನೂರು 33 ಮಿ.ಮೀ, ತುರುವನೂರು 15.1 ಮಿ.ಮೀ ಮಳೆಯಾಗಿದೆ. ಹಿರಿಯೂರು ತಾಲ್ಲೂಕಿನ ಹಿರಿಯೂರು 12.9 ಮಿ.ಮೀ, ಐಮಂಗಲ 9.4 ಮಿ.ಮೀ, ಧರ್ಮಪುರ 9 ಮಿ.ಮೀ, ಜವನಗೊಂಡನಹಳ್ಳಿ 9.6 ಮಿ.ಮೀ ಮಳೆಯಾಗಿದೆ. 6 ಮನೆಗಳು ಭಾಗಶಃ ಹಾನಿ: ಭಾನುವಾರ ರಾತ್ರಿ ಸುರಿದ ಮಳೆಗೆ ಹಿರಿಯೂರು ತಾಲೂಕಿನಲ್ಲಿ 1 ದೊಡ್ಡ ಜಾನುವಾರು ಹಾನಿಯಾಗಿದ್ದು, 6 ಮನೆಗಳು ಭಾಗಶಃ ಹಾನಿಯಾಗಿವೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸಚಿವರ ಜಿಲ್ಲಾ ಪ್ರವಾಸ ನಾಳೆ

ಚಿತ್ರದುರ್ಗ: ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅಕ್ಟೋಬರ್ 2 ರಂದು ಚಿತ್ರದುರ್ಗ ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ತುಮಕೂರಿನಿಂದ ರಸ್ತೆ ಮೂಲಕ ಅಂದು ಮಧ್ಯಾಹ್ನ 2.15ಕ್ಕೆ ಚಿತ್ರದುರ್ಗ ನಗರಕ್ಕೆ ಆಗಮಿಸುವ ಅವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು ಮಾರ್ಗದ ಯೋಜನೆ ಭೂ ಸ್ವಾಧೀನ ಕುರಿತು ಅಧಿಕಾರಿಗಳ ಸಭೆ ನಡೆಸುವರು. ನಂತರ ದಾವಣಗೆರೆಗೆ ತೆರಳುವರು ಎಂದು ಸಚಿವರ ಪ್ರವಾಸ ಕಾರ್ಯಕ್ರಮದಲ್ಲಿ ತಿಳಿಸಲಾಗಿದೆ.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ತೋಟಗಾರಿಕೆ ಇಲಾಖೆಯಡಿ ಚಿತ್ರದುರ್ಗ ತಾಲೂಕಿನ ರೈತರಿಗೆ 2024-25ನೇ ಸಾಲಿಗೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಯೋಜನೆಗಳಲ್ಲಿ ಸಹಾಯಧನ ಪಡೆಯಲು ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.15 ಕೊನೆಯ ದಿನವಾಗಿದೆ. ತೋಟಗಾರಿಕೆ ಇಲಾಖೆಯಡಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (ರಾಷ್ಟ್ರೀಯ ತೋಟಗಾರಿಕೆ ಮಿಷನ್), ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ ಯೋಜನೆ), ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗಳಿಗೆ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು. ಈ ಮೇಲ್ಕಂಡ ಯೋಜನೆಗಳಿಗೆ ಆಯಾ ಯೋಜನೆಗಳಲ್ಲಿ ನಿಗಧಿಪಡಿಸಿದ ಮಾರ್ಗಸೂಚಿಯಂತೆ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆ, ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಚಿತ್ರದುರ್ಗ ತಾಲ್ಲೂಕು ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಿ.

ಕೇಸರಿ ಬಣ್ಣದ ಕಲರವ | ಹರಿದು ಬಂದ ಜನಸಾಗರ | ಯತ್ನಾಳ್, ಪ್ರತಾಪ್ ಸಿಂಹ, ಸಿದ್ದೇಶ್ವರ, ರೇಣುಕಾಚಾರ್ಯ ಭಾಗಿ

ಹಿಂದೂ ಮಹಾ ಗಣಪತಿ ವಿಸರ್ಜನಾ ಮೆರವಣಿಗೆ

ಹರಿಹರ: ನಗರದಲ್ಲಿ ಭಾನುವಾರ ಕೇಸರಿ ಬಣ್ಣದ ಕಲರವ, ಡಿಜೆ ಹಾಡಿಗೆ ಹೆಜ್ಜೆ ಹಾಕಿದ ಹಿಂದು ಭಕ್ತರು ರಸ್ತೆಯ ಇಕ್ಕೆಲಗಳಲ್ಲಿ ಜನ ಸಾಗರ ಶೋಭಾಯಾತ್ರೆಯನ್ನು ಸೊಬಗನ್ನು ನೋಡಲು ಕುಟುಂಬ ಸಮೇತರಾಗಿ ಬಂದ ಜನರು ಬಿಸಿಲು ಕಡಿಮೆಯಾದಂತೆ ಹರಿದು ಬಂದ ಜನಸಾಗರ.

ಶೋಭಾಯಾತ್ರೆಯಲ್ಲಿ ಹಿಂದು ಹುಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಸಂಸದರಾದ ಪ್ರತಾಪ್ ಸಿಂಹ, ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ, ಶಾಸಕರಾದ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಎಚ್.ಎಸ್. ಶಿವಶಂಕರ್, ಮುಖಂಡರಾದ ಗಾಯಿತ್ರಿ ಸಿದ್ದೇಶ್ವರ, ಎಸ್.ಎಂ.ವೀರೇಶ್ ಹನಗವಾಡಿ, ನಂದಿಗಾವಿ ಶ್ರೀನಿವಾಸ್, ಚಂದ್ರಶೇಖರ್ ಪೂಜಾರ್ ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದರು.

ಹಿಂದೂ ಮಹಾ ಗಣಪತಿ ವಿಸರ್ಜನಾ ಮೆರವಣಿಗೆಯ ಅಂಗವಾಗಿ ಹಿಂದೂ ಜಾಗರಣ ವೇದಿಕೆಯಿಂದ ಹಮ್ಮಿಕೊಂಡಿದ್ದ 5ನೇ ವರ್ಷದ ಗಣೇಶನ ವಿಸರ್ಜನಾ ಕಾರ್ಯಕ್ರಮದ ನಿಮಿತ್ತ ಬೆಳಗ್ಗೆ 9.30ಕ್ಕೆ ನಡೆದ ವಿಸರ್ಜನಾ ಪೂಜೆಯಲ್ಲಿ ವಾಲ್ಮೀಕಿ ಪೀಠದ ಪ್ರಸನ್ನಾನಂದ ಶ್ರೀ ಹಾಗೂ ಪುಣ್ಯಕೋಟಿ ಮಠದ ಜಗದೀಶ್ವರ ಶ್ರೀಗಳು ಶಾಸಕ ಬಿ.ಪಿ.ಹರೀಶ್‌ಭಾಗಿಯಾಗಿ ಶುಭಹಾರೈಸಿದರು. ನಂತರ ಶಾಸಕ ಬಿ.ಪಿ.ಹರೀಶ್ ಗಣೇಶ ಮೂರ್ತಿ ಹೊತ್ತ ಟ್ರ್ಯಾಕ್ಟರ್‌ನ್ನು ಚಾಲನೆ ಮಾಡುವ ಮೂಲಕ ಶೋಬಾಯಾತ್ರೆ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಿದರು.

ಬೆಳಗ್ಗೆ 12.30ಕ್ಕೆ ಆರಂಭವಾದ ಮೆರವಣಿಗೆಯು ನಗರದ ಪೇಟೆ ಆಂಜನೇಯ ದೇವಸ್ಥಾನರಸ್ತೆ, ಹಳೇ ಪಿಬಿ ರಸ್ತೆ, ಗಾಂಧಿ ವೃತ್ತ, ಮುಖ್ಯರಸ್ತೆ, ಕಿತ್ತೂರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆ ಹಾಗೂ ದೇವಸ್ಥಾನದ ರಸ್ತೆಯ ಮೂಲಕ ಸಾಗಿ ಗಣೇಶನನ್ನು ತುಂಗಭದ್ರ ನದಿಯಲ್ಲಿ ರಾತ್ರಿ 11 ಗಂಟೆಗೆ ವಿಸರ್ಜನೆ ಮಾಡಲಾಯಿತು.

ನಗರದ ಪ್ರಮುಖ ರಸ್ತೆಯ ವಿಭಜಕ, ಕಟ್ಟಡ ಮೇಲೆ,ಎಲ್ಲಿ ನೋಡಿದರಲ್ಲಿ ಜನವೋಜನ ಹರಿಹರ ತಾಲೂಕು ಸೇರಿದಂತೆ ಪಕ್ಕದ ದಾವಣಗೆರೆ, ಹೊನ್ನಾಳ್ಳಿ, ರಾಣೇಬೆನ್ನೂರು, ಹರಪನಹಳ್ಳಿ ಯಿಂದ ಜನರು ಗಣೇಶ ವಿಸರ್ಜನೆಯ ಶೋಭಾಯಾತ್ರೆ ಮೆರವಣಿಗೆಯನ್ನು ಕಣ್ತುಂಬಿಕೊಂಡರು.

ಶೋಭಾಯಾತ್ರೆಯಲ್ಲಿ ಹಿಂದು ಹುಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಸಂಸದರಾದ ಪ್ರತಾಪ್ ಸಿಂಹ, ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ, ಶಾಸಕರಾದ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಎಚ್.ಎಸ್.ಶಿವಶಂಕರ್ ಭಾಗಿ.

ನಗರದ ಅಂಗಡಿಗಳು ಬಂದ್ ಮಾಡುವ ಮೂಲಕ ಶೋಭಾಯಾತ್ರೆಗೆ ವ್ಯಾಪಾರಸ್ಥರು ಸಹಕಾರ ನೀಡಿದರು. ನಗರದಲ್ಲಿ ವ್ಯಪಾರ ವಹಿವಾಟು ಸ್ತಬ್ದವಾಗಿತ್ತು ಬಹುತೇಕ ಹೋಟೆಲ್‌ಗಳು ಸಹ ಬಾಗಿಲು ಹಾಕಿದ್ದವು. ದಾರಿಯೂದ್ದಕ್ಕೂ ಅನ್ನ ಸಂತರ್ಪಣೆ, ತಂಪು ಪಾನೀಯ, ಮಜ್ಜಿಗೆ ವಿತರಣೆಯನ್ನು ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಮಾಡುತ್ತಿದ್ದರು. ಗಾಂಧಿ ವೃತ್ತದಿಂದ ಪಕ್ಕಿರಸ್ವಾಮಿ ಮಠದವರೆಗೆ ಜನಸಾಗರದ ಜಾತ್ರೆ ಕಂಡು ಬಂತು.

ಕೇಸರಿ ಶಾಲು ಮತ್ತು ಪೇಟ: ಮೆರವಣಿಗೆ ಆಗಮಿಸಿದ್ದ ಬಹುತೇಕರು ಕೊರಳಲ್ಲಿ ಕೇಸರಿ ಶಾಲು ಮತ್ತು ಪೇಟವನ್ನು ಹಾಕಿಕೊಳ್ಳುವುದರ ಮೂಲಕ ಶೊಭಾಯಾತ್ರೆಯು ಸಂಪೂರ್ಣ ಕೇಸರಿ ಮಯವಾಗಿತ್ತು. ಜನರನ್ನು ನಿಯಂತ್ರಿಸಲು ಪೋಲಿಸರು ಅಲ್ಲಲ್ಲಿ ಬ್ಯಾರಿಕೇಡ್‌ನ್ನು ಹಾಕಿ ಭದ್ರತೆ ಒದಗಿಸಿದರು.

ಬಂಟಿಂಗ್ಸ್‌ಗಳ ಕಾರುಬಾರು: ನಗರದ ಮುಖ್ಯರಸ್ತೆ, ಗಾಂಧಿ ವೃತ್ತ, ರಾಣಿಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆ, ಶೋಭಾ ಟಾಕೀಸ್ ರಸೆಯಲ್ಲಿ ಕೇಸರಿ ಬಂಟಿಕ್ಸ ಮೂಲಕ ನಗರ ಸಂಪೂರ್ಣವಾಗಿ ಕೇಸರಿ ಮಯವಾಗಿತ್ತು.

4 ಡಿಜೆ ಸೌಂಡ್‌ಗೆ ಹೆಜ್ಜೆ: ಶೊಭಾಯಾತ್ರೆಯಲ್ಲಿ ಮಹಿಳೆಯರಿಗೆ ಹಾಗೂ ಪುರುಷರಿಗಾಗಿ ಪ್ರತ್ಯೇಕ ಡಿಜೆಯನ್ನು ವ್ಯವಸ್ಥೆ ಮಾಡಲಾಗಿತ್ತು. ಮಹಿಳೆಯರು ಹಾಗೂ ಕಾಲೇಜು ವಿದ್ಯಾರ್ಥಿಗಳು ಮತ್ತು ಪುಟ್ಟ ಮಕ್ಕಳು ಹಾಡಿಗೆ ತಕ್ಕಂತೆ ಹೆಜ್ಜೆ ಹಾಕಿದ್ದು ನೋಡುಗರ ಕಣ್ಣನ ಸೆಳೆಯಿತು.

ಆಕರ್ಷಣೆ ಕೇಂದ್ರ: ಶಿವನ ಮೂರ್ತಿ, ಛತ್ರಪತಿ ಶಿವಾಜಿ, ಸಂಗೊಳ್ಳಿ ರಾಯಣ್ಣ, ಡಾ.ಬಿ.ಆರ್.ಅಂಬೇಡ್ಕರ್, ಆಂಜನೇಯ ಮೂರ್ತಿ, ಪ್ರಭು ಶ್ರೀರಾಮ, ನೋಡಲು ಹಾಗೂ ಸೇಲ್ವಿ ಪೋಟೋ ತೆಗೆಸಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ನೀರು ಮತ್ತು ಮಜ್ಜಿಗೆ: ಹಿಂದೂ ಮಹಾ ಗಣಪತಿ ಸಮಿತಿಯವರು ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಾರ್ವಜನಿಕರಿಗೆ ನೀರಿನ ಪ್ಯಾಕೆಟ್, ತಂಪು ಪಾನೀಯ ಹಾಗೂ ಮಜ್ಜಿಗೆಯನ್ನು ಮೆರವಣಿಗೆಯ ಮಾರ್ಗದುದ್ದಕ್ಕೂ ವಿತರಣೆಯ ವ್ಯವಸ್ಥೆ ಮಾಡಲಾಗಿತ್ತು.

ಕೊಲೆ ಆರೋಪಿಗೆ ಹಾಲಿನ ಅಭಿಷೇಕ: ಕೊಲೆ ಆರೋಪ ಹೊತ್ತು ಜೈಲ್ಲಿನಲ್ಲಿರುವ ಖ್ಯಾತ ಚಿತ್ರನಟ ದರ್ಶನ್ ಅವರ ಕೆಲವು ಅಭಿಮಾನಿಗಳು ಮೆರವಣಿಗೆಯಲ್ಲಿ ಡಿಜೆ ಹಾಡಿಗೆ ಹೆಜ್ಜೆ ಹಾಕುತ್ತಾ ದರ್ಶನ್ ಭಾವಚಿತ್ರಕ್ಕೆ ಹಾಲಿನ ಅಭಿಷಕ ಮಾಡಿದ ದೃಷ್ಯ ಕಂಡು ಬಂತ್ತು.

ಟ್ರಾಫಿಕ್ ಜಾಮ್: ಮೆರವಣಿಗೆ ಸಾಗುವ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಆಯಿತು. ಸಂಚಾರ ನಿಯಂತ್ರಣ ಮಾಡಿ ಪೊಲೀಸ್ ಸಿಬ್ಬಂದಿ ಸುಸ್ತಾದರು. ಸಂಘ, ಸಂಸ್ಥೆಗಳವರು ಉಪಹಾರ, ನೀರಿನ ವ್ಯವಸ್ಥೆ ಮಾಡಿದ್ದರು. ರಾತ್ರಿ ತುಂಗಭದ್ರ ನದಿಯಲ್ಲಿ ಗಣೇಶ ಮೂರ್ತಿ ವಿಸರ್ಜನೆ ಮಾಡಲಾಯಿತು.

ಬಿಗಿ ಪೊಲೀಸ್ ಬಂದೋಬಸ್ತ್: ಡಿವೈಎಸ್‌ಪಿ-1,ಸಿಪಿಐ-5, ಪಿಎಸೈ-18, ಎಎಸ್‌ಐ-40, ಪಿಸಿ-150, ಮಹಿಳಾ ಪಿಸಿ-20, ಗೃಹ ರಕ್ಷಕದಳದ ಸಿಬ್ಬಂದಿ-50, ಕೆಎಸ್‌ಆರ್‌ಪಿ-1 ತುಕಡಿ, ಡಿಎಆರ್-1 ತುಕಡಿ ಹಾಗೂ 35ಕ್ಕೂ ಹೆಚ್ಚು ಸಿಸಿ ಕ್ಯಾಮರ, ಡ್ರೋಣ್-1 ಮತ್ತು 10ಕ್ಕೂ ಹೆಚ್ಚು ವೀಡಿಯೋಚಿತ್ರೀಕರಣ ಮಾಡುವ ವ್ಯವಸ್ಥೆ ಮಾಡಲಾಗಿತ್ತು.

ಹಿಂದೂ ಮಹಾ ಗಣಪತಿ ಸಮಿತಿಯ ಅಧ್ಯಕ್ಷ ಬಸವನಗೌಡ, ರಟ್ಟಿಹಳ್ಳಿ ಮಂಜುನಾಥ, ಸ್ವಾತಿ ಹನುಮಂತ, ರಾಘವೇಂದ್ರ ಉಪಾಧ್ಯ, ಶಿವಪ್ರಕಾಶ್ ಶಾಸ್ತ್ರಿ, ಚಂದ್ರ ಕಾಂತಗೌಡ, ಮಹೇಶ್, ನಿತ್ಯಾನಂದ, ರಾಜು ರೋಖಡೆ, ಚಂದನ್ ಮುರ್ಕಲ್, ಶಿವುಕುಮಾರ್, ಕಾರ್ತಿಕ್, ಆದ್ವೈತ ಶಾಸ್ತ್ರೀ, ರವಿ ರಾಯ್ಕರ್, ಗಿರೀಶ್‌ಗೌಡ ಹಳ್ಳದಕೇರಿ, ಮಹೇಶ್, ಕಾರ್ತಿಕ್, ಹಳ್ಳದಕೇರಿ ಗಿರೀಶ್‌ಗೌಡ, ಅರ್ಜುನ, ಮನೋಜ್ ಅಜೀತ್ ಸಾವಂತ್, ಸಂತೋಷ್ ಗುಡಿಮನಿ, ರವಿ ಸಿಂಗ್, ಅಜಿತ್ ಸಾವಂತ್, ತುಳಜಪ್ಪ ಭೊತೆ, ಲಿಂಗಾರಜ್, ಚಂದ್ರಶೇಖರ್ ಪೂಜಾರ್, ನಗರಸಭಾ ಸದಸ್ಯರಾದ ವಿಜಯಕುಮಾರ್, ಅಶ್ವಿನಿ ಕೃಷ್ಣ. ಪಿ.ಎನ್ ವಿರುಪಾಕ್ಷಿ, ಸೇರಿದಂತೆ ಸಹಸ್ರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಡಿಜೆಗೆ ಮಹಿಳೆಯರು ಹೆಜ್ಜೆ

ಮೆರವಣಿಗೆ ಉದ್ದಕ್ಕೂ ಡಿಜೆ ಹಾಡಿಗೆ ಯುವಕ ಯುವತಿಯರು ಮಹಿಳೆಯರು ಹೆಜ್ಜೆ ಹಾಕಿದರು ಡಿಜೆ ಹಾಡು ಹಾಕುತ್ತಿದ್ದಂತೆ ಯುವ ಸಮೂಹ ಕುಣಿದು ಕುಪ್ಪಳಿಸುತ್ತಿತ್ತು, ಬೆಳಿಗ್ಗೆ 12ಕ್ಕೆ ಆರಂಭವಾದ ಡಿಜೆ ಹಾಡುಗಳು ಗಣೇಶ ವಿಸರ್ಜನೆವರೆಗೂ ನೃತ್ಯಕ್ಕೆ ಪ್ರೇರಣೆ ನೀಡಿತ್ತು. ಕನ್ನಡ, ಹಿಂದಿ, ಸಿನಿಮಾ ಹಾಡುಗಳಿಗೆ ಯುವ ಸಮೂಹವು ನೃತ್ಯ ಹಾಡಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ನೃತ್ಯ ಪ್ರದರ್ಶಿಸುತ್ತಾ ಸಾಗಿದ್ದರು.

ಅನ್ನಸಂತರ್ಪಣೆ ವ್ಯವಸ್ಥೆ

ಭಕ್ತರಿಗೆ ಪೇಟೆ ಆಂಜನೇಯ ದೇವಸ್ಥಾನ. ಮಹಜೆನಹಳ್ಳಿ ಊರಮ್ಮ ದೇವಸ್ಥಾನ,ಹಳೇ ಪಿ.ಬಿ.ರಸ್ತೆ, ಕಸಬಾ ಊರಮ್ಮ ದೇವಸ್ಥಾನ, ನವರತ್ನ ಜುವೇಲರಿ, ಶಿರಡಿ ಸಾಯಿಬಾಬಾ ಮೋದಿರದ ಪಟೇಲ್ ಟ್ರಷ್ಟ್ ಸೇರಿದಂತೆ ವಿವಿದ ಸಂಘಟನೇಗಳು ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ನಾಡು ನುಡಿ ಭಾಷೆ ಸಾಹಿತ್ಯ ಸಂಸ್ಕೃತಿಗೆ ಒತ್ತು ನೀಡಿ

ಚಳ್ಳಕೆರೆ: ಸಾಹಿತ್ಯ ಸೃಷ್ಟಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕನ್ನಡ ನಾಡು ನುಡಿ ಭಾಷೆ ಸಾಹಿತ್ಯ ಸಂಸ್ಕೃತಿ ಗೆ ಒತ್ತು ನೀಡಬೇಕು ಎಂದು ಸಂಸ್ಥಾಪಕರಾದ ದಯಾ ಪುತ್ತುರ್ಕರ್ ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ ಪತ್ರಿಕಾ ಭವನದಲ್ಲಿ ಚಿನ್ಮೂಲಾದ್ರಿ, ಸಾಹಿತ್ಯ ವೇದಿಕೆ ವತಿಯಿಂದ ಹದಿನೆಂಟನೆಯ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ನಂತರ ಎಲ್ಲ ಜಾತಿ ಧರ್ಮಗಳನ್ನು ಮೀರಿದ್ದು ಈ ಸಾಹಿತ್ಯ ಅನೇಕ ಹಿರಿಯ ಸಾಹಿತಿಗಳು ಈ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದಾರೆ ಎಂದು ಬಿ. ಕೆ ರಹಮತ್ ಉಲ್ಲಾ ರವರು ಸ್ಮರಿಸಿದರು. ಖ್ಯಾತ ವಕೀಲರು ಹಾಗೂ ವೇದಿಕೆಯ ಗೌರವಾಧ್ಯಕ್ಷ ಬಿ.ಕೆ ರಹಮತ್ ವುಲ್ಲ ಮತ್ತು ವೇದಿಕೆ ಮೇಲಿರುವ ಎಲ್ಲ ಗಣ್ಯರಿಂದ ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಈ ವಾರ್ಷಿಕೋತ್ಸವ ಸಮಾರಂಭದಲ್ಲಿ ಚಿನ್ಮುಲಾದ್ರಿ ಸಿರಿ ಶಿಕ್ಷಕ ಪ್ರಶಸ್ತಿಯನ್ನು ಡಾ.ಎಚ್.ಎಸ್ ಶಫಿ ಉಲ್ಲಾ ರವರಿಗೆ ನೀಡಿ ಸನ್ಮಾನಿಸಲಾಯಿತು ಹಾಗೂ ಈ ವರ್ಷದ ವೇದಿಕೆ ಸಾಧಕರು ಎಂಬ ಪ್ರಶಸ್ತಿಯನ್ನು ಸತ್ಯ ಪ್ರಭಾ ವಸಂತ್ ಕುಮಾರ್ ರವರಿಗೆ ನೀಡಿ ಗೌರವಿಸಲಾಯಿತು.

ಪತ್ರಿಕಾ ಭವನದಲ್ಲಿ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ವತಿಯಿಂದ ಹದಿನೆಂಟನೆಯ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು ಎಲ್ಲರಿಗೂ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆದ ಡಾ.ಕೆ.ಎಂ ವೀರೇಶ್, ಶೋಭಾ ಮಲ್ಲಿಕಾರ್ಜುನ್, ಪ್ರಕಾಶಕರು ಆದ ರಾಜು.ಎಸ್ ಸೂಲೇನ ಹಳ್ಳಿ, ದಲಿತ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರು ಆದ ಶ್ರೀ ಶಿವಮೂರ್ತಿ.ಟಿ ಕೋಡಿಹಳ್ಳಿ, ಡಾ.ನವೀನ್ ಸಜ್ಜನ್, ಶಿವಾನಂದ್ ಬಂಡೆ ಮೆಗಳಹಳ್ಳಿ, ವಿನಾಯಕ್, ಕೆ. ಟಿ ಶಾಂತಮ್ಮ, ಕೆ.ಎಸ್ ತಿಪ್ಪಮ್ಮ, ಸತೀಶ್ ಕುಮಾರ್, ಮುದ್ದು ರಾಜ್,ಪ್ರವೀಣ್ ,ವೀರೇಶ್, ಶಿವರುದ್ರಪ್ಪ, ಸಾದತ್, ಹಿರಿಯ ಸಾಹಿತಿಗಳು ಕೊರ್ಲ ಕುಂಟೆ ತಿಪ್ಪೇಸ್ವಾಮಿ, ಸುಮಾ ರಾಜ್ ಶೇಖರ್, ಮೀರಾ ನಾಡಿಗ್, ಜಯದೇವ್ ಮೂರ್ತಿ, ಶಾರದಾ ಜೈರಾಮ್, ತಿಪ್ಪೀರಮ್ಮ, ಉಷಾ ರಾಣಿ, ರಾಜೇಶ್ವರಿ ಶ್ರೀಧರ್, ನಾಗೇಂದ್ರಪ್ಪ,ಬಸವರಾಜ್ ಹರ್ತಿ, ನಿರ್ಮಲ,ಮೆಹಬೂಬ್ ,ಸವಿತಾ ಮುದ್ಗಲ್, ಕವಿಗಳು ಉಪಸ್ಥಿತರಿದ್ದರು.

ರಾಜಕಾರಣದಲ್ಲಿ ಗಟ್ಟಿಯಾಗಿ ನಿಲ್ಲುವೆ

ಹೊಸದುರ್ಗ: ತಾಲೂಕಿನ ರಾಜಕಾರಣದಲ್ಲಿ ಗಟ್ಟಿಯಾಗಿ ನಿಲ್ಲುತ್ತೇನೆ. ವಾರದಲ್ಲಿ 3 ದಿನ ತಾಲೂಕಿನಲ್ಲಿದ್ದು ಜನರ ಪರವಾಗಿ ಕೆಲಸ ಮಾಡುತ್ತೇನೆ. ಜನರ ಪ್ರೀತಿ ವಿಶ್ವಾಸ ಗಳಿಸುವಂತೆ ಜನಸೇವೆ ಮಾಡುತ್ತೇನೆ. ನಂತರ ತಾಲೂಕಿಗೆ ನಾನು ಬೇಕಾ, ಬೇಡವ ಎಂಬುದನ್ನು ಜನರೇ ನಿರ್ಣಯಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಕೆ.ಎಸ್.ನವೀನ್ ತಿಳಿಸಿದರು.

ಪಟ್ಟಣದ ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಸೋಮವಾರ ನಡೆದ ಅವರ ಅಭಿಮಾನದ ಅಪ್ಪುಗೆಯ 50ನೇ ವರ್ಷದ ಸುವರ್ಣ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿ, ಇದೊಂದು ನನ್ನ ಜೀವನದಲ್ಲಿ ಅತ್ಯಂತ ಸಂತೋಷ ಹಾಗೂ ಆಶ್ಚರ್ಯವನ್ನುಂಟು ಮಾಡಿದ ಕಾರ್ಯಕ್ರಮ. ಏಕೆಂದರೆ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ನನ್ನ ಹುಟ್ಟುಹಬ್ಬ ಆಚರಿಸಿಕೊಂಡಿರುವುದು. ತಾಲೂಕಿನ ಜನರೊಂದಿಗೆ ನಿರಂತರವಾಗಿ ಹೆಚ್ಚಿನ ಒಡನಾಟವಿದೆ. ನಿಮ್ಮ ಈ ಅಪ್ಪುಗೆ ಇಡೀ ತಾಲೂಕಿನ ಜನರು ಒಪ್ಪಿಕೊಂಡಂತಾಗಿದೆ. ಜನರ ಸಮಸ್ಯೆ ಏನಿದೆ ಎಂಬುದು ನನಗೆ ಗೊತ್ತಿದೆ. ನಾನು ಸಾರ್ವಜನಿಕ ಸೇವೆಗೆ ಜೀವನ ಮುಡುಪಾಗಿಟ್ಟು ಕಳೆದ 15 ವರ್ಷಗಳಿಂದಲೂ ಹಿಂದುತ್ವದ ಮೇಲೆ ನಂಬಿಕೆ ಇಟ್ಟಿರುವ ಬಿಜೆಪಿಯಲ್ಲಿ ರಾಜಕೀಯ ಭವಿಷ್ಯ ರೂಪಿಸಿಕೊಂಡಿದ್ದೇನೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ರೈತ ಮೋರ್ಚಾ ಪ್ರದಾನ ಕಾರ್ಯದರ್ಶಿ, ಬುರುಡೆಕಟ್ಟೆ ರಾಜೇಶ್, ಬಿಜೆಪಿ ಮಂಡಲದ ಅಧ್ಯಕ್ಷ ಗೂಳಿಹಟ್ಟಿ ಜಗದೀಶ್, ಪ್ರಧಾನ ಕಾರ್ಯದರ್ಶಿ, ನಾಯಿಗೆರೆ ಜಗದೀಶ್, ಪುರಸಭೆ ಅಧ್ಯಕ್ಷೆ ರಾಜೇಶ್ವರಿ ಆನಂದ್, ಉಪಾಧ್ಯಕ್ಷೇ ಗೀತಾ ಗಜೇಂದ್ರ, ಅಭಿಮಾನಿಗಳು ಹಾಜರಿದ್ದರು.

ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ನೀಡಿ: ಶಾಸಕ

ಹೊಳಲ್ಕೆರೆ: ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ನೀಡಿ ಮುಂದಿನ ಭವಿಷ್ಯ ರೂಪಿಸುವ ಹೊಣೆಗಾರಿಕೆ ಶಿಕ್ಷಕರುಗಳ ಮೇಲಿದೆ ಎಂದು ಶಾಸಕ ಡಾ.ಎಂ.ಚಂದ್ರಪ್ಪ ತಿಳಿಸಿದರು.

ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಅಕ್ಷರ ದಾಸೋಹ, ಅಜೀಂ ಪ್ರೇಂಜಿ ಫೌಂಡೇಷನ್ ವತಿಯಿಂದ ಪಟ್ಟಣದ ಸಂವಿಧಾನ ಸೌಧದಲ್ಲಿ ತಾಲೂಕಿನ ಎಲ್ಲಾ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನಗಳ ಕಾಲ ನೀಡುವ ಪೌಷ್ಠಿಕಾಂಶ ಆಹಾರ ವಿತರಣೆಗೆ ಚಾಲನೆ ನೀಡಿ ಮಾತನಾಡಿದರು.

ಮಕ್ಕಳಿಗೆ ಆರು ದಿನಗಳ ಕಾಲ ಮೊಟ್ಟೆ ಮತ್ತು ಬಾಳೆಹಣ್ಣು ನೀಡುವ ರಾಜ್ಯ ಸರಕಾರದ ಯೋಜನೆ ಅತ್ಯುತ್ತಮವಾದುದು. ಈಗಾಗಲೆ ಸರ್ಕಾರ ಮಕ್ಕಳಿಗೆ ಪಠ್ಯ ಪುಸ್ತಕ, ಶೂ, ಸಾಕ್ಸ್ ನೀಡುತ್ತಿದೆ. ಸರಕಾರದಿಂದ ಸಿಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ತಂದೆ-ತಾಯಿ, ಗುರು-ಹಿರಿಯರು ಹಾಗೂ ನೀವುಗಳು ಓದಿದ ಶಾಲೆಗೆ ಗೌರವ ತರುವ ರೀತಿಯಲ್ಲಿ ನಡೆದುಕೊಳ್ಳಬೇಕು. ಪಟ್ಟಣದಲ್ಲಿ ಗುಣಮಟ್ಟದ ಶಾಲಾ-ಕಾಲೇಜು, ಸ್ಟೇಡಿಯಂ, ಒಳಾಂಗಣ ಕ್ರೀಡಾಂಗಣ, ಈಜುಕೊಳ ನಿರ್ಮಿಸಲಾಗಿದೆ. ಸರಕಾರದ ಎಲ್ಲಾ ಯೋಜನೆಗಳು ನಿಮಗೆ ತಲುಪಲಿ. ಮಕ್ಕಳ ಮನಸ್ಸಿಗೆ ನಾಟುವ ರೀತಿಯಲ್ಲಿ ಪಾಠ ಹೇಳಿಕೊಡುವಂತೆ ಶಾಸಕ ಡಾ.ಎಂ.ಚಂದ್ರಪ್ಪ ಶಿಕ್ಷಕರುಗಳಿಗೆ ಸೂಚಿಸಿದರು.

ಪುರಸಭೆ ಸದಸ್ಯರುಗಳಾದ ಆರ್.ಎ. ಅಶೋಕ್, ಸುಧಾ ಬಸವರಾಜ್, ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಶ್ವನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ಶ್ರೀನಿವಾಸ್, ವಿವಿಧ ಇಲಾಖೆ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನಗಳ ಕಾಲ ನೀಡುವ ಪೌಷ್ಠಿಕಾಂಶ ಆಹಾರ ವಿತರಣೆಗೆ ಗಣ್ಯರು ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸುರು ಸೇನೆ ತಾಲೂಕ್ ಸಮಿತಿ, ಕಸಬಾ ಹೋಬಳಿ ಶಿವಗಂಗಾನಾಳ್ ಗ್ರಾಮದಲ್ಲಿ ರೈತ ಸಂಘ ಉದ್ಘಾಟನೆಯನ್ನು ರಾಜ್ಯ ಅಧ್ಯಕ್ಷರಾದ ಹುಚ್ಚವ ನಹಳ್ಳಿ ಮಂಜುನಾಥ್ ನೆರವೇರಿಸಿದರು. ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ರವಿಕುಮಾರ. ಯಲೊದಹಳ್ಳಿ ಪ್ರಭಾಕರ್ ಜೆಕೆಹಳ್ಳಿ ಆಂಜನೇಯ ಎನ್ ಗಾಣದ ಕಟ್ಟೆ ಹನುಮಂತಪ್ಪ ಪೀರಾ ನಾಯ್ಕ್ ಕುಮಾರ್ ಹಿರೇಕಲೂರು ಬಸವರಾಜ್ ಮರಿಯಪ್ಪ ನಲ್ಲೂರು ಮಂಜು ರಾಮಚಂದ್ರಪ್ಪ ಶಿವ ಗಂಗಾನಾಳ್ ಶರಣಮ್ಮ ಶಿವಣ್ಣ ಮೂಡಲಗಿರಿಯಪ್ಪ ಪಾಂಡು ಉಪಸ್ಥಿತರಿದ್ದರು

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLMGL00509074 1. ದಾವೂದ್ ಹಕೀಮ್ 2. ಸೌಲತ್	ಡೋರ್ ನಂ. 1/385/2, ಸರ್ವೆ ನಂ. 414/9, ಸಂದೂರ್ ಗ್ರಾಮ ಮತ್ತು ಅಂಚೆ, ಇಂದಿರಾನಗರ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ, ಉಡುಪಿ - 574104, ಕರ್ನಾಟಕ	03.06.2024	ದಿನಾಂಕ 10.09.2024 ರಂತೆ ರೂ. 31,83,372.58/- (ರೂಪಾಯಿ ಮೂವತ್ತ ಒಂದು ಲಕ್ಷ ಎಂಬತ್ತ ಮೂರು ಸಾವಿರದ ಮುನ್ನೂರ ಎಪ್ಪತ್ತ ಎರಡು ಮತ್ತು ಪೈಸೆ ಐವತ್ತ ಎಂಟು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಉಡುಪಿ
ಅಧಿಕೃತ ಅಧಿಕಾರಿ

ಖಾಸಗಿ ಕಂಪನಿಗೆ ಪೊಲೀಸರ ರಕ್ಷಣೆ ಏಕೆ?

ರೈತರಿಗೆ ಬೆದರಿಕೆ ಹಾಕುವ ತಹಸೀಲ್ದಾರ್ | ಖಾಸಗಿ ಕಂಪನಿ ರಕ್ಷಣೆಗೆ 30 ಪೊಲೀಸರ ನಿಯೋಜನೆ

ಸಂದೀಪ ಚಿಕ್ಕಮಲ್ಲನಾಲೆ, ಜಗಳೂರು

ದಾವಣಗೆರೆ ಜಿಲ್ಲಾಡಳಿತ ಹಾಗೂ ಜಗಳೂರು ತಾಲೂಕು ಆಡಳಿತ ಸೇರಿದ್ದಂತೆ ಪೊಲೀಸ್ ಇಲಾಖೆ ಖಾಸಗಿ ವಿಂಡ್ ಫ್ಯಾನ್ ಹಾಗೂ ಸೋಲಾರ್ ಖಾಸಗಿ ಕಂಪನಿಗಳ ಬೆನ್ನಿಗೆ ನಿಂತು ರಕ್ಷಣೆ ನೀಡುತ್ತಿದೆಯಾ ಎಂದು ಅನುಮಾನ ಮೂಡಿದೆ.

ಜಗಳೂರು ತಾಲೂಕಿ ಕಮಂಡಲಗೊಂದಿ ಗ್ರಾಮದ ಹೊರವಲಯದಲ್ಲಿ ಕ್ಲೀನ್ ಮ್ಯಾಕ್ಸ್ ಖಾಸಗಿ ಕಂಪನಿಯ ಸೋಲಾರ್ ಅಳವಡಿಸಿದ್ದು, ಉತ್ಪಾದನೆಯಾದ ವಿದ್ಯುತ್ ಬೇರೆಡೆಗೆ ಸಪ್ಲೆ ಮಾಡಲು ಸಾಲೇಹಳ್ಳಿ ಸಿದ್ದಿಹಳ್ಳಿ, ಹಿರೇಮಲ್ಲನಹೊಳೆ ವ್ಯಾಪ್ತಿಯಲ್ಲಿ ಬೃಹತ್ ವಿದ್ಯುತ್ ಗೋಪುರಗಳ ಮೂಲಕ ವಿದ್ಯುತ್ ಸಾಗಿಸುವ ಸಲುವಾಗಿ ಲೈನ್ ಎಳೆಯುತ್ತಿದ್ದು, ಇದಕ್ಕೆ ಈ ಭಾಗದ ಹಲವು ರೈತರು, ಯುವಕರು ವಿರೋಧವಿದ್ದು, ಲೈನ್ ಹೋಗಿರುವ ರೈತರ ಭೂಮಿಗೆ ನ್ಯಾಯಯುತ ಪರಿಹಾರ ನೀಡದೆ ಒಬ್ಬರಿಗೊಂದು ಪರಿಹಾರ ಇನ್ನೊಬ್ಬರಿಗೊಂದು ಪರಿಹಾರ ನೀಡಿ ಕಂಪನಿಯ ಮೋಸ ಮಾಡುತ್ತಿದ್ದು, ಈ ಕುರಿತು ಸ್ಥಳಿಯರು ಕಾಮಗಾರಿ ನಿಲ್ಲಿಸುವಂತೆ ಪ್ರತಿಭಟನೆ ಮಾಡಿದರು.

ಈ ವೇಳೆ ಪೊಲೀಸ್‌ನವರು ಮಧ್ಯ ಪ್ರವೇಶ ಮಾಡಿ ರೈತರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆದಿದ್ದು, ಇದರ ಹಿನ್ನಲೆ ಬೇಸರಗೊಂಡ ರೈತ ವಿಷ ಸೇವಿಸಿದ್ದಾನೆ ಅಲ್ಲದೆ ತಕ್ಷಣ ಆತನನ್ನು ಆಸ್ಪತ್ರೆಗೆ ಕರೆದೋಯ್ದ ಪರಿಣಾಮ ಅದೃಷ್ಟವಾಶತ್ ಪ್ರಾಣಾಪಯದಿಂದ ಪರಾಗಿರುವ ಘಟನೆ ಜರುಗಿದೆ.

ಕಳೆದ ಒಂದು ವಾರದಿಂದ ಡಿಆರ್ ಪೊಲೀಸರ ರಕ್ಷಣೆಯಲ್ಲಿ ಕಾಮಗಾರಿ ಮುಂದುವರಿಸುತ್ತಿದ್ದು ರೈತರು ಆತಂಕದಲ್ಲಿದ್ದಾರೆ. ಜಗಳೂರು ಪೊಲೀಸರು ಖಾಸಗಿ ಕಂಪನಿಗಳ ರಕ್ಷಣೆಗೆ ನಿಂತಿದ್ದಾರೆಂದು ಸಾರ್ವಜನಿಕ ವಲಯದಲ್ಲಿ ಗಟ್ಟಿಯಾಗಿ ಕೇಳಿಬರುತ್ತಿದ್ದು, ಸಮಾಜದಲ್ಲಿ ಸಂಘರ್ಷ ಸಹಜ ಸಣ್ಣಪುಟ್ಟ ಜಗಳಗಳಾದರೆ ದೂರುದಾರರ ದೂರಿನನ್ವಯ ದೂರು ನೀಡಲು ಹೋದರೆ ದಿನಗಟ್ಟಲೆ ಕಾಯಬೇಕು ಅಲ್ಲದೆ ಕೆಲವು ಘಟನೆಯಲ್ಲಿ ಭಾಗಿಯಾದ ಆರೋಪಿಗಳನ್ನು ಬೇಗ ಕರೆದಂತು ಪ್ರಕರಣ ದಾಖಲಿಸಲು ಹಿಂಜರಿಯುತ್ತಿದ್ದಾರೆ ಆದರೆ ನ್ಯಾಯಯುತ ಪರಿಹಾರವನ್ನು ಕಂಪನಿಯವರನ್ನು ಕೇಳಿದರೆ ಪೊಲೀಸರು ಸ್ಥಳಕ್ಕೆ ದೌಡಿಯಿಸಿ ಬಂದು ಅರೆಸ್ಟ್ ಮಾಡುವುದಾಗಿ ಬೆದರಿಕೆ ಹಾಕುತ್ತೀರುವುದು ನಿಜಕ್ಕೂ ಅನುಮಾನ ಮೂಡಿಸಿದೆ.

ಕ್ಲೀನ್ ಮ್ಯಾಕ್ಸ್ ಕಂಪನಿಗೆ ಪೊಲೀಸರ ರಕ್ಷಣೆ ಏಕೆ : ವಿದ್ಯುತ್ ಗೋಪುರಗಳು ಹಾಕುವುದಕ್ಕೆ ರೈತರಿಂದ ಅನುಮತಿ ಪಡೆದಿದ್ದು, ಅವರಿಂದ ಅಗ್ರಿಮೆಂಟ್ ಸಹ ಮಾಡಿಕೊಳ್ಳಲಾಗಿದೆ ಆದರೆ ರೈತರು ಕಂಪನಿಯವರಿಗೆ ಇನ್ನೂ ಹೆಚ್ಚಿನ ಹಣ ನೀಡಿ ಎಂದು ಪ್ರತಿಭಟನೆಗಳನ್ನು ಮಾಡುತ್ತಿದ್ದಾರೆ ಆದ್ದರಿಂದ ಕಾಮಗಾರಿಗೆ ತೊಂದರೆಯಾಗುತ್ತಿದ್ದು ಸೂಕ್ತ ರಕ್ಷಣೆಗೆ ಪೊಲೀಸ್ ರಕ್ಷಣೆ ಪಡೆದಿದ್ದೆವೆ ಎಂದು ಕಂಪನಿಯವರು ಹೇಳುತ್ತಿದ್ದಾರೆ.

ಖಾಸಗಿ ಕಂಪನಿಗೆ ನಮ್ಮ ಇಲಾಖೆಯಿಂದ ರಕ್ಷಣೆ ನೀಡುವುದಿಲ್ಲ, ಖಾಸಗಿ ಕಂಪನಿಯಿಂದ ರಕ್ಷಣೆಗಾಗಿ ಪೊಲೀಸರನ್ನು ನಿಯೋಜನೆ ಮಾಡಲು ಎಸ್.ಪಿ ಕಚೇರಿಯಲ್ಲಿ ಹಣ ತುಂಬಿದ್ದು, ಇದರ ಅನ್ವಯ ಜಿಲ್ಲಾಧಿಕಾರಿ ಕಚೇರಿಯಿಂದ ರಕ್ಷಣೆ ಕೋರಿ ದಾಖಲಾತಿಯು ಪ್ರಕ್ರಿಯೆಯಾಗಿ ಬಂದಿದು, ಎಸ್.ಪಿ ಹಾಗೂ ಎಸಿ ಇದರ ಅನುಷ್ಠಾನ ಅಧಿಕಾರಿಗಳಾಗಿದ್ದಾರೆ ಅವರ ಸೂಚನೆಯಂತೆ ನಾವು ರಕ್ಷಣೆ ಒದಗಿಸಿದ್ದೇವೆ.

- ಬಸವರಾಜ್ ನಾಯ್ಕ್, ಡಿವೈಎಸ್‌ಪಿ

ಕ್ಲೀನ್ ಮ್ಯಾಕ್ಸ್ ಕಂಪನಿ ವಿರುದ್ಧ ಮೊಕದ್ದಮೆ

ಕ್ಲೀನ್ ಮ್ಯಾಕ್ಸ್ ಹಾಗೂ ಸಿಎಂಇಎಸ್ ಜುಪಿಟರ್ ಕಂಪನಿ ಮೇಲೆ ರೆಡಿಯನ್ಸ್ ಸೋಲಾರ್ ಪ್ರವೈಟ್ ಲಿಮಿಟೆಡ್ ಕಂಪನಿಯ ಮ್ಯಾನೇಜರ್ ಆರ್ ಕೃಷ್ಣ ಸಂಪತ್ ಅವರು ಸಾಲೇಹಳ್ಳಿಯಲ್ಲಿರುವ ಅವರ ಸೋಲಾರ್ ಸಂಸ್ಥೆಗೆ ಸೇರಿದ ಸರ್ವೆ ನಂ 13/6 ರಲ್ಲಿ 5.36 ಎಕರೆಯಲ್ಲಿ ವಿದ್ಯುತ್ ಗೋಪರಗಳನ್ನು ಅಳವಡಿಸಿ ಕಂಪನಿಗೆ ಯಾವುದೇ ರೀತಿಯಲ್ಲಿ ಮಾಹಿತಿ ಅನುಮತಿ ನೀಡದೆ ದೌರ್ಜನ್ಯದಿಂದ ಕಾಮಗಾರಿ ಮಾಡುತ್ತಿದ್ದಾರೆ ಎಂದು ಜಗಳೂರು ಜೆಎಂ ಎಫ್ ಸಿ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದಾರೆ ಅಲ್ಲದೆ ಈ ಕುರಿತು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಬ್ರ್ಯಾಂಡ್ ಮಂಗಳೂರು ಕ್ರಿಕೆಟ್ ಪಂದ್ಯಾವಳಿ ನಾಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ವತಿಯಿಂದ ದಕ್ಷಿಣ ಕನ್ನಡ ಜಿಲ್ಲಾಡಳಿತ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಪೊಲೀಸ್ ಕಮಿಷನರೇಟ್, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್, ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಕಾಲೇಜು ಹಾಗೂ ರೋಹನ್ ಕಾರ್ಪೊರೇಶನ್ ನೇತೃತ್ವದಲ್ಲಿ ಬ್ರ್ಯಾಂಡ್ ಮಂಗಳೂರು ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ಅ. 2 ರಂದು ಬುಧವಾರ ಬೆಳಿಗ್ಗೆ 9 ಗಂಟೆಗೆ ಅಡ್ಯಾರ್ ಸಹ್ಯಾದ್ರಿ ಕಾಲೇಜು ಮೈದಾನ ದಲ್ಲಿ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ತಂಡ, ಮಂಗಳೂರು ಪೊಲೀಸ್ ಆಯುಕ್ತರ ತಂಡ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ತಂಡ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಂಡ, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷರ ತಂಡ ಪಂದ್ಯಾವಳಿ ಯಲ್ಲಿ ಭಾಗವಹಿಸಲಿವೆ. ಈ ಕ್ರಿಕೆಟ್ ಪಂದ್ಯಾವಳಿ ಯನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಉದ್ಘಾಟಿಸಲಿದ್ದಾರೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ತಿಳಿಸಿದ್ದಾರೆ.

ಕಂಟೈನರ್ ಡಿಕ್ಕಿ: ವ್ಯಕ್ತಿ ಸಾವು

ಉಡುಪಿ: ರಸ್ತೆ ದಾಟುತ್ತಿದ್ದ ವೇಳೆ ಕಂಟೈನರ್ ಡಿಕ್ಕಿ ಹೊಡೆದು ವ್ಯಕ್ತಿಯೋರ್ವರು ಮೃತಪಟ್ಟ ಘಟನೆ ಕಾರ್ಕಳ ತಾಲೂಕು ಬೈಲೂರಿನಲ್ಲಿ ಸೆ. 30ರಂದು ಸಂಭವಿಸಿದೆ. ಯರ್ಲಪ್ಪಾಡಿಯ ವಸಂತ ಆಚಾರ್ಯ (64) ಎಂಬಾವರೇ ಮೃತಪಟ್ಟ ದುರ್ದೈವಿ. ಬೈಲೂರಿನಲ್ಲಿ ಬಸ್‌ನಿಂದ ಇಳಿದು ರಸ್ತೆ ದಾಟುತ್ತಿದ ಸಂದರ್ಭ ಉಡುಪಿಯಿಂದ ಕಾರ್ಕಳ ಕಡೆ ಸಾಗುತ್ತಿದ್ದ ಲಾರಿ ವಸಂತ ಅವರಿಗೆ ಡಿಕ್ಕಿಯಾಗಿದೆ. ಪರಿಣಾಮ ವಸಂತ ಅವರು ಸ್ಥಳದಲ್ಲೇ ಸಾವಿಗೀಡಾಗಿದ್ದು, ಮೃತದೇಹವನ್ನು ಕಾರ್ಕಳ ಸರಕಾರಿ ಆಸ್ಪತ್ರೆ ಶವಾಗಾರದಲ್ಲಿಡಲಾಗಿದೆ.

ನಿವೃತ್ತ ಉಪನ್ಯಾಸಕಗೆ ಬೀಳ್ಕೊಡುಗೆ

ಚಿಕ್ಕಮಗಳೂರು: ಕಡೂರು ತಾಲೂಕಿನ ಸರಕಾರಿ ಮಹಿಳಾ ಪಿಯು ಕಾಲೇಜಿನ ಉಪನ್ಯಾಸಕ ಎಚ್.ಎಂ.ಮಲ್ಲಿಕಾರ್ಜುನ್ ನಿವೃತ್ತಿಗೊಂಡ ಹಿನ್ನೆಲೆ ಗೆಳೆಯರು ಈಚೆಗೆ ಸ್ವಗೃಹಕ್ಕೆ ತೆರಳಿ ಬೀಳ್ಕೊಟ್ಟು ಮುಂದಿನ ನಿವೃತ್ತಿ ಸುಖಮಯಗೊಳ್ಳಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಬಿ.ತಿಪ್ಪೇರುದ್ರಪ್ಪ, ಪತ್ರಕರ್ತ ರಮೇಶ್ ನಾರಿನಿಂಗಜ್ಜಿ ಮತ್ತಿತರರಿದ್ದರು.

ಕೋಟಿ ಗಾಯತ್ರಿ ಜಪ ಯಜ್ಞಕ್ಕೆ ಸಂಕಲ್ಪ

ಹಿಂದೂ ಧರ್ಮದ ರಕ್ಷಣೆಗಾಗಿ ಒಂದಾಗಬೇಕಿದೆ: ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು

ಮಂಗಳೂರು: ಬ್ರಾಹ್ಮಣ್ಯ ಸಮುದಾಯದ ನಡುವೆ ಆಚಾರ-ವಿಚಾರ ಬೇರೆ ಬೇರೆ ಇದ್ದರೂ, ಭಾರತೀಯ ಸಂಸ್ಕೃತಿ, ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಮತ್ತು ಹಿಂದೂ ಧರ್ಮದ ರಕ್ಷಣೆಯ ದೃಷ್ಟಿಯಿಂದ ಒಂದಾಗಬೇಕಿದೆ ಎಂದು ಚಿತ್ರಾಪುರ ಮಠಾಧೀಶ ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು ಕರೆ ನೀಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಸಮಿತಿ ಹಾಗೂ ಮಹಾಸಭಾದ ದಕ್ಷಿಣ ಕನ್ನಡ ಜಿಲ್ಲಾ ಘಟಕವು ಜಂಟಿಯಾಗಿ ಮಂಗಳೂರಿನ ಚಿತ್ರಾಪುರ ಮಠದ ಸಹಕಾರದೊಂದಿಗೆ ಅ. 26 ಮತು 27ರಂದು ನಡೆಸಲು ಉದ್ದೇಶಿಸಿದ ಗಾಯತ್ರಿ ಸಂಗಮ ಸಾಂಘಿಕ ಕೋಟಿ ಗಾಯತ್ರೀ ಜಪಯಜ್ಞದ ಪೂರ್ವಭಾವಿಯಾಗಿ ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರೀ ಸನ್ನಿಧಾನದಲ್ಲಿ ಭಾನುವಾರ ಸಂಕಲ್ಪ ದೀಕ್ಷೆಯನ್ನು ನೀಡಿದ ಬಳಿಕ ಮಾತನಾಡಿದರು.

ಮುಂದಿನ ಜನಾಂಗಕಕ್ಕೆ ಲೌಕಿಕ ಶಿಕ್ಷಣದೊಂದಿಗೆ ಕನಿಷ್ಠ ಧಾರ್ಮಿಕ ಶಿಕ್ಷಣ ನೀಡಬೇಕು. ಸನಾತನ ಧರ್ಮದ ರಕ್ಷಣೆಯ ಮೇಲೆ ಈ ಹಿಂದೆ ದಾಳಿಗಳು ನಡೆದಾಗ ಇಡೀ ಸಮಾಜ ಒಂದಾಗಿ ಹೋರಾಟ ಮಾಡಿದೆ. ಅಂತಹ ಹೋರಾಟ ಮಾಡುವ ಅನಿವಾರ್ಯ ಸ್ಥಿತಿಗೆ ನಾವು ಬಂದಿದ್ದೇವೆ. ನಮ್ಮ ಧ್ವನಿ ದೃಢವಾಗಬೇಕಿದೆ ಎಂದರು.

ಗಾಯತ್ರಿ ಸಂಗಮ ಸಾಂಘಿಕ ಕೋಟಿ ಗಾಯತ್ರೀ ಜಪಯಜ್ಞದ ಪೂರ್ವಾಭಾವಿಯಾಗಿ ಚಿತ್ರಾಪುರ ಶ್ರೀ ದುರ್ಗಾಪರಮೇಶ್ವರೀ ಸನ್ನಿಧಾನದಲ್ಲಿ ಭಾನುವಾರ ಸಂಕಲ್ಪ ದೀಕ್ಷೆ ನೀಡಿದರು.

ಮಾತೆಯರಿಗೆ ಸರ್ವಮಂಗಳ ಮಾಂಗಲ್ಯ ಸ್ತೋತ್ರ ಪಠಣ ಸಂಕಲ್ಪ ಮಾಡಿದ ರಾಜ್ಯ ಧಾರ್ಮಿಕ ಪರಿಷತ್‌ನ ಮಾಜಿ ಸದಸ್ಯ ಕಶೆಕೋಡಿ ಸೂರ್ಯನಾರಾಯಣ ಭಟ್, ದನದ ಕೊಬ್ಬನ್ನು ಸೈನಿಕರು ಬಳಸುವ ಸಿಡಿತೋಪುಗಳಿಗೆ ಬಳಸಿದ್ದಕ್ಕಾಗಿ ದೇಶದ ಮೊದಲ ಸ್ವಾತಂತ್ರ್ಯ ಸಂಗ್ರಮ ಸಿಪಾಯಿ ಧಂಗೆ ನಡೆದರೆ, ಇಂದು ದನ, ಹಂದಿಯ ಕೊಬ್ಬನ್ನು ನಮ್ಮೆಲ್ಲರ ಆರಾಧ್ಯ ದೇವರು, ನಾವೆಲ್ಲರೂ ನಂಬಿರುವ ತಿರುಪತಿ ತಿಮ್ಮಪ್ಪನ ಲಡ್ಡುಗೆ ಬಳಸಿದರೆ ನಾವು ಯಾವ ರೀತಿಯ ಹೋರಾಟ ನಡೆಸಬೇಕಿದೆ ಎಂದರು.

> ಸಂಕಲ್ಪ ದೀಕ್ಷೆಯ ಪೂರ್ವದಲ್ಲಿ ಶ್ರೀ ಕ್ಷೇತ್ರದಲ್ಲಿ ಕುಡುಪು ಕೃಷ್ಣರಾಜ ತಂತ್ರಿ ಅವರು ಗಣಯಾಗ ನೆರವೇರಿಸಿ, ಗಾಯತ್ರಿ ಹೋಮದ ಕುರಿತು ಮಹತ್ವವನ್ನು ಮತ್ತು ಇಂದಿನ ದಿನದಲ್ಲಿ ಇಂತಹ ಯಾಗವನ್ನು ಇಡೀ ಹಿಂದೂ ಸಮುದಾಯವು ತಮ್ಮ ರಕ್ಷಣೆ ಹಾಗೂ ಹಿಂದೂ ರಕ್ಷಣೆಯ ದೃಷ್ಟಿಯಿಂದ ಕೈಗೆತ್ತಿಕೊಳ್ಳಬೇಕಾದ ಅನಿವಾರ್ಯತೆ.
> -ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದರು, ಚಿತ್ರಾಪುರ ಮಠಾಧೀಶ

ಕರಾವಳಿ ಭಾಗದಲ್ಲಿ ಬ್ರಾಹ್ಮಣ ಸಮುದಾಯದಲ್ಲಿ 9 ಪಂಗಡವನ್ನು ಕಾಣುತ್ತೇವೆ. ಗಾಯತ್ರಿ ಯಾಗದ ಮೂಲಕ 9 ಪಂಗಡವನ್ನೂ ಒಂದೇ ವೇದಿಕೆಯಡಿಗೆ ತರಲು ಪ್ರಯತ್ನವಾಗುತ್ತಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಸಮಿತಿ ಉಪಾಧ್ಯಕ್ಷ ನ್ಯಾಯವಾದಿ ಮಹೇಶ್ ಕಜೆ ಹೇಳಿದರು.

ಕೋಟಿ ಗಾಯತ್ರಿ ಜಪಯಜ್ಞ ಯಶಸ್ವಿಗಾಗಿ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣ ಸಮುದಾಯ ಸಂಕಲ್ಪ ಮಾಡಿ ಜಪ ಆರಂಭಿಸಿರುತ್ತಾರೆ. ಯಶಸ್ವಿಗಾಗಿ ಹಲವು ಉಪ ಸಮಿತಿಗಳನ್ನು ರಚಿಸಲಾಗಿದೆ ಎಂದು ಪ್ರಧಾನ ಸಂಚಾಲಕ ಶ್ರೀಧರ ಹೊಳ್ಳ ಹೇಳಿದರು.

ಯಾಗ ಸಮಿತಿಯ ಸಂಚಾಲಕ ಕಟೀಲಿನ ಅನುವಂಶಿಕ ಅರ್ಚಕ ಶ್ರೀಹರಿ ನಾರಾಯಣ ದಾಸ ಆಸ್ರಣ್ಣ ಅವರು ಯಜ್ಞದ ಬಗ್ಗೆ ಮಾಹಿತಿ ನೀಡಿದರು.

ಶರವು ಕ್ಷೇತ್ರದ ಶಿಲೆಶಿಲೆ ಆಡಳಿತ ಮೊಕ್ತೇಸರ ಶರವು ಶ್ರೀ ರಾಘವೇಂದ್ರ ಶಾಸ್ತ್ರಿ, ಶ್ರೀ ಕ್ಷೇತ್ರ ಕಟೀಲಿನ ಅನುವಂಶಿಕ ಅರ್ಚಕ ಅನಂತ ಆಸ್ರಣ್ಣ, ಕರ್ನಾಟಕ ಬ್ಯಾಂಕಿನ ನಿಕಟ ಪೂರ್ವ ಅಧ್ಯಕ್ಷ ಎಂ.ಎಸ್. ಮಹಾಬಲೇಶ್ವರ ಭಟ್, ಧರ್ಮದರ್ಶಿ ಹರಿಕೃಷ್ಣ ಪುನರೂರು, ವೇದಮೂರ್ತಿ ವಾಸುದೇವ ಭಟ್, ಮಂಗಳಾದೇವಿ ದೇವಸ್ಥಾನದ ಚಂದ್ರಶೇಖರ ಐತಾಳ್, ಪ್ರೊ.ಎಂ.ಬಿ. ಪುರಾಣಿಕ್, ಪ್ರದೀಪ್ ಕುಮಾರ್ ಕಲ್ಕೂರ, ಬಪ್ಪನಾಡು ಕ್ಷೇತ್ರದ ಶ್ರೀಪತಿ ಉಪಾಧ್ಯಾಯ, ಕೃಷ್ಣ ಭಟ್ ಕೆ. ಕದ್ರಿ, ಶಿಕಾರಿಪುರ ಕೃಷ್ಣಮೂರ್ತಿ ಜಿಲ್ಲೆಯ ಎಲ್ಲ ದೇವಾಲಯದ ಅರ್ಚಕರು, ಜಿಲ್ಲೆಯ ಪುರೋಹಿತರು, ಸಂಸ್ಕೃತ ಶಿರೋಮಣಿಗಳು, ವೇದಜ್ಞರು ಭಾಗವಹಿಸಲಿರುವರು. ಭುವನಾಭಿರಾಮ ಪೆಜತ್ತಾಯ ಅವರಿಂದ ಶಂಖನಾದ ಮಾಡಿದರು.

ಭಾಗವತ್ ಪಟ್ಲಗೆ ಜಾಗತಿಕ ಬಂಟರ ಸಂಘದಿಂದ ಗೌರವ

ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಅಧ್ಯಕ್ಷರು, ಯಕ್ಷ ಧ್ರುವ ಕೊ-ಆಪರೇಟಿವ್ ಸೊಸೈಟಿ ಅಧ್ಯಕ್ಷರು ಆಗಿರುವ ಪಟ್ಲ ಸತೀಶ್ ಶೆಟ್ಟಿಯವರು ಅಮೇರಿಕಾದ 22 ದೇಶ ಗಳಲ್ಲಿ ನಡೆಸಿದ ಯಕ್ಷ ಯಾನದ ಯಶಸ್ವಿಗಾಗಿ ನಡೆಸಿ ಮಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ಕಾವೂರು ಶ್ರೀಹಿಲ್ ಸೈಡ್ ಸಭಾಂಗಣದಲ್ಲಿ ನಡೆದ ಯಕ್ಷಧ್ರುವ ಕೋ-ಆಪರೇಟಿವ್ ಸೊಸೈಟಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿಯವರು ಪಟ್ಲ ಸತೀಶ್ ಶೆಟ್ಟಿ ದಂಪತಿಗಳನ್ನು ಸನ್ಮಾನಿಸಿ ಗೌರವಿಸಿದರು.

ಬಳಿಕ ಮಾತನಾಡಿದ ಐಕಳ ಹರೀಶ್ ಶೆಟ್ಟಿ ಪಟ್ಲರ ಸಾಧನೆ ಜಗತ್ತು ಗುರುತಿಸಿದೆ ಯಕ್ಷಗಾನವನ್ನು ಜಗತ್ತಿಗೆ ಪಸರಿಸಿ ಇತಿಹಾಸ ನಿರ್ಮಿಸಿದ್ದಾರೆ. ಇದು ನಮ್ಮ ಊರಿಗೆ ಗೌರವವಾಗಿದೆ ಎಂದು ನುಡಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಪೋಷಕರು ಹಾಗೂ ಪಟ್ಲ ಫೌಂಡೇಶನ್‌ನ ಮಾರ್ಗದರ್ಶಕರಾದ ಸವಣೂರು ಸೀತಾರಾಮ್ ರೈ, ಸುಧಾಕರ್ ಪೂಂಜ, ಗಿರೀಶ್ ಎಂ. ಶೆಟ್ಟಿ ಕಟೀಲ್, ರವಿರಾಜ್ ಶೆಟ್ಟಿ ನಿಟ್ಟೆಗುತ್ತು, ಸಂತೋಷ್ ಕುಮಾರ್ ಶೆಟ್ಟಿ, ಲೋಕೇಶ್ ಭರಣಿ, ಪುರುಷೋತ್ತಮ್ ಭಂಡಾರಿ, ರವಿಚಂದ್ರ ಶೆಟ್ಟಿ, ಕೊಲ್ಲಾಡಿ ಬಾಲಕೃಷ್ಣ ರೈ, ಆರತಿ ಆಳ್ವ, ತನುಜ ಕೆ.ಅಡ್ಯಂತಾಯ ಉಪಸ್ಥಿತರಿದ್ದರು. ಈ ವೇಳೆ ತಮ್ಮ ಅಮೇರಿಕ ಪ್ರವಾಸದ ಕಥನವನ್ನು ಹಂಚಿಕೊಂಡ ಸತೀಶ್ ಶೆಟ್ಟಿ ಮಾತನಾಡಿ, ನಮ್ಮ ಕಲೆಗೆ ಇಂದು ವಿಶ್ವ ವ್ಯಾಪಿ ಮನ್ನಣೆ ಸಿಗುತ್ತಿದೆ. ಪಟ್ಲ ಫೌಂಡೇಷನ್ ಟ್ರಸ್ಟ್ ಅಮೇರಿಕಾ ಘಟಕದ ಅಧ್ಯಕ್ಷ ಡಾ. ಅರವಿಂದ ಉಪಾಧ್ಯಾಯ, ಡಾ. ಶ್ರೀಧರ ಆಳ್ವ, ಮಹಾಬಲ ಶೆಟ್ಟಿ, ಉಳಿ ಯೋಗೇಂದ್ರ, ಭಟ್ ಮತ್ತಿತರ ಪ್ರಮುಖರು ಅಮೆರಿಕದ 20 ರಾಜ್ಯಗಳಲ್ಲಿ ಯಕ್ಷಗಾನ ಪ್ರದರ್ಶನ ಆಯೋಜಿಸಿದ್ದರು ಅವರಿಗೆ ಧನ್ಯವಾದಗಳು ಎಂದರು.

ಪಟ್ಲ ಸತೀಶ್ ಶೆಟ್ಟಿ ಅವರ ನೇತೃತ್ವದಲ್ಲಿ 9 ಮಂದಿಯ ತಂಡ ಅಮೇರಿಕ ದೇಶದ ಬೇರೆ ಬೇರೆ ತಾಣಗಳಲ್ಲಿ ಯಕ್ಷಗಾನ ಪ್ರದರ್ಶಿಸಿ 75 ದಿನಗಳ ಬಳಿಕ ತಾಯ್ನಾಡಿಗೆ ಬಂದಿದ್ದಾರೆ.



ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿಯವರು ಪಟ್ಲ ಸತೀಶ್ ಶೆಟ್ಟಿ ದಂಪತಿಗಳನ್ನು ಸನ್ಮಾನಿಸಿ ಗೌರವಿಸಿದರು.

> ವಿದೇಶಗಳಲ್ಲಿ ತುಳುನಾಡಿನ ಗಂಡುಮೆಟ್ಟಿನ ಕಲೆಯಾ ಗಿರುವ ಯಕ್ಷಗಾನ ಪ್ರದರ್ಶನ ಮತ್ತು ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು ಹೆಮ್ಮೆ ಅನಿಸುತ್ತಿದೆ. ಅಲ್ಲಿನ ಜನರು ಕೂಡ ಯಕ್ಷಗಾನ ನಾಟ್ಯ ಮತ್ತು ಭಾಗವತಿಕೆಗೆ ಮನಸೋತು ಕಲಿಯಲು ಆಸಕ್ತಿ ತೋರಿಸಿರುವುದು ಖುಷಿಯ ವಿಚಾರ ಇದು ಅವಿಸ್ಮರಣೀಯ ಅನುಭವ.
> -ಸತೀಶ್ ಶೆಟ್ಟಿ, ಅಧ್ಯಕ್ಷ

ಭಾರತ ಹೃದಯಾಘಾತದ ರಾಜಧಾನಿ

ಚಿಕ್ಕಮಗಳೂರು: ಪಶ್ಚಿಮಾತ್ಯ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಹೃದಯಾಘಾತ ಪ್ರಕರಣಗಳು ಕಡಿಮೆಯಾಗುತ್ತಿವೆ. ಆದರೆ ಇದೇ ಸಂದರ್ಭದಲ್ಲಿ ಭಾರತದಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ನಗರದ ಆಶ್ರಯ ಆಸ್ಪತ್ರೆ ಆವರಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ವಿಶ್ವ ಹೃದಯ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತದಲ್ಲಿ ಪ್ರತಿ ವರ್ಷ 30 ಲಕ್ಷ ಜನ ಹೃದಯಾಘಾತದಿಂದ ಸಾವನ್ನಪ್ಪುತ್ತಿದ್ದಾರೆ ಎಂದು ಮಾಹಿತಿ ನೀಡಿದರು. ಯುವ ಭಾರತೀಯರು ಮತ್ತು ಮಧ್ಯವಯಸ್ಕರ ಹೃದಯ ಭೌತಿಕವಾಗಿ ಮತ್ತು ಮಾನಸಿಕವಾಗಿಯೂ ಸರಿ ಇಲ್ಲ. ಇಂದು ಎಲ್ಲಾ ವರ್ಗದ ಜನರಲ್ಲಿಯೂ ಒತ್ತಡ ಹೆಚ್ಚಲಾರಂಭಿಸಿದೆ. ಇದು ಆರೋಗ್ಯ ಸಮಸ್ಯೆ ಹೆಚ್ಚಾಗಲು ಕಾರಣವಾಗಿದೆ ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಎಚ್.ಡಿ. ತಮ್ಮಯ್ಯ ಮಾತನಾಡಿ, ಹೃದಯ ಸಂಬಂಧಿ ರೋಗಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವ ಹೃದಯ ದಿನಾಚರಣೆ ಆಚರಿಸಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಹೃದಯ ಸಂಬಂಧಿ ರೋಗಗಳು ಸಾಮಾನ್ಯ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಪ್ರಮುಖ ಕಾರಣ ಇಂದಿನ ಒತ್ತಡದ ಬದುಕೇ ಆಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಆಶ್ರಯ ಆಸ್ಪತ್ರೆ ಮುಖ್ಯಸ್ಥ ಡಾ. ಡಿ.ಎಲ್. ವಿಜಯಕುಮಾರ್, ಪ್ರಮುಖರಾದ ಶಿವಾನಂದ ಸ್ವಾಮಿ, ಡಾ.ಜೆ.ಪಿ.ಕೃಷ್ಣೇಗೌಡ, ಡಾ.ಶುಭ ವಿಜಯ್ ಕುಮಾರ್, ಡಾ. ಕಾರ್ತೀಕ್ ವಿಜಯ್ ಡಾ. ಅನಿಕೇತ್ ಮತ್ತಿತರರಿದ್ದರು.

ಜನರ ದಾರಿ ತಪ್ಪಿಸುತ್ತಿರುವ ಭಗವಾನ್: ಬೊಮ್ಮಾಯಿ

ಗದಗ: ಪ್ರೊ. ಕೆ.ಎಸ್. ಭಗವಾನ್ ಅವರು ತಾಯಿ ಚಾಮುಂಡೇಶ್ವರಿ ವಿಚಾರದಲ್ಲಿ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಮಾತಿಗೆ ಯಾರೂ ಮಹತ್ವ ಕೊಟ್ಟಿಲ್ಲ, ಕೊಡಬಾರದು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಭಗವಾನ್ ಅವರು ಹೆಸರಿಗೆ ತಕ್ಕಹಾಗೆ ಭಗವಂತನ ಮೇಲೆ ನಂಬಿಕೆ ಇಟ್ಟಿಲ್ಲ, ಭಗವಂತನ ಮೇಲೆ ನಂಬಿಕೆ ಇಲ್ಲವೆಂದರೆ, ಭಗವಾನ್ ಅಂತ ಹೆಸರು ಇಟ್ಟಿಕೊಂಡಿದ್ದೆ ಅಪಾರ್ಥವಾಗಿದೆ ಎಂದು ಹೇಳಿದರು. ಒಂದು ಧರ್ಮದ ವಿರುದ್ಧ ಮಾತನಾ ಡುವುದು ಯಾವುದೇ ಮಾನವೀಯ ಧರ್ಮವಿಲ್ಲ. ಚಾಮುಂಡೇಶ್ವರಿ ಕಾಲ್ಪನಿಕ ಅಂತ ಹೇಳುತ್ತಾರೆ ಎಂದು ಕಿಡಿ ಕಾರಿದರು.

ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಮುಳಬಾಗಲು ಕೋಲಾರ ಜಿಲ್ಲೆ.
ಎಂ.ಸಿ.ರೋಡ್ ಮುಳಬಾಗಲು ಕೋಲಾರ ಜಿಲ್ಲೆ, ದೂರವಾಣಿ ಸಂಖ್ಯೆ: 08159–298914, Email:amomulbagal@gmail.com,
ಕ್ರ.ಸಂ:ಸಾಆಮು/ಟೆಂಡರ್/01/2023–24 ದಿನಾಂಕ: 24.09.2024

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಮುಳಬಾಗಿಲು ಇಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆಯಂತೆ ಆಸ್ಪತ್ರೆಗಳಿಗೆ ನಾನ್ ಕ್ಲಿನಿಕಲ್ ಸೇವೆಯ ಸಿಬ್ಬಂದಿಯನ್ನು ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸುವ ಟೆಂಡರ್‌ದಾರರ ಹೆಚ್ಚಿನ ಮಾಹಿತಿಗಾಗಿ **eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಮುಳಬಾಗಲು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:260/ಕೆಎಸ್‌ಎಂ.ಸಿ.ಎ/2024–25

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಎಸ್.ಎಸ್.ಕೆ., ವಿಜಯಪುರ

ಮರು ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ–ಕರ್ನಾಟಕ ಯೋಜನೆ ಅಡಿಯಲ್ಲಿ ಮಹಾತ್ವಾಕಾಂಕ್ಷಿ ತಾಲೂಕುಗಳಲ್ಲಿ 04–ಕೆಪಿಎಸ್ ಹಾಗೂ 02–ಆದರ್ಶ ವಿದ್ಯಾಲಯಗಳಲ್ಲಿ ಅವಿಷ್ಕಾರ ಇನ್ನೋವೇಶನ್ ಲ್ಯಾಬ್‌ನ್ನು ಸ್ಥಾಪಿಸಲು ಉಪಕರಣಗಳ ಪೂರೈಕೆಗಾಗಿ ಏಜೆನ್ಸಿ ಆಯ್ಕೆ ಮಾಡಲು ಇ–ಪ್ರಕ್ಯೂರಮೆಂಟ್ ಮೂಲಕ ಈ ಕೆಳಗಿನಂತೆ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ: http:www.kppp.karnataka.gov.in ಹಾಗೂ ಕಛೇರಿಯ ದೂರವಾಣಿ ಸಂಖ್ಯೆ: 9448999389 ಕ್ಕೆ ಸಂಪರ್ಕಿಸಬಹುದು.

Tender reference no: SSK/2023-24/IND0031/CALL-2

ಸಹಿ/– ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ–ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ.,ವಿಜಯಪುರ
ವಾಸಾಸಂಇ/ವಿಜಯಪುರ/286/ಕೆಎಸ್‌ಎಂಸಿಎ/2024–25

ಅರಣ್ಯ ಇಲಾಖೆ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ದೊಡ್ಡಬಳ್ಳಾಪುರ ಉಪ ವಿಭಾಗ,
ದೊಡ್ಡಬಳ್ಳಾಪುರ – 561 203. ದೂರವಾಣಿ : 080–2990 7088
ಇ–ಮೇಲ್ : acfdbpura2016@gmail.com
ಸಂಖ್ಯೆ : ಸ.ಅ.ಸಂ./ದೊ.ಉ.ವಿ./ಮು.ಕಾಮ/ಸಿ.ಆರ್–28/2024–25/446
ದಿನಾಂಕ : 30–09–2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2024–25 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ವಲಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆಯಲ್ಲಿ ನೊಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ಪ್ರತಿಯೊಂದು ಕಾಮಗಾರಿಗಳಿಗೆ ಪ್ರತ್ಯೇಕ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in).** ಪೋರ್ಟಲ್‌ನಲ್ಲಿ **ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : 14–10–2024 ರಂದು ಅಪರಾಹ್ನ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15–10–2024 ರ ಅಪರಾಹ್ನ 4.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 16–10–2024 ರಂದು ನಿಗಧಿಪಡಿಸಲಾಗಿರುತ್ತದೆ.** ಒಂದು ವೇಳೆ ಸದರಿ ದಿನಾಂಕದಂದು ಟೆಂಡರ್‌ನಲ್ಲಿ ಗುತ್ತಿಗೆದಾರರು ಯಾರೂ ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರುಟೆಂಡರ್ ಎಂದು ತಿಳಿದು ಇ–ಪೋರ್ಟಲ್‌ನಲ್ಲಿ **ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21–10–2024 ರಂದು ಅಪರಾಹ್ನ 4.00 ಗಂಟೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 22–10–2024 ರ ಅಪರಾಹ್ನ 4.00 ಗಂಟೆ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 23–10–2024 ರ ಅಪರಾಹ್ನ 4.00 ಗಂಟೆ ನಿಗಧಿಪಡಿಸಲಾಗಿರುತ್ತದೆ.** ಹೆಚ್ಚಿನ ಮಾಹಿತಿಗಾಗಿ **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ** ರವರ ಕಛೇರಿಯಿಂದ ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ : 080 – 2990 7088** ಮೂಲಕ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ದೊಡ್ಡಬಳ್ಳಾಪುರ ಉಪ ವಿಭಾಗ,
ದೊಡ್ಡಬಳ್ಳಾಪುರ.
ವಾಸಾಸಂಇ/ಬೆಂಗ್ರಾಜಿ/2271/ಮಣಿಪಾಲ್/2024–25

ಸುವರ್ಣ ಕರ್ನಾಟಕ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಯೋಜನಾ ವಿಭಾಗ, ಚಿತ್ರದುರ್ಗ.
Sri Sai Service Station 1st Floor, Turuvanur Road, Chitradurga.
Phone No: (O) 08194 230133, (Fax) 230294,
e-mail : kn-cht@pmgsy.nic.in
ಸಂಖ್ಯೆ: ಕಾ.ಇಂ./ಯೋ.ವಿ./ಚಿದು/ತಾಂತ್ರಿಕ/ಟೆಂಡರ್/ಎಸ್.ಸಿ.ಪಿ–ಟಿ.ಎಸ್.ಪಿ, 5054/ 2024–25/211, ದಿನಾಂಕ:30–09–2024

ಅಲ್ಪಾವಧಿ ಟೆಂಡರ್ ಪ್ರಕಟಣೆ–2ನೇ ಕರೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿತ್ರದುರ್ಗ ರವರು 2023–24ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆಯ ಲೆಕ್ಕ ಶೀರ್ಷಿಕೆ 5054-03-337-0-75-422/423 ಯೋಜನೆಯಡಿಯಲ್ಲಿ ಮಂಜೂರಾದ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ **ಪ್ಯಾಕೇಜ್ ಸಂಖ್ಯೆ:KSSCTS.10.58:** (1) ಚಿತ್ರದುರ್ಗ ತಾ॥ ಕೂನಬೇವು ಗ್ರಾಮದಿಂದ ಹುಣಸೆಕಟ್ಟೆವರೆಗಿನ ರಸ್ತೆ ಮರು ಡಾಂಬರೀಕರಣ, (2) ಚಳ್ಳಕೆರೆ ತಾ॥ ಪಿ.ಡಿ. ರಸ್ತೆಯಿಂದ ಓಬೇನಹಳ್ಳಿ ಭೋವಿ ಕಾಲೋನಿ ಮುಖಾಂತರ ಓಬೇನಹಳ್ಳಿ ಗೊಲ್ಲರಹಟ್ಟಿ ರಸ್ತೆ ಮರು ಡಾಂಬರೀಕರಣ ಕಾಮಗಾರಿ, (3) ಚಳ್ಳಕೆರೆ ತಾ॥ ಹುಲಿಕುಂಟೆ ಗೊಲ್ಲರಹಟ್ಟಿಯಿಂದ ಭೋವಿ ಕಾಲೋನಿವರೆಗೆ ರಸ್ತೆ ಮರು ಡಾಂಬರೀಕರಣ ಕಾಮಗಾರಿ. **(ಒಟ್ಟು ಪ್ಯಾಕೇಜ್ ಮೊತ್ತ ರೂ.75.00ಲಕ್ಷಗಳು)(ಸಾಮಾನ್ಯ ವರ್ಗ).** ಹಾಗೂ **ಪ್ಯಾಕೇಜ್ ಸಂಖ್ಯೆ:KSSCTS.10.59:** (1) ಚಿತ್ರದುರ್ಗ ತಾ॥ ಚಿಕ್ಕಗೊಂಡನಹಳ್ಳಿ,ಯಳಗೋಡು ರಸ್ತೆಯಿಂದ ಚಿಪ್ಪಿನಕೆರೆ, ಜೋಗಿಬೋರನಹಟ್ಟಿ, ಮುದ್ದಾಪುರ, ಮುದ್ದಾಪುರ ಹೊಸಹಟ್ಟಿವರೆಗಿನ ರಸ್ತೆ ಮರು ಡಾಂಬರೀಕರಣ ಕಾಮಗಾರಿ, (2) ಚಿತ್ರದುರ್ಗ ತಾ॥ ಎನ್.ಹೆಚ್..13 ಯಿಂದ ಅವಳೇನಹಳ್ಳಿ ಮುಖಾಂತರ ತುರುವನೂರು ರಸ್ತೆಯವರೆಗೆ ರಸ್ತೆ ಮರು ಡಾಂಬರೀಕರಣ ಕಾಮಗಾರಿ. **(ಒಟ್ಟು ಪ್ಯಾಕೇಜ್ ಮೊತ್ತ ರೂ.70.00ಲಕ್ಷಗಳು)(ಎಸ್.ಸಿ ಮೀಸಲಾತಿ)** ಹಾಗೂ **ಪ್ಯಾಕೇಜ್ ಸಂಖ್ಯೆ:KSSCTS.10.60:**1) ಚಿತ್ರದುರ್ಗ ತಾ॥ ಮುದ್ದಾಪುರದಿಂದ ಸೂರನಹಳ್ಳಿವರೆಗಿನ ರಸ್ತೆ ಮರು ಡಾಂಬರೀಕರಣ ಕಾಮಗಾರಿ. **(ಮೊತ್ತ ರೂ.30.00 ಲಕ್ಷಗಳು) (ಎಸ್.ಟಿ ಮೀಸಲಾತಿ).** ಒಟ್ಟು 6 ಕಾಮಗಾರಿಗಳ ಅಂದಾಜು ಮೊತ್ತ ರೂ. 175.00 ಲಕ್ಷಗಳು (ಕನಿಷ್ಠ ಅಂ.ಮೊತ್ತ ರೂ.30.00 ಲಕ್ಷಗಳು, ಗರಿಷ್ಠ ಅಂ.ಮೊತ್ತ ರೂ. 75.00 ಲಕ್ಷಗಳು) ಈ ಕಾಮಗಾರಿಗಳಿಗೆ ಹಾಗೂ 2023–24 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 5054 ಯೋಜನೆಯಡಿಯಲ್ಲಿ ಮಂಜೂರಾದ ಚಳ್ಳಕೆರೆ ವಿಧಾನಸಭಾ ಕ್ಷೇತ್ರದ **"ಪ್ಯಾಕೇಜ್ ಸಂಖ್ಯೆ:KS.10.56"** 1) ಚಳ್ಳಕೆರೆ ತಾ॥ ನಾಗಗೊಂಡನಹಳ್ಳಿಯಿಂದ ಲಕುಮಗೊಂಡನಹಳ್ಳಿಯವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಮತ್ತು ಚಳ್ಳಕೆರೆ ತಾ॥ ಗೋಸಿಕೆರೆಯಿಂದ ಶಾರದಾ ಕಾಲೋನಿಯವರೆಗೆ ರಸ್ತೆ ಮರು ಡಾಂಬರೀಕರಣ ಅಂದಾಜು ಮೊತ್ತ ರೂ. 125.00 ಲಕ್ಷಗಳು ಕಾಮಗಾರಿಗಳಿಗೆ ಅರ್ಹ KPWD/CPWD ನೊಂದಾಯಿತ ಗುತ್ತಿಗೆದಾರರಿಂದ ಐಟಂ ರೇಟ್ ದರಗಳಂತೆ ಕೆಪಿಪಿ ಪೋರ್ಟಲ್ ಮುಖಾಂತರ ಏಕಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಂತೆ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **http://kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ದಿನಾಂಕ: 04.10.2024 ರಿಂದ ಪಡೆಯ ಬಹುದಾಗಿರುತ್ತದೆ. ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 16.10.2024 ರಂದು ಸಂಜೆ 16:30ರವರೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

DIPR/CTA/KSMCA/288/2024-25
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಯೋಜನಾ ವಿಭಾಗ, ಚಿತ್ರದುರ್ಗ.

11 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ: ಸಚಿವ ಡಾ.ಎಚ್.ಸಿ.ಮಹದೇವಪ್ಪ

ನಾಡಹಬ್ಬ ದಸರಾ ಅ.3ರಂದು ಉದ್ಘಾಟನೆ

ಮೈಸೂರು: ನಾಡಹಬ್ಬ ದಸರಾ ಮಹೋತ್ಸವದ ಸಿದ್ಧತಾ ಕಾರ್ಯಗಳು ಅಂತಿಮ ಹಂತದಲ್ಲಿದ್ದು ಅ.3ರಂದು ಉದ್ಘಾಟನೆ ಆಗಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ದಸರಾ ಮಹೋತ್ಸವಕ್ಕೆ ಅದ್ದೂರಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅ.3 ರಂದು ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 9.15ರಿಂದ 9.45 ರೊಳಗೆ ದಸರಾ ಉದ್ಘಾಟನೆಯಾಗಲಿದೆ. ಅದೇ ದಿನ ಫಲಪುಷ್ಪ ಪ್ರದರ್ಶನ, ವಸ್ತುಪ್ರದರ್ಶನ, ಆಹಾರ ಮೇಳ, ಕುಸ್ತಿ, ಚಲನಚಿತ್ರೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆಯಾಗಲಿವೆ ಎಂದು ತಿಳಿಸಿದರು. ಅರಮನೆ ಅಂಗಳದಲ್ಲಿ 8 ದಿನಗಳ ಕಾಲ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಜತೆಗೆ ಜಗನ್ಮೋಹನ ಅರಮನೆ, ಕಲಾಮಂದಿರ, ನಾದಬ್ರಹ್ಮ ಸಭಾಂಗಣ ಸೇರಿದಂತೆ 11 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು 508 ಕಲಾತಂಡ ಗಳು, 6500 ಕಲಾವಿದರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಒಟಿಪಿ ವ್ಯವಸ್ಥೆ: ಕಳೆದ ವರ್ಷ ದಸರಾ ಟಿಕೆಟ್ ಬಿಡುಗಡೆಯಾದ ಅರ್ಧ ಗಂಟೆಯಲ್ಲಿ ಸೋಲ್ಡ್ ಔಟ್ ಆಗಿದ್ದವು. ಒಬ್ಬರೇ ನೂರಾರು ಟಿಕೆಟ್ ಖರೀದಿಸಿ ದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಈ ಬಾರಿ ಒಟಿಪಿ ವ್ಯವಸ್ಥೆ ಮಾಡಲಾಗಿದೆ. ಒಬ್ಬರಿಗೆ ಕೇವಲ ನಾಲ್ಕು ಟಿಕೆಟ್ ಮಾತ್ರ ನೀಡಲಾಗುತ್ತಿದೆ. ಇದರಿಂದಾಗಿ ಈಗಲೂ 1 ಸಾವಿರ ಗೋಲ್ಡ್ ಕಾರ್ಡ್, 2 ಸಾವಿರ ಸಾಮಾನ್ಯ ಟಿಕೆಟ್ ಲಭ್ಯವಿವೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಯುವ ದಸರಾಗೆ ಎ.ಆರ್.ರೆಹಮಾನ್

ಈ ಬಾರಿಯ ಯುವ ದಸಾರಾದಲ್ಲಿ ಎ.ಆರ್.ರೆಹಮಾನ್ ಭಾಗವಹಿಸುತ್ತಿದ್ದು ಹೆಚ್ಚು ಜನ ಸೇರುವ ನಿರೀಕ್ಷೆ ಇದೆ. ಮೊದಲ ಬಾರಿಗೆ ಮೈಸೂರು ಹೊರವಲಯದ ಉತ್ತನಹಳ್ಳಿ ಬಳಿ ನಡೆಯುತ್ತಿದೆ. ವಿದ್ಯುತ್, ಶೌಚಾಲಯ, ಭದ್ರತೆ, ಸಿಸಿ ಟಿವಿ ಸೌಲಭ್ಯ ಕಲ್ಪಿಸಲಾಗಿದೆ. ಬಸ್ ವ್ಯವಸ್ಥೆಯನ್ನೂ ಮಾಡಲಾಗಿದೆ. ಸುತ್ತಮುತ್ತ ನಿರ್ಜನ ಪ್ರದೇಶವಿದ್ದು ಹೆಚ್ಚಿನ ನಿಗಾ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಸಮ್ಮೇಳನ 5ರಿಂದ

ಸಂವಿಧಾನ ಅಂಗೀಕಾರ ಅಮೃತ ಮಹೋತ್ಸವದ ಅಂಗವಾಗಿ ಮೈಸೂರು ವಿವಿಯ ಡಾ.ಅಂಬೇಡ್ಕರ್ ಸಂಶೋಧನ ಕೇಂದ್ರದ ಸಹಯೋಗದಲ್ಲಿ ಅ.5 ಮತ್ತು 6ರಂದು ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಈ ಬಾರಿ ಏರ್ ಶೋ ನಡೆಯುವುದು ಅನುಮಾನ. ಬದಲಿಗೆ ಆಕರ್ಷಕ ಡ್ರೋನ್ ಶೋ ಆಯೋಜಿಸಲಾಗಿದೆ. ಹೋಟೆಲ್ ಮಾಲೀಕರು ಪ್ರವಾಸಿಗರಿಗೆ ಹೆಚ್ಚು ಶುಲ್ಕ ವಿಧಿಸಬಾರದು. ಈ ಸಂಬಂಧ ಹೋಟೆಲ್ ಮಾಲೀಕರ ಸಭೆ ನಡೆಸಿ ಕ್ರಮ ಕೈಗೊಳ್ಳಲಾಗುವುದು.
-ಡಾ.ಎಚ್.ಸಿ.ಮಹದೇವಪ್ಪ, ಸಚಿವ

ಲಾರಿ–ಬೈಕ್ ನಡುವೆ ಅಪಘಾತ: 4 ಸಾವು

ಉಡುಪಿ: ಮಿನಿ ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿರುವ ಘಟನೆ ಕಾರ್ಕಳ– ಧರ್ಮಸ್ಥಳ ಹೆದ್ದಾರಿಯ ಹೊಸ್ಮಾರು ಪಾಜೆಗುಡ್ಡ ಬಳಿ ಸೋಮವಾರ ಮಧ್ಯಾಹ್ನ ನಡೆದಿದೆ. ಮೃತರನ್ನು ಸುರೇಶ್ ಆಚಾರ್ಯ (36) ಸಮೀಕ್ಷಾ (7) ಸುಶ್ಮಿತಾ (5) ಸುಶಾಂತ್ (2) ಎಂದು ಗುರುತಿಸಲಾಗಿದೆ. ಬೈಕ್ ನಲ್ಲಿ ಪತಿ, ಪತ್ನಿ ಹಾಗೂ ಮೂವರು ಮಕ್ಕಳು ಪ್ರಯಾಣಿಸುತ್ತಿದ್ದಾಗ ಮಿನಿ ಲಾರಿ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಮೂವರು ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಬಾಜಗೋಳಿ ಕಡೆಯಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಲಾರಿ, ವೆನೂರ್ ನಿಂದ ನಲ್ಲೂರ್ ಕಡೆಗೆ ಬರುತ್ತಿದ್ದ ಬೈಕ್ ಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸುರೇಶ್ ಅಚಾರ್ಯ ಅವರ ಪತ್ನಿ ಮೀನಾಕ್ಷಿ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಿರೂರು: ಮನುಷ್ಯನ ಮೂಳೆ ಪತ್ತೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಅಂಕೋಲದ ಶಿರೂರಿನಲ್ಲಿ ಸೋಮವಾರ ಗಂಗಾವಳಿ ನದಿಯಲ್ಲಿ ನಡೆದ ಶವ ಶೋಧ ಕಾರ್ಯಾಚರಣೆಯಲ್ಲಿ ಮನುಷ್ಯನ ಎದೆ ಹಾಗೂ ಕೈ ಭಾಗದ ಮೂಳೆಗಳು ದೊರೆತಿವೆ. ಭಾನುವಾರ ನಡೆದ ಕಾರ್ಯಾಚರಣೆಯಲ್ಲಿ ಆಲದ ಮರ ಸೇರಿದಂತೆ ಹಲವು ವಸ್ತುಗಳನ್ನು ಹೊರತೆಗೆಯಲಾಗಿತ್ತು. ಸೋಮವಾರ ಶವದ ಪಳೆ ಯುಳಿಕೆಗಳು ದೊರೆತಿದ್ದು, ಡಿಎನ್‌ಎ ಪರೀಕ್ಷೆಗೆ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ. ಮೂರನೇ ಹಂತದ ಶವ ಶೋಧದಲ್ಲಿ ಅರ್ಜುನ್ ಶವ ಹೊರ ತೆಗೆಯಲಾಗಿದೆ. ಶಿರೂರಿನ ಜಗನ್ನಾಥ್, ಲೋಕೇಶ್ ಅವರ ಶವ ಇನ್ನಷ್ಟೇ ಸಿಗಬೇಕಿದೆ. ಅಂಕೋಲ ಪೊಲೀ ಸರು ಸಿಕ್ಕ ಅಸ್ತಿಪಂಜರದ ಮೂಳೆಗಳನ್ನು ಡಿಎನ್‌ಎ ಪರೀಕ್ಷೆಗೆ ರವಾನೆ ಮಾಡಲಿದ್ದಾರೆ. ಸದ್ಯ ಈ ಮೂಳೆಗಳು ಯಾರದ್ದು ಎಂಬ ಬಗ್ಗೆ ಮಾಹಿತಿ ಡಿಎನ್‌ಎ ಪರೀಕ್ಷೆ ನಂತರ ತಿಳಿದು ಬರಲಿದೆ.

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ಇ–ಟೆಂಡರ್ ಪುಕಟಣೆ ಸಂಖ್ಯೆ: ಕಾಯೋಮೋಶಿ /ಎ2/Cairn/ಇ–ಟೆಂಡರ್/ಸಿಆರ್–18/2024–25 E-1516095 ದಿನಾಂಕ: 27.09.2024

ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಮರು ಇ–ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ಸಾಗರ, ಮಂಗಳೂರು ಮತ್ತು ಕುಂದಾಪುರ ವಿಭಾಗಗಳಲ್ಲಿನ ವಿವಿಧ ವಲಯಗಳ ಅಧಿಸೂಚಿತ ಅರಣ್ಯ ಪ್ರದೇಶಗಳ "Demarcation of Notified Forests by Formation of Cairns at the specified locations along the Notified Forest Boundaries" ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ.58.344 ಲಕ್ಷಗಳ ಒಟ್ಟು 25 ಕಾಮಗಾರಿಗಳಿಗೆ ಇ–ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ: 15.10.2024 ರ ಸಂಜೆ 04.00 ಗಂಟೆರೊಳಗಾಗಿ ಟೆಂಡರನ್ನು ಸಲ್ಲಿಸಬಹುದಾಗಿದೆ.

ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್ ನಲ್ಲಿ ಬಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ಅಥವಾ ಮೊಬೈಲ್ ಸಂಖ್ಯೆ: 9481990223 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– (ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/24–25/ /09/792

ಬಾಂಡ್ ತನಿಖೆಗೆ ಹೈ ತಡೆ

← ಮೊದಲಪುಟದಿಂದ

ಹಾಲಿ ಪ್ರಕರಣದಲ್ಲಿ ಕನಿಷ್ಠ ಪಕ್ಷ ಆಕ್ಷೇಪಣೆ ಸಲ್ಲಿಸುವವರೆಗೆ ತನಿಖೆ ಮುಂದುವರಿಸಲು ಅನುಮತಿಸುವುದು ಕಾನೂನಿನ ದುರ್ಬಳಕೆಯಾಗಲಿದೆ. ಹೀಗಾಗಿ, ಮುಂದಿನ ವಿಚಾರಣೆವರೆಗೆ ತನಿಖಾ ಪ್ರಕ್ರಿಯೆಗೆ ತಡೆ ವಿಧಿಸಲಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ. ಇದಕ್ಕೂ ಮುನ್ನ, ಕಟೀಲ್ ಪರವಾಗಿ ವಾದಿಸಿದ ಹಿರಿಯ ವಕೀಲ ಕೆ.ಜಿ.ರಾಘವನ್ ಅವರು ಸರಕಾ ಸಂಸ್ಥೆಗಳನ್ನು ಬಳಕೆ ಮಾಡಿಕೊಂಡು ಸುಲಿಗೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ದೂರು ಓದಿದರೆ ಸುಲಿಗೆ ಆರೋಪ ಅನ್ವಯಿಸದು. ದೂರು ಕ್ಷುಲ್ಲಕವಾಗಿದ್ದು, ಕಾನೂನಿನ ದುರ್ಬಳಕೆಯಾಗಿದೆ ಎಂದು ಆಕ್ಷೇಪಿಸಿದರು. ಪ್ರತಿವಾದಿ ಆದರ್ಶ್ ಐಯ್ಯರ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರು ಇದು ಅತ್ಯಂತ ಸಿಂಧುವಾದ ಪ್ರಕರಣ. ಈ ಹಂತದಲ್ಲಿ ಅನುಮತಿ ಪಡೆಯಬೇಕು ಎಂಬ ವಿಚಾರವಲ್ಲ. ಪ್ರಕರಣ ಕೈಗೆತ್ತಿಕೊಳ್ಳುವ ಹಂತದಲ್ಲಿ ಅನುಮತಿ ಬೇಕಾಗುತ್ತದೆ. ಸುಲಿಗೆ ಆರೋಪಕ್ಕೆ ಇದು ಉತ್ತಮ(ಕ್ಲಾಸಿಕ್) ಉದಾಹರಣೆಯಾಗಿದೆ. ಸುಲಿಗೆ ಪ್ರಕರಣ ಎಂದೇನಾದರೂ ಇದ್ದರೆ ಅದು ಇದೇ. ಕಂಪನಿಗಳ ಮುಖ್ಯಸ್ಥರಲ್ಲಿ ಜಾರಿ ನಿರ್ದೇಶನಾಲಯದ ಮೂಲಕ ಭಯ ಹುಟ್ಟಿಸಿ, ಅವರ ಮೇಲೆ ದಾಳಿ ಇತ್ಯಾದಿ ನಡೆಸುವ ಬೆದರಿಕೆ ಹಾಕಿ ಅವರು ಚುನಾವಣಾ ಬಾಂಡ್ ಖರೀದಿಸಿ ಆಡಳಿತ ಪಕ್ಷಕ್ಕೆ ನೀಡುವಂತೆ ಮಾಡಲಾಗಿದೆ. ಆನಂತರ ಜಾರಿ ನಿರ್ದೇಶನಾಲಯ ಯಾವುದೇ ದಾಳಿ ಮಾಡಿಲ್ಲ. ಇದು ಸುಲಿಗೆಯಾಗುವುದಿಲ್ಲವೇ? ಇದು ಸುಲಿಗೆಗೆ ಕ್ಲಾಸಿಕ್ ಪ್ರಕರಣ ಎಂದು ವಾದ ಮಂಡಿಸಿದರು. ಅಂತಿಮವಾಗಿ ಮಧ್ಯಂತರ ತಡೆಯಾಜ್ಞೆ ನೀಡಿದ ಪೀಠ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?: ಬಿಜೆಪಿ ಹಾಗೂ ಕರ್ನಾಟಕ ರಾಜ್ಯ ಘಟಕಕ್ಕೆ ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಜಾರಿ ನಿರ್ದೇಶನಾಲಯ (ಇಡಿ) ದುರ್ಬಳಕೆ ಮಾಡಿಕೊಳ್ಳಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸುಲಿಗೆ ನಡೆಸಲಾಗಿದೆ. ಅವರಿಂದ ಚುನಾವಣೆ ಬಾಂಡ್ ಖರೀದಿಸಿ ಬಿಜೆಪಿಗೆ ಸುಮಾರು 8,000 ಕೋಟಿ ರು.ಗೂ ಅಧಿಕ ಲಾಭ ಮಾಡಿಕೊಡಲಾಗಿದೆ. ಈ ಬಾಂಡ್‌ಗಳ ಮೂಲಕ ಮಾಡಲಾದ ಸುಲಿಗೆಯಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಇಡಿ ಅಧಿಕಾರಿಗಳು, ಕೇಂದ್ರ ಹಾಗೂ ಬಿಜೆಪಿ ಪದಾಧಿಕಾರಿಗಳು ಭಾಗಿಯಾಗಿದ್ದಾರೆ ಎಂದು ಬೆಂಗಳೂರಿನ ಜನಾಧಿಕಾರ ಸಂಘರ್ಷ ಪರಿಷತ್‌ನ ಆದರ್ಶ ಆರ್.ಐಯ್ಯರ್ ಎಂಬುವವರು ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಎಫ್‌ಐಆರ್ ದಾಖಲಿಸಲು ನಿರ್ದೇಶಿಸಿತ್ತು. ಅದರಂತೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಎ1 ಆರೋಪಿಯಾಗಿ, ಇಡಿ ಅಧಿಕಾರಿಗಳು ಎ2, ಕೇಂದ್ರ ಬಿಜೆಪಿ ಪದಾಧಿಕಾರಿಗಳು ಎ3, ನಳಿನ್ ಕುಮಾರ್ ಕಟೀಲ್ ಎ4, ಬಿ.ವೈ.ವಿಜಯೇಂದ್ರ ಎ5 ಹಾಗೂ ರಾಜ್ಯ ಬಿಜೆಪಿ ಪದಾಧಿಕಾರಿಗಳು ಎ6 ಆರೋಪಿಗಳನ್ನಾಗಿ ಮಾಡಿ ಬೆಂಗಳೂರಿನ ತಿಲಕ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇದರಲ್ಲಿ ಐಪಿಸಿ ಸೆಕ್ಷನ್ 384 (ಸುಲಿಗೆ), 120ಬಿ (ಅಪರಾಧಿಕ ಒಳಸಂಚು), 34 (ಸಮಾನ ಉದ್ದೇಶ) ಮೇಲೆ ಕೇಸ್ ದಾಖಲಾಗಿತ್ತು.

ಏನಿದು ಸುಲಿಗೆ?

ಜಾರಿ ನಿರ್ದೇಶನಾಲಯ ದುರ್ಬಳಕೆ ಮಾಡಿಕೊಂಡು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಹುರಾಷ್ಟ್ರೀಯ ಕಂಪನಿಗಳಿಂದ ಕೋಟ್ಯಂತರ ರುಪಾಯಿ ಸುಲಿಗೆ ಮಾಡಿ ರಾಷ್ಟ್ರೀಯ ಮತ್ತು ರಾಜ್ಯ ಬಿಜೆಪಿ ಬೊಕ್ಕಸ ತುಂಬಿಸಿದ್ದಾರೆ. ಜಾರಿ ನಿರ್ದೇಶನಾಲಯದ ಮೇಲೆ ಹಿಡಿತ ಹೊಂದಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಡಿ ಅಧಿಕಾರಿಗಳನ್ನು ಬಳಸಿ ಹಲವು ಕಾರ್ಪೊರೇಟ್ ಕಂಪನಿಗಳ ಕಾರ್ಯನಿರ್ವಹಣಾಧಿಕಾರಿ (ಸಿಇಒ), ವ್ಯವಸ್ಥಾಪಕ ನಿರ್ದೇಶನಕರ ಮೇಲೆ ದಾಳಿಯ ಬೆದರಿಕೆ ಹಾಕಿದ್ದಾರೆ. ಇದರಿಂದ ವಿಚಲಿತರಾಗಿರುವ ಕಾರ್ಪೊರೇಟ್ ಕಂಪನಿಗಳು ಬಹುಕೋಟಿ ಚುನಾವಣಾ ಬಾಂಡ್‌ಗಳನ್ನು ಖರೀದಿಸಿ ರಾಷ್ಟ್ರೀಯ ಮತ್ತು ರಾಜ್ಯ ಬಿಜೆಪಿಗೆ ದೇಣಿಗೆಯಾಗಿ ನೀಡಿವೆ. ಇವುಗಳನ್ನು ಬಿಜೆಪಿಯು ನಗದಾಗಿ ಪರಿವರ್ತಿಸಿಕೊಂಡಿದೆ ಎಂದು ಖಾಸಗಿ ಅರ್ಜಿಯಲ್ಲಿ ಆರೋಪಿಸಲಾಗಿದೆ.

'ಸರಕಾರ ಉರುಳಿಸಲು 1200 ಕೋಟಿ ರು.'

← ಮೊದಲಪುಟದಿಂದ

ಒಂದು ವೇಳೆ ಆದಾಯ ತೆರಿಗೆ ಇಲಾಖೆ ಈ ದೂರಿಗೆ ಸಂಬಂಧಿಸಿದಂತೆ ಕ್ರಮ ವಹಿಸದಿದ್ದರೆ, ಮುಂದಿನ ದಿನಗಳಲ್ಲಿ ಇದನ್ನೇ ಮುಂದಿಟ್ಟುಕೊಂಡು ಕಾನೂನು ಹೋರಾಟಕ್ಕೆ ಸಿದ್ಧತೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸೋಮವಾರ ಬೆಳಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ ಭೇಟಿಯಾಗಿ ಮುಂದಿನ ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.

ಬಸನಗೌಡ ಪಾಟೀಲ್ ಯತ್ನಾಳ್ 1200 ಕೋಟಿ ಆರೋಪದ ಬಗ್ಗೆ ನನಗೆ ಸರಿಯಾದ ಮಾಹಿತಿಯಿಲ್ಲ. ಅವರು ಡಿಕೆಶಿ ಅವರನ್ನು ಉದ್ದೇಶಿಸಿ ಹೇಳಿದ್ದಾರಾ ಗೊತ್ತಿಲ್ಲ. ಯತ್ನಾಳ್ ಆರೋಪದ ಬಗ್ಗೆ ತನಿಖೆ ಮಾಡುವುದಾದರೆ ಮಾಡಲಿ. ಯತ್ನಾಳ್ ಅವರು ಡಿಕೆಶಿ ಬಗ್ಗೆ ಮಾತನಾಡುತ್ತಾರೆ. ಡಿಕೆಶಿ ಉದ್ದೇಶಿಸಿ ಆ ರೀತಿ ಹೇಳಿರಬಹುದು. ನಮ್ಮ ಪಕ್ಷದಲ್ಲಿ ಆ ತರಹ ಯಾವುದೇ ಪದ್ಧತಿ ಇಲ್ಲ.
- ಆರ್.ಅಶೋಕ,
ವಿಧಾನಸಭಾ ಪ್ರತಿಪಕ್ಷ ನಾಯಕ

ಸರಕಾರ ಅಸ್ಥಿರಕ್ಕೆ 1200 ಕೋಟಿ ರುಪಾಯಿಗಳನ್ನು ಯಾರು ಇಟ್ಟುಕೊಂಡಿದ್ದಾರೆ ಎಂಬುದು ಗೊತ್ತಿಲ್ಲ. ಸಾವಿರ ಕೋಟಿ ರುಪಾಯಿ ನಾವು ನೋಡಿಲ್ಲ. ಯಾರು ಇಟ್ಟುಕೊಂಡಿದ್ದಾರೆ ಎಂಬುದನ್ನು ಯತ್ನಾಳ್ ಅವರನ್ನೇ ಕೇಳಬೇಕು. ಸರಕಾರ ಉರುಳಿಸಲು 1200 ಕೋಟಿ ರುಪಾಯಿ ಎಂದೆಲ್ಲಾ ಹೇಳುವುದು ಅಪರಾಧವಾಗುತ್ತದೆ. ಈ ಬಗ್ಗೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ತನಿಖೆ ಮಾಡಬೇಕಾಗುತ್ತದೆ.
-ಡಾ.ಜಿ.ಪರಮೇಶ್ವರ್,
ಗೃಹ ಸಚಿವ

16 ಚಿನ್ನದ ಪದಕ ಪಡೆದ ಅಮೂಲ್ಯ

ಬಾಗಲಕೋಟೆಯ ವಿವಿಯಲ್ಲಿ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ 16 ಚಿನ್ನದ ಪದಕ ಪಡೆದ ಅಮೂಲ್ಯ ಪಾಟೀಲ ಕುಟುಂಬದವರ ಜತೆ.

ಬಾಗಲಕೋಟೆ: ತೋಟಗಾರಿಕೆ ವಿಜ್ಞಾನಿಗಳ ವಿವಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ 13ನೇ ಘಟಿಕೋತ್ಸವದಲ್ಲಿ ಮತ್ತೊಮ್ಮೆ ವಿದ್ಯಾರ್ಥಿನಿಯರೇ ಚಿನ್ನದ ಪದಕ ಬೇಟೆಯಾಡುವ ಮೂಲಕ ಓದುವು ದರಲ್ಲಿ ಎಂದಿಗೂ ತಾವೇ ಮುಂದೆ ಎಂಬುವುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ. ಸಮೀಪದ ತಾವಿವಿಯಲ್ಲಿ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ ಬಿಎಸ್ಸಿ, ಎಂಎಸ್ಸಿ, ಬಿ.ಟೆಕ್ ಹಾಗೂ ಪಿಎಚ್.ಡಿಯಲ್ಲಿ ವಿದ್ಯಾರ್ಥಿನಿಯರೇ ಹೆಚ್ಚಿನ ಪದಕ ಪಡೆದು ಮೇಲುಗೈ ಸಾಧಿಸಿದ್ದಾರೆ.

ಚಿನ್ನದ ಬೆಡಗಿ: ಬಿಎಸ್ಸಿಯಲ್ಲಿ 16 ಚಿನ್ನದ ಪದಕ ಪಡೆಯುವ ಮೂಲಕ ಅಮೂಲ್ಯ ಪಾಟೀಲ ಚಿನ್ನದ ರಾಣಿಯಾಗಿದ್ದಾರೆ. ಬೀದರನ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಬಿಎಸ್ಸಿ ಪದವಿ ಪಡೆದಿರುವ ಅಮೂಲ್ಯಾ ಅವರಿಗೆ ಆಡಳಿತದ ಭಾಗವಾಗಿ ಸುಧಾರಣೆ ತರುವ ಮಹಾದಾಸೆಯನ್ನು ಹೊಂದಿದ್ದಾರೆ. ಅಮೂಲ್ಯ ತಂದೆ ಸಂಗಪ್ಪ ಪಾಟೀಲ ಬೀದರ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಡೀನ್ ಆಗಿದ್ದು, ಅಲ್ಲೇ ತಾಯಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೃಷಿ ಕುಟುಂಬ ದಿಂದ ಬಂದಿರುವ ಅಮೂಲ್ಯಾ ಅವರಿಗೆ ಇರದಲ್ಲೇ ಆಸಕ್ತಿ ಇರುವುದರಿಂದ ಶ್ರದ್ಧೆಯಿಂದ ಕಲಿತಿರುವ ಪರಿಣಾಮ ಈ ಸಾಧನೆ ಮಾಡಲು ಸಾಧ್ಯವಾಯಿತು ಎನ್ನುತ್ತಾರೆ ಚಿನ್ನದ ಬೇಡಗಿ ಅಮೂಲ್ಯ ಪಾಟೀಲ.

ರೈತರ ಮಗಳ ಸಾಧನೆ: ಒಂದು ಎಕರೆ ಜಮೀನಿನಲ್ಲಿ ತಂದೆ ಮಾಡುವ ಕೃಷಿ ನೋಡುತ್ತ ಅದರಲ್ಲಿ ಆಸಕ್ತಿ ಬೆಳೆಸಿಕೊಂಡ ಹುಡುಗಿ ಸ್ಮಿತಾ.ಎನ್ ಸದ್ಯ ಬಿಎಸ್ಸಿಯಲ್ಲಿ 5 ಚಿನ್ನದ ಪದಕ ಪಡೆಯುವ ರೈತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರವರ ಕಚೇರಿ, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು–560002
ಸಂ.: BBMP/C.Comm/PSR(G)/1882/2024-25 ನಮೂನೆ–3 ದಿನಾಂಕ : 27.09.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಪಟ್ಟಣ ಮತ್ತು ದೇಶ ಯೋಜನೆ ಕಾಯಿದೆ 1961 ರ ಸೆಕ್ಷನ್ 14–ಬಿ ರಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ ಈ ಕೆಳಗಿನ ಷೆಡ್ಯೂಲ್ ನಲ್ಲಿ ನಮೂದಿಸಿರುವ ಅಂಭಾಭವಾನಿ ದೇವಸ್ಥಾನದ ರಸ್ತೆಯಿಂದ ಬಿಬಿಎಂಪಿ ಮಿತಿಯವರೆಗೆ ಅಂಕಮ್ಮ ಲೇಔಟ್ (30.00 ಅಗಲದ ಗ್ಯಾಸ್ ಪೈಪ್ ಲೈನ್ ರಸ್ತೆ) ರಚಿಸುವ ಕಾಮಗಾರಿಗೆ ಅನುಮೋದಿತ ಮಾಸ್ಟರ್ ಪ್ಲಾನ್ 2015 ರ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು 30.00 ಮೀಟರುಗಳಿಗೆ ಅಗಲೀಕರಣಕ್ಕಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಅವಶ್ಯಕವಿರುತ್ತದೆ.

ಕೆಳಗಿನ ಭೂ /ಕಟ್ಟಡ ಮಾಲೀಕರು ನ್ಯಾಯಯುತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ಮರುವಸತಿ ಕಾಯಿದೆ 2013 ರಲ್ಲಿ ಪಾರದರ್ಶಕತೆ ಹಕ್ಕಿನ ಅಡಿಯಲ್ಲಿ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳನ್ನು ಆರಿಸಿಕೊಂಡಿದ್ದಾರೆ. ಭೂ ವಿಸ್ತೀರ್ಣಕ್ಕಿಂತ ಎರಡು ಪಟ್ಟು ಹೆಚ್ಚು ಒಪ್ಪಿಸಿದ ಭೂ ಪ್ರದೇಶಕ್ಕೆ ಮತ್ತು ಎರಡು ಪಟ್ಟು ಒಪ್ಪಿಸಿದ ಕಟ್ಟಡ ಪ್ರದೇಶಕ್ಕೆ ಮತ್ತು ಒಪ್ಪಿಸಿದ ಕಟ್ಟಡದ ಪ್ರದೇಶದ ಮೌಲ್ಯದಿಂದ ಅಂದಾಜಿಸಿದಂತೆ (ಪಿಡಬ್ಲ್ಯೂಡಿ ಮಾನದಂಡಗಳ ಪ್ರಕಾರ) ಕಟ್ಟಡವನ್ನು ನಿರ್ಮಿಸಿದ ಭೂಮಿಯ ಭಾಗಿಸಲಾದ ಮಾರುಕಟ್ಟೆ ಮೌಲ್ಯದ ಅಭಿವೃದ್ಧಿ ಹಕ್ಕುಗಳನ್ನು ಪ್ರಾಧಿಕಾರವು ನೀಡಲಿದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಡೆಪ್ಯೂಟಿ ಕಮಿಷನರ್‌ರವರ ಕಚೇರಿ (ಭೂ ಸ್ವಾಧೀನ & ಟಿಡಿಆರ್), ಮುಖ್ಯ ಕಚೇರಿ, ಬಿಬಿಎಂಪಿ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೆಳಗೆ ನಿರ್ದಿಷ್ಟಪಡಿಸಿದ ವಿಳಾಸದಲ್ಲಿ ಸಲ್ಲಿಸಬೇಕು:
ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ : ಜಿಲ್ಲಾಧಿಕಾರಿ, ಭೂಸ್ವಾಧೀನ ಮತ್ತು ಟಿಡಿಆರ್. 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಬಿಲ್ಡಿಂಗ್–3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು–560002

ಡಿಆರ್‌ಸಿ ನೀಡಬೇಕಾದ ಭೂಮಿ/ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು: ಬೆಂಗಳೂರು ನಗರ ತಾಲ್ಲೂಕಿನ ಹೆಸರು: ಯಲಹಂಕ ಗ್ರಾಮದ ಹೆಸರು: ದೊಡ್ಡಬೆಟ್ಟಹಳ್ಳಿ

Sl No	Sy No/ Khatha No	Type of Land		Nature of Land			Dimension of the land / plot and extent in sq.m		Boundaries of the land /plot				Building Details			Present activity on Land/ Building (Specify Specific activity such as shop, office, factory, apartment individual house etc.,	Market (guidelines) value of the land per Sqm*	Name and address of the owner of the plot/ land for which DRC is to be issued / already issued.
		Vacant	Built up	Agriculture	Converted Undeveloped	Approved layout / developed land Building Site	Dimension	Extent	North	South	East	West	Extent in Sqm	Type of Construction and No. of Floors	Floor area Ratio			
1	ಸರ್ವೆ ನಂ.13/11, ಬಿಬಿಎಂಪಿ ಎ ಖಾತಾ ಕ್ರಸಂ.5	ಖಾಲಿ ಜಾಗ			ಪರಿವರ್ತಿತ ಎ ಖಾತಾ ಭೂಮಿ		1416.38 ಚದರ ಮೀ		ಸರ್ವೆ ನಂ. 13/1	ಸರ್ವೆ ನಂ. 13/7	ಸರ್ವೆ ನಂ. 13/3	ಬೆಟ್ಟಹಳ್ಳಿ ಗ್ರಾಮದ ಗಡಿ	ಇಲ್ಲ	ಇಲ್ಲ	ಇಲ್ಲ	ಖಾಲಿ	60,000/- ಚದರ ಮೀ	ಶ್ರೀ.ಬಿ.ಎಂ ನಾರಾಯಣಸ್ವಾಮಿ. ಸಂ:34 ದೊಡ್ಡಬೆಟ್ಟಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕು ಬೆಂಗಳೂರು– 560097

ಈ ಆಸ್ತಿಯ ಮಾರುಕಟ್ಟೆ ಮಾರ್ಗಸೂಚಿಗಳ ಮೌಲ್ಯವನ್ನು ಶಾಸನಬದ್ಧ ಸೆಸ್/ಸರ್‌ಚಾರ್ಜ್‌ನ ಪಾವತಿ ಮತ್ತು ಪರಿವರ್ತನೆ ಪ್ರತಿಯನ್ನು ಸಲ್ಲಿಸುವ ಸರ್ಕಾರದ ಆದೇಶ ಸಂಖ್ಯೆ:ನಅಇ 137 ಎಂಎನ್‌ಯು 2024 (ಇ), ಬೆಂಗಳೂರು, ದಿನಾಂಕ:09.09.2004. ಪ್ರಕಾರ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಆಯುಕ್ತರು/ಪಿ.ಎಸ್.ಆರ್/ಜಿ/1802/2024–25, ದಿನಾಂಕ : 21.09.2024.

ಸಹಿ/–
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602
ಸಂಖ್ಯೆ: ಡಿವೈಇಎಸ್/ತಾಂಶಾಖೆ/ಕ್ರೀಯೋ/111/2024–25 ದಿನಾಂಕ : 27.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಕೋಲಾರದಲ್ಲಿ ಈಜುಕೊಳ ನಿರ್ಮಿಸುವ ಕಾಮಗಾರಿ ಮತ್ತು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಈಜುಕೊಳಕ್ಕೆ ಮೇಲ್ಛಾವಣಿ ಅಳವಡಿಸುವ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್ ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : (1) ಕೋಲಾರದಲ್ಲಿ ಈಜುಕೊಳ ನಿರ್ಮಿಸುವ ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ : ರೂ 452.93 ಲಕ್ಷಗಳು, ಇಎಂಡಿ ಮೊತ್ತ : 6,79,397.00 ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 07.10.2024 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 08.10.2024 ಸಮಯ : 16.30 ಗಂಟೆ. (2) ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಈಜುಕೊಳಕ್ಕೆ ಮೇಲ್ಛಾವಣಿ ಅಳವಡಿಸುವ ಕಾಮಗಾರಿ: ಟೆಂಡರ್‌ಗಿಟ್ಟ ಮೊತ್ತ : ರೂ 845.31 ಲಕ್ಷಗಳು, ಇಎಂಡಿ ಮೊತ್ತ : 12,67,966.00. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 18.10.2024 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.10.2024 ಸಮಯ : 16.30 ಗಂಟೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/2279/Zen/2024-25

ಗಾಂಧೀಜಿ ನೇತೃತ್ವದ ಬೆಳಗಾವಿ ಅಧಿವೇಶನಕ್ಕೆ ನೂರು ವರ್ಷ | ಪಕ್ಷ, ಸರಕಾರದಿಂದ ವಿಭಿನ್ನ ಕಾರ್ಯಕ್ರಮ

ನಾಳೆ ರಾಜ್ಯಾದ್ಯಂತ ಗಾಂಧಿ ನಡಿಗೆ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹಾತ್ಮ ಗಾಂಧಿ ಅವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷತೆ ಜತೆಗೆ ದೇಶದ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿಕೊಂಡು 100 ವರ್ಷಗಳಾಗಿವೆ. ಈ ನೆನಪಿಗೆ ರಾಜ್ಯಾದ್ಯಂತ 'ಗಾಂಧಿ ನಡಿಗೆ', 'ಸ್ವಚ್ಛತಾ ಪ್ರತಿಜ್ಞಾವಿಧಿ' ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರೊಂದಿಗೆ ಇಡೀ ವರ್ಷ ನಾನಾ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದ ರಾಜ್ಯದ ಉದ್ದಗಲಕ್ಕೂ ಅ.2ರ ಬೆಳಗ್ಗೆ 11 ಗಂಟೆಗೆ ಎಂ.ಜಿ ರಸ್ತೆಯ ಗಾಂಧಿ ಪ್ರತಿಮೆಯಿಂದ, ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದ ತನಕ 'ಗಾಂಧಿ ಜ್ಯೋತಿ ಪಾದಯಾತ್ರೆ' ನಡೆಸಲಾಗುವುದು. ಇದರೊಂದಿಗೆ ಸರಕಾರದ ವತಿಯಿಂದಲೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.

ಪಾದಯಾತ್ರೆ, ಕಾರ್ಯಕ್ರಮದಲ್ಲಿ ಬೆಂಗಳೂರಿನ ಶಾಸಕರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ವಿವಿಧ ಸಂಸ್ಥೆಗಳ ಸದಸ್ಯರು ಭಾಗವಹಿಸಲಿದ್ದಾರೆ. ಅಲ್ಲದೇ ರಾಜ್ಯದ ಎಲ್ಲಾ ಜಿಲ್ಲಾ, ತಾಲೂಕು ಮತ್ತು ಬ್ಲಾಕ್ ಮಟ್ಟದಲ್ಲಿ 'ಗಾಂಧಿ ನಡಿಗೆ' ಕಾರ್ಯಕ್ರಮ ನಡೆಯುತ್ತದೆ. ಎಲ್ಲಾ ಕೇಂದ್ರಗಳ ಕಾರ್ಯಕ್ರಮ ಜೂಮ್ ಮೂಲಕ ಏಕಕಾಲದಲ್ಲಿ ಬಿತ್ತರಗೊಳ್ಳಲಿದೆ. ನೇರವಾಗಿ ಹಾಗೂ ಜೂಮ್ ಮೂಲಕ ಸ್ವಚ್ಛತೆ ಹಾಗೂ ಗಾಂಧೀಜಿಯವರ ವಿಚಾರಗಳ ಬಗ್ಗೆ ಪ್ರತಿಜ್ಞಾ ವಿಧಿ ಭೋದನೆ ಮಾಡಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಬೆಳಗಾವಿಯಲ್ಲಿ ಜಂಟಿ ಅಧಿವೇಶನ: ಬೆಳಗಾವಿಯಲ್ಲಿ 1924 ರ ಡಿಸೆಂಬರ್‌ನಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಮಹಾತ್ಮ ಗಾಂಧಿ ಅವರು ಸ್ವಾತಂತ್ರ್ಯ ಹೋರಾಟದ ಜವಾಬ್ದಾರಿ ತೆಗೆದುಕೊಂಡರು. ಆದ ಕಾರಣಕ್ಕೆ ಡಿಸೆಂಬರ್ ಕೊನೆ ವಾರದಲ್ಲಿ ಸರಕಾರದಿಂದ ವಿಧಾನಸಭೆ ಜಂಟಿ ಅಧಿವೇಶನ ನಡೆಸಲಾಗುವುದು. ಬೆಳಗಾವಿ ಕಾಂಗ್ರೆಸ್ ಅಧಿವೇಶನ 100 ವರ್ಷಗಳ ಹಿಂದೆ ನಡೆದ ರೂಪುರೇಷೆಯಲ್ಲೇ ಪಕ್ಷದ ಅಧಿವೇಶನವನ್ನೂ ಪ್ರತ್ಯೇಕವಾಗಿ ನಡೆಸಲಾಗುವುದು. ಗಾಂಧೀಜಿ ಅವರ ತತ್ವ, ಸಿದ್ಧಾಂತ, ಸಂದೇಶ, ಕೊಡುಗೆಗಳನ್ನು ಮೆಲುಕು ಹಾಕುವ ಶತಾಬ್ದಿ ಕಾರ್ಯಕ್ರಮವನ್ನು ನಡೆಸಬೇಕು ಎಂದು ಸಮಿತಿ ಸಲಹೆ ನೀಡಿದೆ ಎಂದು ಹೇಳಿದರು.

> ಗಾಂಧಿ ಅವರು ಜವಾಬ್ದಾರಿ ತೆಗೆದುಕೊಂಡ ನಂತರ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ರೂಪುರೇಷೆ, ಹುರುಪು ಬಂದಿತು. ಅವರ ತತ್ವ, ಆದರ್ಶಗಳ ಬಗ್ಗೆ ಅರಿವನ್ನು ಮೂಡಿಸಬೇಕು. ಪಾದಯಾತ್ರೆಯಲ್ಲಿ ಭಾಗವಹಿಸುವವರು ಬಿಳಿ ಟೋಪಿ ಹಾಗೂ ವಸ್ತ್ರವನ್ನು ತೊಟ್ಟು ಹೆಜ್ಜೆ ಹಾಕಬೇಕು. ಸರಕಾರಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಧ್ವಜ, ಕನ್ನಡ ಧ್ವಜ ಬಳಸದೇ ರಾಷ್ಟ್ರಧ್ವಜ ಮಾತ್ರ ಬಳಸಬೇಕು.
> –ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

136 ಕಾಂಗ್ರೆಸ್ ಶಾಸಕರು ತಮ್ಮ ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಶಾಸಕರು ಇಲ್ಲದ ಕ್ಷೇತ್ರಗಳಲ್ಲಿ ವಿಧಾನಪರಿಷತ್ ಸದಸ್ಯರು, ಜಿಲ್ಲಾ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಪದಾಧಿಕಾರಿಗಳು ಕಾಯಕ್ರಮ ನಡೆಸಿಕೊಡಬೇಕು. ಕೇಂದ್ರ ಕಚೇರಿಯಿಂದ ಸೂಕ್ತ ಮಾರ್ಗದರ್ಶನ ನೀಡಲಾಗುವುದು ಎಂದು ಹೇಳಿದರು.

ಮಹಾತ್ಮ ಗಾಂಧಿ ಅವರು ಈ ದೇಶದ ಆಸ್ತಿ. ಜಾತಿ, ಧರ್ಮ ಭೇದ ಭಾವಗಳನ್ನು ಬಿಟ್ಟು ಒಂದೇ ಭಾರತ ಎನ್ನುವ ಕಲ್ಪನೆಯನ್ನು ಕೊಟ್ಟು ಹೋಗಿದ್ದಾರೆ. ಇಂತಹ ಕಾರ್ಯಕ್ರಮ ರೂಪಿಸುವ ಪುಣ್ಯ ನಮಗೆ ಸಿಕ್ಕಿದೆ. ಗಾಂಧಿ ಅವರ ಚಿಂತನೆಗಳು ಮುಂದಿನ ಪೀಳಿಗೆಗೆ ತಿಳಿಸುವ ಕೆಲಸ ಇದರಿಂದ ದೊರೆಯಲಿದೆ ಎಂದು ತಿಳಿಸಿದರು.

ಬಿಜೆಪಿಗೆ ದೇಶದ ಇತಿಹಾಸ ಗೊತ್ತಿಲ್ಲ

ಇಂದಿರಾ ಕಾಂಗ್ರೆಸ್ ಹಾಗೂ ಸ್ವಾತಂತ್ರ್ಯ ಹೋರಾಟದ ಕಾಂಗ್ರೆಸ್ ಬೇರೆ ಎನ್ನುವ ಬಿಜೆಪಿ ಆರೋಪದ ಬಗ್ಗೆ ಕೇಳಿದಾಗ, ಬಿಜೆಪಿಗೆ ಈ ದೇಶದ ಇತಿಹಾಸ ತಿಳಿದಿಲ್ಲ. ನೆಹರು ಅವರ ಕುಟುಂಬ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೆ. ಇಂದಿರಾ ಗಾಂಧಿ ಅವರೂ ಸ್ವಾತಂತ್ರ್ಯ ಹೋರಾಟದಲ್ಲಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದ ಬಿಜೆಪಿಗೆ ಹೋರಾಟದ ಮಹತ್ವ ಗೊತ್ತಿಲ್ಲ ಎಂದು ಟೀಕಿಸಿದರು.

ಕಾಂಗ್ರೆಸ್ ಅಂದರೆ ಗಾಂಧಿಜಿ, ಸರ್ದಾರ್ ವಲ್ಲಭಬಾಯಿ ಪಟೇಲ್ ಎಂದರೆ ಬಿಜೆಪಿ ಎನ್ನುವಂತಾಗಿದೆಯೇ ಎಂದು ಕೇಳಿದಾಗ, ಈ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಎಲ್ಲರನ್ನೂ ನಾವು ಗೌರವದಿಂದ ಕಾಣುತ್ತೇವೆ. ಕರ್ನಾಟಕದ ನೆಲದಲ್ಲಿ ಗಾಂಧಿ ಅವರು ನೇತೃತ್ವವಹಿಸಿದ ಕಾರಣಕ್ಕೆ ಈ ವಿಶೇಷ ಕಾರ್ಯಕ್ರಮ. ಕರ್ನಾಟಕದ ವರಾಗಿ ಒಟ್ಟಿಗೆ ಸಂಭ್ರಮಿಸೋಣ ಎಂದರು.

ಸರಕಾರದಿಂದ 'ಗಾಂಧಿ ನಡಿಗೆ' ಕಾರ್ಯಕ್ರಮ

ಅ.2ರಂದು ಬೆಳಗ್ಗೆ ಗಾಂಧಿ ಭವನದಿಂದ ವಿಧಾನಸೌಧದ ಗಾಂಧಿ ಪ್ರತಿಮೆಯ ತನಕ ಸುಮಾರು 1.5 ಕಿಮೀ ದೂರ 'ಗಾಂಧಿ ನಡಿಗೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಂತರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಸುಮಾರು 500 ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಜೂಮ್ ಮೂಲಕ ಇತರೇ ವಿದ್ಯಾರ್ಥಿಗಳಿಗೆ ಸ್ವಚ್ಛತಾ ಅಭಿಯಾನದ ಬಗ್ಗೆ ಪ್ರತಿಜ್ಞಾ ವಿಧಿ ಬೋಧಿಸಲಾಗುವುದು. ರಾಜ್ಯದ ಉದ್ದಗಲಕ್ಕೂ ಈ ಕಾರ್ಯಕ್ರಮ ನಡೆಯುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಆಯಾಯ ಕ್ಷೇತ್ರದ ಶಾಸಕರು ಸ್ಥಳೀಯ ಕಾರ್ಯಕ್ರಮಗಳ ನೇತೃತ್ವವಹಿಸುತ್ತಾರೆ. ಇಲ್ಲಿಯೂ ಸಹ ಒಂದು ಕಿಮೀ ದೂರ ಪಾದಯಾತ್ರೆ ನಡೆಸಲಾಗುವುದು ಎಂದರು.

ಪತಿಯ ಗೌರವಕ್ಕಿಂತ ಆಸ್ತಿ ದೊಡ್ಡದಲ್ಲ

ಮಾಧ್ಯಮಗಳಿಗೆ ಬಹಿರಂಗ ಪತ್ರ ಬರೆದ ಸಿಎಂ ಪತ್ನಿ ಪಾರ್ವತಿ

ನನ್ನ ಪತಿಯಾಗಿರುವ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ 40 ವರ್ಷದ ಸುದೀರ್ಘ ರಾಜಕಾರಣದಲ್ಲಿ ಯಾವುದೇ ಸಣ್ಣ ಕಳಂಕವೂ ಅಂಟಿಕೊಳ್ಳದಂತಹ ನೈತಿಕತೆಯನ್ನು ವ್ರತದಂತೆ ಪಾಲಿಸಿಕೊಂಡು ಬಂದವರು. ರಾಜಕೀಯವೂ ಸೇರಿದಂತೆ ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಂಡು ಅವರಿಗೆ ಮುಜುಗರ ಉಂಟು ಮಾಡಬಾರದು ಎಂಬ ನಿರ್ಧಾರಕ್ಕೆ ಬದ್ಧಳಾಗಿ ಬದುಕಿದವಳು.

ನಾನೆಂದೂ ಮನೆ, ಆಸ್ತಿ, ಚಿನ್ನ, ಸಂಪತ್ತನ್ನು ಬಯಸಿದವಳಲ್ಲ. ಯಾವುದೇ ಕಾರಣಕ್ಕೂ ನನ್ನಿಂದ ಅವರ ರಾಜಕೀಯ ಜೀವನಕ್ಕೆ ಒಂದು ಸಣ್ಣ ಹನಿಯಷ್ಟೂ ಕಳಂಕ ತಟ್ಟಬಾರದೆಂದು ಎಚ್ಚರಿಕೆಯಿಂದ ನಡೆದುಕೊಂಡವಳು.

- ರಾಜಕೀಯ ಕಾರಣಕ್ಕೆ ರಾಜಕೀಯ ಕುಟುಂಬದ ಹೆಣ್ಣು ಮಕ್ಕಳನ್ನು ಘನತೆಗೆ ಕುಂದುತರಬೇಡಿ
- ನಿವೇಶನ ವಾಪಸು ಮಾಡಲು ಮೊದಲ ದಿನವೇ ನಿರ್ಧರಿಸಿದ್ದೆ
- ಮನೆ, ಆಸ್ತಿ, ಚಿನ್ನಕ್ಕೆ ಆಸೆಪಟ್ಟಿಲ್ಲ; ಪತಿಯ ರಾಜಕೀಯ ಜೀವನಕ್ಕೆ ಕಳಂಕ ತರದಂತೆ ನಡೆದುಕೊಂಡಿದ್ದೆ

ನನ್ನ ಪತಿಗೆ ರಾಜ್ಯದ ಜನತೆ ಹರಿಸುತ್ತಾ ಬಂದ ಪ್ರೀತಿ ಅಭಿಮಾನಗಳನ್ನು ದೂರದಿಂದಲೇ ಕಂಡು ಸಂತೋಷ ಮತ್ತು ಹೆಮ್ಮೆ ಪಟ್ಟವಳು. ಹೀಗಿದ್ದರೂ ಮೈಸೂರಿನ ಮುಡಾ ನಿವೇಶನಕ್ಕೆ ಸಂಬಂಧಿಸಿದಂತೆ ಕೇಳಿಬಂದ ಆರೋಪಗಳಿಂದ ನಾನು ಘಾಸಿಗೊಂಡಿದ್ದೇನೆ. ನನ್ನ ಸ್ವಂತ ಸೋದರ ಅರಿಶಿನ – ಕುಂಕುಮದ ಭಾಗವಾಗಿ ಕೊಟ್ಟ ಜಮೀನಿನ ಬಾಪ್ತು ಪಡೆದ ನಿವೇಶನಗಳು ಇಷ್ಟೊಂದು ರಾದ್ಧಾಂತವಾಗುತ್ತದೆ. ಇದರಿಂದ ನನ್ನ ಪತಿಯವರು ಅನ್ಯಾಯವಾಗಿ ಆರೋಪಗಳನ್ನು ಎದುರಿಸುವಂತಾಗಬಹುದು ಎನ್ನುವುದನ್ನು ನಾನು ಊಹಿಸಿದವಳೂ ಅಲ್ಲ.

ನನಗೆ ಈ ನಿವೇಶನ, ಮನೆ, ಆಸ್ತಿ, ಸಂಪತ್ತು ಯಾವುದೂ ಕೂಡ ನನ್ನ ಪತಿಯ ಗೌರವ, ಘನತೆ, ಮರ್ಯಾದೆ ಮತ್ತು ಅವರ ನೆಮ್ಮದಿಗಿಂತ ದೊಡ್ಡದಲ್ಲ. ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಅವರಿಂದ ಏನನ್ನೂ ನನಗಾಗಲೀ, ನನ್ನ ಕುಟುಂಬಕ್ಕಾಗಲೀ ಬಯಸದೇ ಇದ್ದ ನನಗೆ ಈ ನಿವೇಶನಗಳು ತೃಣಕ್ಕೆ ಸಮ. ಈ ಹಿನ್ನೆಲೆಯಲ್ಲಿ ವಿವಾದಕ್ಕೆ ಕಾರಣವಾಗಿರುವ ಮುಡಾದ 14 ನಿವೇಶನಗಳನ್ನು ವಾಪಸ್ ಮಾಡಲು ನಿರ್ಧರಿಸಿದ್ದೇನೆ.

ಈ ಬಗ್ಗೆ ನನ್ನ ಪತಿಯವರ ಅಭಿಪ್ರಾಯ ಏನಿದೆ ಎನ್ನುವುದು ನನಗೆ ತಿಳಿದಿಲ್ಲ. ನನ್ನ ಮಗನ ಬಳಿಯಾಗಲಿ, ನನ್ನ ಕುಟುಂಬದ ಇತರ ಸದಸ್ಯರ ಬಳಿಯಾಗಲಿ ಇದರ ಬಗ್ಗೆ ನಾನು ಚರ್ಚಿಸಿಲ್ಲ. ಇದು ನಾನು ನನ್ನ ಆತ್ಮ ಸಾಕ್ಷಿಯ ಕರೆಗೆ ಓಗೊಟ್ಟು ಪ್ರಜ್ಞಾಪೂರ್ವಕವಾಗಿ ಕೈಗೊಂಡಿರುವ ತೀರ್ಮಾನ.

ಈ ಹಂತದಲ್ಲಿ ಇಂತಹ ನಿರ್ಧಾರಕ್ಕೆ ಏಕೆ ಬಂದಿರಿ? ಎಂದು ಯಾರಾದರೂ ಕೇಳಬಹುದು. ಆರೋಪ ಕೇಳಿ ಬಂದ ದಿನವೇ ನಾನು ಈ ನಿರ್ಧಾರ ಮಾಡಿದ್ದೆ. ಆದರೆ, ಈ ಮುಡಾ ನಿವೇಶನ ಹಂಚಿಕೆಯ ಆರೋಪವನ್ನು ರಾಜಕೀಯ ದುರುದ್ದೇಶದಿಂದ ಮಾಡಲಾಗಿದ್ದು, ಈ ಅನ್ಯಾಯದ ವಿರುದ್ಧ ಹೋರಾಡಬೇಕು. ಅವರ ಸಂಚಿಗೆ ನಾವು ಬಲಿಯಾಗಬಾರದು ಎಂದು ಕೆಲವು ಹಿತೈಷಿಗಳು ಹೇಳಿದ ಕಾರಣಕ್ಕೆ ನಿವೇಶನ ವಾಪಸು ಮಾಡಬೇಕೆಂಬ ನಿರ್ಧಾರವನ್ನು ಕೈ ಬಿಟ್ಟಿದ್ದೆ.

ನನ್ನ ಈ ನಿರ್ಧಾರ ಅಚಲವಾಗಿದ್ದು, ಈ ನಿವೇಶನಗಳನ್ನು ವಾಪಸು ನೀಡುವುದರ ಜೊತೆಗೆ ಮುಡಾಕ್ಕೆ ಸಂಬಂಧಿಸಿದ ಎಲ್ಲಾ ಆರೋಪಗಳ ಬಗ್ಗೆ ಸಮಗ್ರ ತನಿಖೆ ಮಾಡಬೇಕೆಂದು ಆಗ್ರಹಿಸುತ್ತೇನೆ. ಕೊನೆಯದಾಗಿ, ಎಲ್ಲಾ ರಾಜಕೀಯ ಪಕ್ಷದ ನಾಯಕರು ಮತ್ತು ಮಾಧ್ಯಮ ಕ್ಷೇತ್ರದ ಬಂಧುಗಳಲ್ಲಿ ನನ್ನ ವಿನಮ್ರ ವಿನಂತಿ. ದಯವಿಟ್ಟು ರಾಜಕೀಯ ಕ್ಷೇತ್ರದಿಂದ ದೂರವಿದ್ದು, ತಮ್ಮ ಪಾಡಿಗೆ ತಾವಿರುವ ರಾಜಕೀಯ ಕುಟುಂಬದ ಹೆಣ್ಣು ಮಕ್ಕಳನ್ನು ರಾಜಕೀಯ ದ್ವೇಷ ಸಾಧನೆಗಾಗಿ ವಿವಾದದ ಕಣಕ್ಕೆ ಎಳೆದು ತಂದು ಅವರ ಘನತೆ, ಗೌರವಗಳಿಗೆ ಹಾನಿ ಮಾಡಬೇಡಿ.

ಪಾರ್ವತಿ
ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ

ಬಿಜೆಪಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿರುಗೇಟು

ವೇತನ ಬಾಕಿ; ಹಿಂದಿನ ಸರಕಾರ ತಪ್ಪು

ಕೊಪ್ಪಳ: ಅಧಿಕಾರವಧಿ ಮುಗಿಯುವಾಗ ಸಾರಿಗೆ ನಿಗಮಗಳಿಗೆ ಕೊಡಬೇಕಿದ್ದ 2023 ರಲ್ಲಿ 5900 ಕೋಟಿ ರು. ಬಾಕಿ ಉಳಿಸಿರುವ ಬಿಜೆಪಿಗೆ ನಮ್ಮ ಸರಕಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಸಾರಿಗೆ ನಿಗಮಗಳ ಹಣ ಬಾಕಿ ವಿಚಾರ ಕುರಿತು ಬಿಜೆಪಿಯ ಟ್ವೀಟ್ ಗೆ ಪ್ರತಿಕ್ರಿಯೆ ನೀಡಿದರು. ಸಾರಿಗೆ ನಿಗಮಗಳಿಗೆ ಸರಕಾರದಿಂದ 7625 ಕೋಟಿ ಹಣ ಬಾಕಿ ಬಗ್ಗೆ ಬಿಜೆಪಿ ಟ್ವೀಟ್ ಮಾಡಿರಬಹುದು. ಬಿಜೆಪಿಗರಿಗೆ ಮಾಡಲು ಕೆಲಸವಿಲ್ಲ. ಅವರಿಗೆ ಏನು ತಿಳುವಳಿಕೆಯೂ ಇಲ್ಲ ಈ ಕಾರಣಕ್ಕೆ ಇಂಥ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಕಳೆದ ಸರಕಾರದ ಅವಧಿಯಲ್ಲಿ ಬಿಎಂಟಿಸಿ ಹೊರತುಪಡಿಸಿ ಬೇರೆ ನಿಗಮದಲ್ಲಿ ಒಂದು ಬಸ್ ಕೂಡಾ ಖರೀದಿ ಮಾಡಿರಲಿಲ್ಲ. ನಮ್ಮ ಸರಕಾರದ ಬಂದ ನಂತರ 6300 ಬಸ್ ಖರೀದಿಸುವ ಪ್ರಕ್ರಿಯೆ ಆರಂಭವಾಗಿದೆ. ಖಾಲಿ ಇರುವ 9 ಸಾವಿರ ನೇಮಕ ನಡೆಯುತ್ತಿವೆ. ಈ ಹಿನ್ನೆಲೆ ಬಿಜೆಪಿಯಿಂದ ಹೇಳಿಸಿಕೊಳ್ಳುವ ಅವಶ್ಯಕತೆ ನಮಗೆ ಇಲ್ಲ. ಸಾರಿಗೆ ನಿಗಮಗಳ ಕಾರ್ಮಿಕರಿಗೆ ನೀಡಬೇಕಿದ್ದ ಹಣ ಬಾಕಿ ಇರುವುದು ಸತ್ಯ. ಆದರೆ, ಅದನ್ನು ಉಳಿಸಿ ಹೋಗಿದ್ದು ಹಿಂದಿನ ಸರಕಾರ. ಈಗ ಆರೋಪ ಮಾಡುವವರೇ ಆರೋಪಿಗಳು ಎಂದು ತಿರುಗೇಟು ನೀಡಿದರು.

> ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಆರ್‌ಎಸ್‌ಎಸ್ ಕಚೇರಿ, ಕೇಶವ ಕೃಪಾದಲ್ಲಿ ಅಧಿಕಾರಿಗಳ ಪತ್ರಗಳು ಸಿದ್ಧಗೊಳ್ಳುತ್ತಿ ದ್ದವು? ಎಡಿಜಿಪಿ ಚಂದ್ರಶೇಖರ ಅವರು ಬರೆದ ಪತ್ರದ ಬಗ್ಗೆ ಕುಮಾರಸ್ವಾಮಿ ಏನಾದರೂ ಕ್ರಮ ಕೈಗೊಳ್ಳಲಿ. ಆದರೆ, ಪತ್ರ ಕಾಂಗ್ರೆಸ್ ಕಚೇರಿಯಲ್ಲಿ ಬರೆಯಲಾಗಿದೆ ಎಂಬ ಅರ್ಥದ ಮಾತು ಸರಿಯಲ್ಲ. ನಾವು ಕಾಂಗ್ರೆಸ್ ಆಫೀಸ್ ನಲ್ಲಿ ರೆಡಿ ಮಾಡುತ್ತೇವೆ ಎನ್ನುವುದಾದರೆ ಅವರು, ಕೇಶವ ಕೃಪದಲ್ಲಿ ಬರೆಸುತ್ತಿದ್ದೀರಾ . ಕುಮಾರಸ್ವಾಮಿ ಹಾಗೂ ಪ್ರಹ್ಲಾದ ಜೋಶಿ ತೂಕವಾಗಿ ಮಾತನಾಡಲಿ.
> –ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ನಾವು ಸುಳ್ಳು –ನಕಲಿ ಮಾತನಾಡುವುದಿಲ್ಲ

ಸಾರಿಗೆ ನಿಗಮಗಳಿಗೆ 1600 ಕೋಟಿ ರು. ಶಕ್ತಿ ಯೋಜನೆಯ ಹಣ ಬರಬೇಕಿದೆ. ಶೀಘ್ರವೇ ಪಾವತಿ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಶಕ್ತಿ ಯೋಜನೆಯಿಂದ ಸಾರಿಗೆ ನಿಗಮಗಳಿಗೆ ಆದಾಯ ಹೆಚ್ಚಾಗಿದೆ. ಬಿಜೆಪಿಗರಂತೆ ನಾವು ಸುಳ್ಳು-ನಕಲಿ ಮಾತನಾಡುವುದಿಲ್ಲ. ಸಾರಿಗೆ ನಿಗಮಗಳ ಯೂನಿಯನ್ ಲೀಡರ್ ಜತೆ ಮಾತನಾಡಿದ್ದೇನೆ. ಕಾರ್ಮಿಕರಿಗೆ ಕೊಡುವುದನ್ನು ಕೊಡಲೇಬೇಕು. ಬಿಜೆಪಿಗರಿಗೆ ನನ್ನ ಮುಂದೆ ಬಂದು ಮಾತನಾಡಲು ಹೇಳಿ.ಟ್ವೀಟ್ ಮಾಡುವುದನ್ನು ಬಿಟ್ಟು ನನ್ನ ಮುಂದೆ ಚರ್ಚಿಸಲಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪಂಥಾಹ್ವಾನ ನೀಡಿದರು.

ಅಕ್ರಮ ಗಣಿಗಾರಿಕೆ, ಸಾಗಾಣಿಕೆ, ಹಣ ವರ್ಗಾವಣೆಯ ಆರೋಪ ಎದುರಿಸುತ್ತಿದ್ದ ರೆಡ್ಡಿ

14 ವರ್ಷದ ಬಳಿಕ ಬಳ್ಳಾರಿಗೆ ರೆಡ್ಡಿ ಪ್ರವೇಶ

ಬಳ್ಳಾರಿ: ಅಕ್ರಮ ಗಣಿಗಾರಿಕೆ, ಸಾಗಾಣಿಕೆ, ಹಣ ವರ್ಗಾವಣೆಯ ಆರೋಪ ಎದಿರಿಸುತ್ತಿರುವ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರಿಗಿದ್ದ ಬಳ್ಳಾರಿ ಜಿಲ್ಲೆಯ ಪ್ರವೇಶ ನಿಷೇಧವನ್ನು ಸುಪ್ರೀಂ ಕೋರ್ಟ್ ಸೋಮವಾರ ತೆರವುಗೊಳಿಸಿದ್ದು ಈ ಮೂಲಕ 14 ವರ್ಷಗಳ ವನವಾಸ ಅಂತ್ಯಗೊಂಡಿದೆ.

ಈವರೆಗೂ ಬಳ್ಳಾರಿಗೆ ತೆರಳಲು ಜನಾರ್ದನ ರೆಡ್ಡಿ ನ್ಯಾಯಾಲಯದಿಂದ ಪೂರ್ವಾನುಮತಿ ಪಡೆಯಬೇಕಿತ್ತು. ಇದನ್ನು ಪ್ರಶ್ನಿಸಿ ಅವರ ಪರ ವಕೀಲರು ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಸುಪ್ರಿಂಕೋರ್ಟ್ ನ್ಯಾಯಮೂರ್ತಿ ಎಂ.ಎಂ.ಸುಂದರೇಶ್ ನೇತೃತ್ವದ ದ್ವಿಸದಸ್ಯ ಪೀಠ, ಬಳ್ಳಾರಿ , ಕಡಪ ಮತ್ತು ಅನಂತಪುರ ಜಿಲ್ಲೆಗಳಿಗೆ ತೆರಳಲು ಹಾಕಿದ್ದ ನಿರ್ಬಂಧವನ್ನು ತೆರವು ಮಾಡಿತು.

ಈ ಹಿಂದೆ ರೆಡ್ಡಿ ತಮ್ಮ ಪುತ್ರಿಯ ವಿವಾಹ ಹಾಗೂ ಹೆರಿಗೆ ಸಂದರ್ಭದಲ್ಲಿ ಮಾತ್ರ ಬಳ್ಳಾರಿ ಪ್ರವೇಶಕ್ಕೆ ನ್ಯಾಯಾಲಯ ಅನುಮತಿ ನೀಡಿತ್ತು. ಅವರು ಜಿಲ್ಲೆಗೆ ಬಂದರೆ ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳ ಮೇಲೆ ಪ್ರಭಾವ ಬೀರಬಹುದೆಂಬ ಹಿನ್ನಲೆಯಲ್ಲಿ ಬಳ್ಳಾರಿ ಜಿಲ್ಲೆಗೆ ಕಾಲಿಡದಂತೆ ನಿರ್ಬಂಧ ಹಾಕಲಾಗಿತ್ತು. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಜನಾರ್ದನ ರೆಡ್ಡಿ ಜೈಲುಪಾಲಾಗಿದ್ದರು.

> ಭಗವಂತನ ಆಶೀರ್ವಾದದಿಂದ ಕಷ್ಟದ ದಿನಗಳು ಮುಗಿಯಲು ಬರುತ್ತಿವೆ. ನಾವು ಏನೇ ಮಾಡಿದರೂ ಕೂಡ ವಿಧಿ ಮತ್ತು ದೇವರ ಆಟದಲ್ಲಿ ಮನುಷ್ಯರಾಗಿ ಬದುಕಬೇಕಾಗುತ್ತದೆ. ನನ್ನ ವಿಧಿಯಲ್ಲಿ ಹುಟ್ಟೂರಿನಿಂದ 14 ವರ್ಷ ದೂರ ಇರಬೇಕು ಅಂತಾ ಭಗವಂತ ಬರೆದಿದ್ದ. ಶ್ರೀರಾಮಚಂದ್ರನಿಗೇ ಕಷ್ಟ ತಪ್ಪಿಲ್ಲ, ಇನ್ನು ಸಾಮಾನ್ಯ ಜನ ನಾವು ಯಾವ ಲೆಕ್ಕ. ಬಳ್ಳಾರಿಗೆ ಅನುಮತಿ ಸಿಕ್ಕಿರುವುದು ಭಗವಂತನ ಕೃಪೆ. ನನ್ನೂರಿನಲ್ಲಿ ನೆಮ್ಮದಿ ಯಿಂದ ಬದುಕುತ್ತೇನೆ ಎನ್ನುವುದೆ ಖುಷಿ.
> –ಗಾಲಿ ಜನಾರ್ದನ ರೆಡ್ಡಿ, ಮಾಜಿ ಸಚಿವ

7 ಪ್ರಕರಣ ದಾಖಲಾಗಿತ್ತು

ಬೇಲೆಕೇರಿ ಅದಿರು ನಾಪತ್ತೆ ಸೇರಿದಂತೆ ಅಕ್ರಮ ಗಣಿಗಾರಿಕೆ, ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ರೆಡ್ಡಿ ವಿರುದ್ಧ ಒಟ್ಟು ಏಳು ಪ್ರಕರಣಗಳು ದಾಖಲಾಗಿ ದ್ದವು. ಎಲ್ಲಾ ಪ್ರಕರಣಗಳಲ್ಲೂ ಜಾಮೀನು ಪಡೆದಿದ್ದ ರೆಡ್ಡಿ, ಒಬಳಾಪುರಂ ಮೈನಿಂಗ್ ಪ್ರಕರಣದಲ್ಲಿ ಮಾತ್ರ ಜಾಮೀನು ಸಿಗಬೇಕಿತ್ತು. ಈಗ ಅದೂ ಸಿಕ್ಕಿದ್ದು, ರೆಡ್ಡಿ ಜೈಲಿನಿಂದ ಹೊರ ಬಂದಿದ್ದರು.

ತಾಂತ್ರಿಕ ದೋಷ: ತುರ್ತು ಭೂಸ್ಪರ್ಶ

ಕೋಲಾರ: ಬೆಂಗಳೂರಿನ ಯಲಹಂಕ ವಾಯುನೆಲೆ ಯಿಂದ ಚೆನ್ನೈನ ತಂಬರಂ ವಾಯುನೆಲೆಗೆ ತೆರಳುತ್ತಿದ್ದ ಭಾರತೀಯ ವಾಯುಪಡೆಗೆ (ಐಎಎಫ್) ಸೇರಿದ ಚೇತಕ್ ಹೆಲಿ ಕಾಪ್ಟರ್ ತಾಂತ್ರಿಕ ದೋಷದಿಂದ ಕೆಜಿಎಫ್ ತಾಲೂಕಿನ ದೊಡ್ಡೂರು ಕರಪನಹಳ್ಳಿಯಲ್ಲಿ ತುರ್ತು ಭೂ ಸ್ಪರ್ಶ ಮಾಡಿದೆ. ಮೂಲಗಳ ಪ್ರಕಾರ ವಿಮಾನದಲ್ಲಿ ಮೂವರು ಪೈಲಟ್‌ಗಳಿದ್ದರು. ಡಿಕೆ ಹಳ್ಳಿಯಲ್ಲಿ ಹೆಲಿಕಾಪ್ಟರ್ ಬಂದಿಳಿದ ಬಗ್ಗೆ ತಮ್ಮ ಹೊಲದಲ್ಲಿದ್ದ ಕೆಲಸ ಮಾಡುತ್ತಿದ್ದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸ್ ತಂಡವು ಕೂಡಲೇ ಸ್ಥಳಕ್ಕೆ ಧಾವಿಸಿತು. ಹೆಲಿಕಾಪ್ಟರ್ ತಾಂತ್ರಿಕ ಸಮಸ್ಯೆಗಳಿಂದ ಕೂಡಿದ್ದರಿದ ಸಿಬ್ಬಂದಿ ತುರ್ತು ಭೂಸ್ಪರ್ಶ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಹೆಲಿಕಾಪ್ಟರ್ ಸಹಿತ ವಿಮಾನದಲ್ಲಿದ್ದ ವರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಂ.ಶಾಂತರಾಜು ತಿಳಿಸಿದ್ದಾರೆ.

ನಿಷ್ಪಕ್ಷಪಾತ ತನಿಖೆ ಸಿಬಿಐನಿಂದ ನಡೆಯುತ್ತದೆ

ತಪ್ಪಿನ ರಕ್ಷಣೆಗೆ ಸಿಎಂ ಷಡ್ಯಂತ್ರ

ಬೆಂಗಳೂರು: ವಿಧಾನಮಂಡಲದ ಸದನ ಅನಿರ್ದಿಷ್ಟ ಕಾಲ ಮುಂದೂಡಲ್ಪಟ್ಟ ದಿನವೇ ಮನೀಶ್ ಖರ್ಬೀಕರ್ ಅವರನ್ನು ಲೋಕಾಯುಕ್ತ ಎಡಿಜಿಯಾಗಿ ಸಿಎಂ ಆದೇಶ ಹೊರಡಿಸಿದ್ದು, ಇದರ ಹಿಂದೆ ತಮ್ಮ ತಪ್ಪು ಮುಚ್ಚಿಕೊಳ್ಳುವ ಷಡ್ಯಂತ್ರ ನಡೆದಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲೋಕಾಯುಕ್ತ ಪೊಲೀಸ್ ಅಧಿಕಾರಿಗೆ ಹೆಚ್ಚುವರಿಯಾಗಿ ಸರಕಾರದ ಅಧೀನ ಸಂಸ್ಥೆಗಳ ತನಿಖೆ ಜವಾಬ್ದಾರಿ ಕೊಟ್ಟ ಉದಾಹರಣೆ ದೇಶದಲ್ಲಿ ಇಲ್ಲ. ಇಂತಹ ಕೆಟ್ಟ ಪರಂಪರೆ ಸಿಎಂ ಸಿದ್ದರಾಮಯ್ಯ ಆರಂಭಿಸಿದ್ದಾರೆ ಎಂದರು.

ನಿಷ್ಪಕ್ಷಪಾತ ತನಿಖೆ ಸಿಬಿಐನಿಂದಲೇ ಆಗಬೇಕು. ನ್ಯಾಯಾಲಯದ ಮೂಲಕ ಸಿಬಿಐ ತನಿಖೆ ನಡೆಸುವ ಪ್ರಕ್ರಿಯೆ ಆಗಬೇಕು. ಮುಖ್ಯಮಂತ್ರಿ ವಿರುದ್ಧ ಅಧಿಕಾರಿಗಳು ಯಾವ ರೀತಿ ತನಿಖೆ ಕೈಗೊಳ್ಳಬಹುದು ಎಂದು ಪ್ರಶ್ನಿಸಿದ ಅವರು, ಆರೋಪಿತ ಮುಖ್ಯಮಂತ್ರಿಯನ್ನು ತೀವ್ರ ವಿಚಾರಣೆಗೆ ಒಳಪಡಿಸುವ ಧೈರ್ಯ ಪೊಲೀಸ್ ಅಧಿಕಾರಿಗಳಿಗೆ ಇದೆಯೇ ಎಂದರು.

ಶಕ್ತಿ ಕುಂದಿಸಿದ್ದ ಮುಖ್ಯಮಂತ್ರಿ

ತಮ್ಮ ವಿರುದ್ಧದ ಪ್ರಕರಣ ಸಿಬಿಐ ಅಥವಾ ಲೋಕಾಯುಕ್ತಕ್ಕೆ ಹೋಗಲಿದೆ ಎಂದು ಸಿಎಂ ಮೊದಲೇ ಗ್ರಹಿಸಿದ್ದರು. ಹಾಗಾಗಿ ತಮ್ಮನ್ನು ರಕ್ಷಿಸಲು ಆ ಸ್ಥಾನ ದುರ್ಬಳಕೆ ಮಾಡಿಕೊಂಡಿದ್ದಾರೆ. ಅವರ ವಿರುದ್ಧ 70ಕ್ಕೂ ಹೆಚ್ಚು ಪ್ರಕರಣಗಳು ತನಿಖಾ ಹಂತದಲ್ಲಿ ಇರುವಾಗ ಲೋಕಾಯುಕ್ತದ ಶಕ್ತಿ ಕುಂದಿಸುವ ಕೆಲಸ ಮುಖ್ಯಮಂತ್ರಿ ಮಾಡಿದ್ದರು. ಮುಡಾ ಪ್ರಕರಣ ದಾಖಲಾಗುತ್ತಿದ್ದಂತೆ ಮುಖ್ಯಮಂತ್ರಿಗಳು ತಮ್ಮ ರಕ್ಷಣೆ ಮಾಡಿಕೊಳ್ಳಲು ಸಚಿವ ಸಂಪುಟದ ಅನುಮತಿ ಇಲ್ಲದೇ ಸಿಬಿಐ ತನಿಖೆ ಮಾಡಬಾರದು ಎಂಬ ಬದಲಾವಣೆ ಮಾಡಿ ಭ್ರಷ್ಟಾಚಾರ ಮುಚ್ಚಿಟ್ಟುಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ದೂರಿದರು.

1934ರಲ್ಲಿ ಸ್ಥಾಪನೆಯಾದ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ

ಇಡಗುಂಜಿ ಮೇಳಕ್ಕೆ ಯುನೆಸ್ಕೋ ಮಾನ್ಯತೆ

ಕಾರವಾರ: ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಸಂಸ್ಥೆಗೆ ವಿಶ್ವಸಂಸ್ಥೆಯ ಮಾನ್ಯತೆ ಲಭ್ಯವಾಗಿದೆ.

ಯಕ್ಷಗಾನ ರಂಗ ಭೂಮಿಯ ಇತಿಹಾಸವನ್ನು ಹಲವು ಸರ್ವ ಪ್ರಥಮಗಳ ದಾಖಲೆ ನಿರ್ಮಿಸಿದ ಮಂಡಳಿ, ಇಂದು ವಿಶ್ವಸಂಸ್ಥೆಯ ಗೌರವ ಪಡೆದುಕೊಂಡಿದ್ದು, ಯಕ್ಷಗಾನ ಸಂಸ್ಥೆಯೊಂದಕ್ಕೆ ಈ ಮಾನ್ಯತೆ ಪ್ರಥಮ ಬಾರಿಯಾಗಿ ಬಂದಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ 1934ರಲ್ಲಿ ಸ್ಥಾಪನೆಯಾದ ಮಂಡಳಿಗೆ ಈಗ 90ನೇ ವರ್ಷದ ಸಂಭ್ರಮ. ಇದೇ ಸಂದರ್ಭದಲ್ಲಿ ವಿಶ್ವಮನ್ನಣೆ ಸಂಸ್ಥೆಗೆ ದೊರಕಿದ್ದು, ಅತಿಯಾದ ಹೆಮ್ಮೆ ಸಂತೋಷದ ಸಂಗತಿಯಾಗಿದೆ ಎಂದು ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದ್ದಾರೆ.

ವಿಶ್ವದ 58 ರಾಷ್ಟ್ರೀಯ ಸಂಸ್ಥೆಗಳ ಪೈಕಿ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಒಂದಾಗಿದೆ ಎಂಬುದು ಇಡೀ ಕರ್ನಾಟಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಜೂನ್ ತಿಂಗಳಿನಲ್ಲಿ ಯುನೆಸ್ಕೋ ಮುಖ್ಯ ಕಚೇರಿಯಲ್ಲಿ ನಡೆದ 10ನೇ ಅಧಿವೇಶನದಲ್ಲಿ ಮಂಡಳಿಗೆ ಮಾನ್ಯತೆ ಘೋಷಿಸಲಾಗಿದೆ. ಯುನೆಸ್ಕೋ 2003ರ ಅಮೂರ್ತ ಸಾಂಸ್ಕೃತಿಕ ಪರಂಪರೆ, ಸಂರಕ್ಷಣೆ, ಆಂತರಿಕ ಸಮಿತಿಗೆ ಸಲಹೆ ಮಾಡಲು ಮಂಡಳಿ ಮಾನ್ಯತೆ ಪಡೆದಿದೆ ಎಂದು ಹೇಳಿದ್ದಾರೆ.

> ಹೊನ್ನಾವರ ತಾಲೂಕಿನ ಗುಣವಂತೆ ಗ್ರಾಮದಲ್ಲಿ ರಂಗಮಂದಿರ, ಯಕ್ಷಗಾನ ಪ್ರದರ್ಶನ, ಯಕ್ಷಗಾನ ಗುರುಕುಲ, ಶಿಕ್ಷಣ, ಆಟವೇ ಪಾಠ, ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ, ಭಾಸಂ, ಪ್ರಾತ್ಯಕ್ಷತೆ, ಅಧ್ಯಯನ, ಕಾರ್ಯಾಗಾರ ಮುಂತಾದ ಕ್ಷೇತ್ರದಲ್ಲಿ ಕಳೆದ 90 ವರ್ಷದಿಂದ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಮಂಡಳಿಯ ಸಾಧನೆ ಅಪಾರವಾದದ್ದು.
> –ಕೆರೆಮನೆ ಶಿವಾನಂದ ಹೆಗಡೆ, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ನಿರ್ದೇಶಕ

ಯುನೆಸ್ಕೋ ಮಾನ್ಯತೆ ಇಡಗುಂಜಿ ಮಂಡಳಿ ಸುದೀರ್ಘವಾಗಿ, ಯಕ್ಷಗಾನದ ಸಂವರ್ಧನೆ, ಪರಂಪರೆ ಪ್ರಸಾರ, ಪ್ರಚಾರ, ದಾಖಲಾತಿ ಈ ಎಲ್ಲಾ ಪ್ರಯತ್ನ ಹಾಗೂ ಸಾಧನೆಗೆ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆಯ ಸಮುದಾಯದಲ್ಲಿ ಸಿಕ್ಕ ಗೌರವವಾಗಿದೆ ಎಂದು ತಿಳಿಸಿದ್ದಾರೆ.



ಸಮಾಚಾರ ಸಣ್ಣದಲ್ಲ

ಸ್ನೇಹಮಯಿ ಕೃಷ್ಣ ವಿಚಾರಣೆ ಇಂದು

ಮೈಸೂರು: ಮುಡಾ ಹಗರಣ ಕುರಿತು ಲೋಕಾಯುಕ್ತದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಮೈಸೂರು ಲೋಕಾಯುಕ್ತ ಅಧಿಕಾರಿಗಳು ತನಿಖೆ ತೀವ್ರಗೊಳಿಸಿದ್ದಾರೆ. ಪ್ರಕರಣ ಕುರಿತು ದೂರು ನೀಡಿರುವ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ ಅ.1ರ ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ. ವಿಚಾರಣೆಗಿಳಿದ ಅಧಿಕಾರಿಗಳಿಂದ ಮೊದಲ ನೋಟಿಸ್ ಜಾರಿ ಆಗಿದ್ದು, ಮಂಗಳವಾರ ಬೆಳಗ್ಗೆ 7.30ಕ್ಕೆ ಕಚೇರಿಗೆ ಹಾಜರಾಗುವಂತೆ ನೋಟಿಸ್ ನಲ್ಲಿ ತಿಳಿಸಲಾಗಿದೆ.ಲೋಕಯುಕ್ತ ಎಸ್‌ಪಿ ಟಿ.ಜೆ. ಉದೇಶ್ ಅವರು ವಾಟ್ಸಾಪ್ ಮೂಲಕ ಸ್ನೇಹಮಯಿ ಕೃಷ್ಣ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಕಂಟೈನರ್‌ಗೆ ಬಸ್ ಡಿಕ್ಕಿ: 20 ಜನರಿಗೆ ಗಾಯ

ಮಂಡ್ಯ: ನಿಂತಿದ್ದ ಕಂಟೈನರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದ್ದು, 20ಕ್ಕೂ ಹೆಚ್ಚು ಜನರು ಗಂಭೀರ ಗಾಯಗೊಂಡಿರುವ ಘಟನೆ ಜಿಲ್ಲೆಯ ಸಾಂಜೋ ಆಸ್ಪತ್ರೆ ಬಳಿ ನಡೆದಿದೆ. ಬೆಂಗಳೂರು–ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೀಕರ ರಸ್ತೆ ಅಪಘಾತವಾಗಿದ್ದು, ಬೆಂಗಳೂರು ಕಡೆಯಿಂದ ಮಂಡ್ಯಕ್ಕೆ ತೆರಳುತ್ತಿದ್ದ ಬಸ್ ಎಕ್ಸ್‌ಪ್ರೆಸ್ ವೇ ನಿಂದ ಸರ್ವೀಸ್ ರಸ್ತೆಗೆ ಬರುತ್ತಿದ್ದ ವೇಳೆಯಲ್ಲಿ ಈ ಅವಘಡ ಸಂಭವಿಸಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬಸ್ ಪಲ್ಟಿ ಹೊಡೆದಿದೆ. ಬೆಳಗ್ಗೆ 9:50ಕ್ಕೆ ಅಪಘಾತ ಸಂಭವಿಸಿದೆ. ಅಪಘಾತದ ವೇಳೆ ಬಸ್ನಲ್ಲಿ 80ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದು, ಕಾಲೇಜು ವಿದ್ಯಾರ್ಥಿಗಳೇ ಹೆಚ್ಚು ಪ್ರಯಾಣ ಮಾಡುತ್ತಿದ್ದರು. 20ಕ್ಕೂ ಹೆಚ್ಚು ಮಂದಿಗೆ ಗಂಭೀರ ಗಾಯಗೊಂಡಿದ್ದು, 30ಕ್ಕೂ ಹೆಚ್ಚು ಮಂದಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಗಾಯಾಳುಗಳ ಪೈಕಿ ವಿದ್ಯಾರ್ಥಿಗಳೇ ಹೆಚ್ಚು ಗಾಯಗೊಂಡಿದ್ದು, ಜಿಲ್ಲೆಯ ಮಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

ರೇವ್ ಪಾರ್ಟಿ: ಪಿಎಸ್‌ಐ ಅಮಾನತು

ಮೈಸೂರು: ಇಲವಾಲ ಠಾಣೆ ವ್ಯಾಪ್ತಿಯ ಮೀನಾಕ್ಷಿಪುರ ಬಳಿ ಅನುಮತಿ ಇಲ್ಲದೆ ನಡೆಯುತ್ತಿದ್ದ ಪಾರ್ಟಿ ಮೇಲೆ ದಾಳಿ ಮಾಡಿದ್ದ ಮೈಸೂರು ತಾಲೂಕಿನ ಇಲವಾಲ ಠಾಣೆ ಪಿಎಸ್‌ಐ ಮಂಜುನಾಥ ನಾಯಕ್ ಅವರನ್ನು ಕರ್ತವ್ಯಲೋಪ ಆರೋಪದಡಿ ಅಮಾನತು ಮಾಡಿ ಎಸ್‌ಪಿ ವಿಷ್ಣುವರ್ಧನ್ ಆದೇಶ ಹೊರಡಿಸಿದ್ದಾರೆ. ಅದ್ದೂರಿ ಪಾರ್ಟಿಯಲ್ಲಿ ಯುವಕರು, ಯುವತಿಯರು ಭಾಗಿಯಾಗಿದ್ದರು. ದಾಳಿ ವೇಳೆ ಪಿಎಸ್‌ಐ ಮೇಲೆ ಹಲ್ಲೆ ನಡೆಸಿ ಯುವಕರು ಪರಾರಿಯಾಗಿದ್ದರು. ನಂತರ ಮಂಜುನಾಥ ನಾಯಕ್ ಆಸ್ಪತ್ರೆಗೆ ದಾಖಲಾಗಿದ್ದರು. ಇದೀಗ ದಿಢೀರ್ ಆಗಿ ಅಮಾನತು ಮಾಡಿರುವುದು ಅಚ್ಚರಿಗೆ ಕಾರಣವಾಗಿದೆ. ಮಂಜುನಾಥ ನಾಯಕ್ ಆಸ್ಪತ್ರೆಗೆ ದಾಖಲಾದ ನಂತರ ಎಎಸ್‌ಪಿ ನಾಗೇಶ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಯುವಕರು, ಯುವತಿಯರನ್ನು ವಶಕ್ಕೆ ಪಡೆದು 64 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಪಾರ್ಟಿ ಆಯೋಜಿಸಿದ್ದ ಐವರನ್ನು ನ್ಯಾಯಾಂಗ ಬಂಧನಕ್ಕೆ ಕಳಿಸಲಾಗಿತ್ತು. ಉಳಿದವರಿಗೆ ನೋಟಿಸ್ ನೀಡಿಲಾಗಿತ್ತು. ಸದ್ಯ ಪಾರ್ಟಿಯಲ್ಲಿ ಯಾವುದೇ ಮಾದಕ ವಸ್ತು ಮಾದಕ ದ್ರವ್ಯ ಸಿಕ್ಕಿಲ್ಲ.

ಯುವಕನಿಗೆ ಚೂರಿ ಇರಿದ ಯೋಧ

ಬೆಳಗಾವಿ: ಹೊಟೇಲ್ ಒಂದರಲ್ಲಿ ಬಿಲ್ ಕೊಡುವ ವಿಚಾರಕ್ಕೆ ನಡೆದ ಜಗಳದಲ್ಲಿ ಯುವಕನಿಗೆ ಬಿಎಸ್‌ಫ್ ಯೋಧ ಚೂರಿ ಇರಿದ ಪ್ರಕರಣ ನಡೆದಿದ್ದು ಆರೋಪಿಯನ್ನು ಪೊಲೀಸರು ಬಂಧಿಸಿದ ಘಟನೆ ಭಾನುವಾರ ರಾತ್ರಿ ನಡೆದಿದೆ.

ಬೆಳಗಾವಿಯ ಸದಾಶಿವ ನಗರದಲ್ಲಿರುವ ಆಯಿ ಹೊಟೇಲ್ ನಲ್ಲಿ ಊಟಕ್ಕೆಂದು ಗ್ಯಾಂಗವಾಡಿಯ ಯುವಕರು ಬಂದಿದ್ದರು. ಊಟವಾದ ನಂತರ ಮಾಲಿಕನಿಗೆ ಹಣ ಕೊಡುವ ವಿಚಾರದಲ್ಲಿ ಕಿರಿಕ್ ನಡೆದಿದೆ. ಅಲ್ಲೇ ಕುಂತಿದ್ದ ಬಿಎಸ್‌ಎಫ್ ಯೋಧ ಪರುಶರಾಮ ರಾಮಗೊಂಡನವರ ಗಲಾಟೆ ಬಿಡಿಸಲು ಹೋಗಿದ್ದಾನೆ. ಯೋಧ ಗಲಾಟೆ ಬಿಡಿಸುವ ಸಂದರ್ಭದಲ್ಲಿ ಗ್ಯಾಂಗ್‌ವಾಡಿಯ ಅಲ್ತಾಫ್ ಚೌಗುಲೆ ಜೊತೆ ಮಾತಿಗೆ ಮಾತು ಬೆಳೆದಿದೆ. ಈ ಸಂದರ್ಭದಲ್ಲಿ ಬಿಎಸ್‌ಎಫ್ ಯೋದ ಅಲ್ತಾಫ್ ಗೆ ಚಾಕುವಿನಿಂದ ಇರಿದಿದ್ದು ಗಂಭೀರವಾಗಿ ಗಾಯಗೊಂಡಿದ್ದಾನೆ.

ವಿಶ್ವವಾಣಿ

ಸಂಪಾದಕೀಯ

ಅವರವರ ಭಾವಕ್ಕೆ, ಅವರವರ ಭಕುತಿಗೆ..

ಮೈಸೂರಿನ ಪುರಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಮಹಿಷ ಮಂಡಲೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ತಥಾಕಥಿತ ಎಡಪಂಥೀಯ ವಿಚಾರವಾದಿಯೊಬ್ಬರು, 'ಹಿಂದೂ ಧರ್ಮ ನಮ್ಮದಲ್ಲ, ನಮಗೆ ಹಿಂದೂ ಧರ್ಮ ಬೇಕಾಗಿಲ್ಲ. ಶೂದ್ರರು ದೇಗುಲಕ್ಕೆ ಹೋಗುವುದನ್ನು ನಿಲ್ಲಿಸಬೇಕು' ಎಂಬ ಆಣಿಮುತ್ತುಗಳನ್ನು ಉದುರಿಸಿದ್ದಾರೆ. ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಮಹತ್ವ ನೀಡಿರುವ ನೆಲ ನಮ್ಮದು. ಹಾಗೆಂದ ಮಾತ್ರಕ್ಕೆ, ಅಭಿಪ್ರಾಯ ಸ್ವಾತಂತ್ರ್ಯದ ನೆಪದಲ್ಲಿ ಸ್ವಹಿತಾಸಕ್ತಿಯ ನೆರವೇರಿಕೆಯ ಮಾತುಗಳನ್ನಾಡಿ ನಾಲಗೆಯ ಚಪಲ ತೀರಿಸಿಕೊಳ್ಳುವವರ, ತನ್ಮೂಲಕ ಸಮಾಜದಲ್ಲಿ ವಿನಾಕಾರಣ ಒಡಕು ಉಂಟುಮಾಡುವವರ ನಡೆಯನ್ನು ಸಹಿಸಲಾಗದು. ಬಲವಂತದ ಮತಾಂತರ, ಸನಾತನ ಧರ್ಮದ ವಿರುದ್ಧದ ವ್ಯವಸ್ಥಿತ ಅಪಪ್ರಚಾರ ಸೇರಿದಂತೆ ವಿದೇಶಿ ಪ್ರೇರಿತ ಶಕ್ತಿಗಳು ಕಾಲಾನುಕಾಲಕ್ಕೆ ಹೂಡುತ್ತಿರುವ ಸಂಚುಗಳಿಂದಾಗಿ ಪ್ರಸ್ತುತ ನಮ್ಮ ಸಮಾಜದಲ್ಲಿ ತಳಮಳ ಮತ್ತು ಕದಲಿಕೆಗಳು ಆಗಾಗ ಇಣುಕುತ್ತಿವೆ. ಸಾಲದೆಂಬಂತೆ ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು 'ಸನಾತನದ ನಿರ್ಮೂಲನವಾಗಬೇಕು' ಎಂದು ಫರ್ಮಾನು ಹೊರಡಿಸುವ ಜನನಾಯಕರೂ ನಮ್ಮ ಬಗಲಲ್ಲಿದ್ದಾರೆ. ಸನಾತನ ಧರ್ಮದ ಅಥವಾ ಹಿಂದೂ ಸಮಾಜದ ಬೇರುಗಳು ಇಂಥ ಪೊಳ್ಳು ಬೆದರಿಕೆಗಳಿಗೆ ನಾಶವಾಗಿಬಿಡುವಷ್ಟು ದುರ್ಬಲವಾಗಿಲ್ಲವಾದರೂ, ವೇದಿಕೆಗಳಿಂದ ಈ ಥರದ ಹೇಳಿಕೆಗಳು ಹೊಮ್ಮಿದಾಗ ಜನಮಾನಸದಲ್ಲಿ ಕೆಲಕಾಲವಾದರೂ ಗೊಂದಲ ತಾಂಡವವಾಡುವುದಿದೆ, ಹಲವು ಜಾತಿಗಳ ಹದವಾದ ಮಿಶ್ರಣವಾಗಿರುವ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಜನರು ಪರಸ್ಪರರನ್ನು ಅನುಮಾನದ ನೆಲೆಯಲ್ಲೇ ನೋಡುವಂಥ ವಾತಾವರಣ ಸೃಷ್ಟಿಯಾಗುವುದಿದೆ. ದೇಗುಲಕ್ಕೆ ಹೋಗಬೇಕೇ ಬೇಡವೇ? ಹಿಂದೂ ಧರ್ಮವನ್ನು ಒಪ್ಪಬೇಕೇ ಬಿಡಬೇಕೇ? ಯಾವ ದೇವರನ್ನು ನಂಬಬೇಕು-ನೆಚ್ಚಬೇಕು? ಇತ್ಯಾದಿ ಬಾಬತ್ತುಗಳೆಲ್ಲ ವ್ಯಕ್ತಿಗತ ಆಯ್ಕೆಗೆ ಮತ್ತು ನಂಬಿಕೆಗೆ ಬಿಟ್ಟ ವಿಚಾರ. 'ಅವರವರ ಭಾವಕ್ಕೆ ಅವರವರ ಭಕುತಿಗೆ, ಅವರವರ ತೆರನಾಗಿ ಇರುತಿಹನು ಶಿವಯೋಗಿ' ಎಂದಿದ್ದಾರೆ ಬಲ್ಲವರೊಬ್ಬರು. ಹೀಗಾಗಿ, ಸಮಾಜವನ್ನು ಬೆಸೆದಿರುವ 'ಸೌಹಾರ್ದ-ತಂತು'ವನ್ನು ಇನ್ನಷ್ಟು ಗಟ್ಟಿಯಾಗಿಸಲು ವಿಚಾರವಾದಿಗಳೆನಿಸಿಕೊಂಡವರು ಮುಂದಾಗಬೇಕೇ ವಿನಾ, ಸಲ್ಲದ ಸಂಗತಿಗಳನ್ನು ಜನಮನದಲ್ಲಿ ತುಂಬಿ ಹುಳಿಹಿಂಡಬಾರದು. ಆದರೆ ಸಂಬಂಧಪಟ್ಟವರಿಗೆ ಇದು ಅರ್ಥವಾಗಬೇಕಲ್ಲ!

ಸೊಂಪಾದಕೀಯ

'ಪೋಸ್ಟ್' ಮಾರ್ಟಮ್

ಆಧುನಿಕ ಯುಗದಲ್ಲಿ ಪೋಸ್ಟ್‌ನಲ್ಲಿ ಬರುವ ಪತ್ರಗಳು ಮಹತ್ವ ಕಳೆದುಕೊಂಡಿವೆ. ಈಗೆಲ್ಲ ಪೋಸ್ಟ್ ಅನ್ನೋದು ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಹಾಕುವ ಪೋಸ್ಟ್‌ಗೆ ಮಾತ್ರ ಸೀಮಿತ ಆಗಿದೆ. ಮೊದಲೆಲ್ಲ ಸಂಬಂಧಗಳನ್ನು ಬೆಸೆಯಲು ಇದ್ದ ಮಾಧ್ಯಮ ಅಂದ್ರೆ ಪತ್ರಗಳು. ಊರು ಬಿಟ್ಟು ಕೆಲಸ ಅರಸಿ ಪಟ್ಟಣ ಸೇರಿದ ಮಕ್ಕಳು ಅಪ್ಪ-ಅಮ್ಮನಿಗೆ ಬರೆಯುತ್ತಿದ್ದ ಪತ್ರಗಳು, ಕಳುಹಿಸುತ್ತಿದ್ದ ಮನಿ ಆರ್ಡರ್‌ಗಳು ಈಗ ವಿರಳ. ಪ್ರೇಮಿಗಳು ಕೂಡಾ ಪತ್ರ ಮುಖೇನ ತಮ್ಮ ಪ್ರೀತಿಯನ್ನು ತೋರಿಸಿಕೊಳ್ಳುವುದು ತೀರಾ ಕಡಿಮೆ. ಈಗೇನಿದ್ದರೂ ವ್ಯಾವಹಾರಿಕ ವಿಷಯಗಳಿಗೆ ಮಾತ್ರ ಪೋಸ್ಟ್ ಆಫೀಸ್‌ನ ಮೊರೆಹೋಗುತ್ತಾರೆ ಜನ. ಅದಕ್ಕೆ ಕೂಡ ಅನೇಕ ಕಡೆ ಕೊರಿಯರ್ ಸರ್ವೀಸ್ ಇದೆ. ಆದರೂ ಪೋಸ್ಟ್ ಅನ್ನೋ ಎಮೋಷನಲ್ ವಿಷಯ ಇನ್ನೂ ಜೀವಂತ ಇದೆ. ಆದರೆ ಇಲ್ಲೊಂದು ಪೋಸ್ಟ್ ಆಫೀಸ್‌ನವರು ಅದಕ್ಕೂ ಕಲ್ಲು ಹಾಕಲು ಹೊರಟಿದ್ದಾರೆ. ರಾಜ್ಯದ ಪೋಸ್ಟ್ ಆಫೀಸ್ ಒಂದರಲ್ಲಿ ಕಳೆದ ಮೂರ್ನಾಲ್ಕು ತಿಂಗಳುಗಳಿಂದ ಬಂದಿದ್ದ ಪತ್ರಗಳು, ಡಾಕ್ಯುಮೆಂಟ್‌ಗಳು ಬಟವಾಡೆ ಆಗದೆ ಉಳಿದಿವೆಯಂತೆ. ಆದರೆ ಇದು ಕಣ್ತಪ್ಪಿನಿಂದ ಆದ ಕೆಲಸ ಅಲ್ಲ. ಬದಲಾಗಿ ಅಲ್ಲಿನ ಪೋಸ್ಟ್ ಮಾಸ್ಟರ್‌ಗಳು ಈ ಪತ್ರಗಳನ್ನು ಬಟವಾಡೆ ಮಾಡದೆ ತಮ್ಮ ಮನೆಯಲ್ಲಿ ಮಂಚದ ಕೆಳಗಡೆ ಮೂಟೆಗಳಲ್ಲಿ ತುಂಬಿ ಇಟ್ಟಿದ್ದರಂತೆ. ಇದರಿಂದಾಗಿ ಪಾಪ ಹಲವರಿಗೆ ಉನ್ನತ ವ್ಯಾಸಂಗದ ಪತ್ರಗಳು, ಕೆಲಸದ ನೇಮಕಾತಿ ಪತ್ರಗಳು ತಲುಪದೆ ಅವರೆಲ್ಲ ಸಂಕಷ್ಟಕ್ಕೆ ಈಡಾಗುವಂತಾಗಿದೆ. ಇನ್ನೂ ಅದೆಷ್ಟು ಜನ ತಮ್ಮ ಟಪಾಲು ಸಿಗದೆ ಪಡಿಪಾಟಲು ಪಟ್ಟಿದ್ದಾರೋ ಗೊತ್ತಿಲ್ಲ. ಆದರೆ ವಿಚಿತ್ರ ಅಂದ್ರೆ, ಈ ಪೋಸ್ಟ್ ಮಾಸ್ಟರ್‌ಗಳು ಈ ರೀತಿ ಮಾಡಲು ಕಾರಣ ಏನು ಅನ್ನೋದು ಮಾತ್ರ ಇನ್ನೂ ಯಾರಿಗೂ ಅರ್ಥ ಆಗಿಲ್ಲ. ಪೋಸ್ಟ್ ಮೂಲಕ ಬಂದ ಸಂದೇಶಗಳನ್ನು ಸಂಬಂಧಪಟ್ಟವರಿಗೆ ತಲುಪಿಸಲು ಟೇಬಲ್ ಕೆಳಗೆ ಲಂಚ ಕೊಡಬೇಕು, ಇಲ್ಲದಿದ್ದರೆ ನಿಮ್ಮ ಪೋಸ್ಟ್‌ಗಳು ಮಂಚದ ಕೆಳಗೆ ಸೇರುತ್ತವೆ ಅನ್ನೋ ಸಂದೇಶವನ್ನ ಈ ಪೋಸ್ಟ್ ಮಾಸ್ಟರ್‌ಗಳು ಕೊಡ್ತಾ ಇದ್ದಾರಾ ಅನ್ನೋ ಅನುಮಾನ ಸಹಜ. ಈ ವಿಷಯವನ್ನು ಇನ್ನಷ್ಟೇ ಪೋಸ್ಟ್ ಮಾರ್ಟಮ್ ಮಾಡಬೇಕಾಗಿದೆ.

ಸಂಪಾದಕರ ಸದ್ಯಶೋಧನೆ

ಆಗಸದಲ್ಲಿ ತಪ್ಪಿದ ದುರಂತ

ವಿಮಾನ ಪ್ರಯಾಣ ಯಾವತ್ತೂ ಅತ್ಯಂತ ಸುರಕ್ಷಿತ. ಒಮ್ಮೆ ವಿಮಾನ ಟೇಕಾಫ್ ಆಗಿ 35-40 ಸಾವಿರ ಅಡಿ ತಲುಪಿದ ನಂತರ ನಿರಾತಂಕ. ವಿಮಾನಕ್ಕೆ ಯಾವ ಅಡೆ-ತಡೆಗಳೂ ಇರುವುದಿಲ್ಲ. ತಾಂತ್ರಿಕ ತೊಂದರೆಗಳು ಎದುರಾಗುವ ಸಾಧ್ಯತೆ ಸಹ ತೀರಾ ಕಮ್ಮಿ. ಅಷ್ಟು ಎತ್ತರದಲ್ಲಿ ವಿಮಾನಗಳು ಡಿಕ್ಕಿ ಹೊಡೆದುಕೊಳ್ಳುವ ಸಾಧ್ಯತೆಯಂತೂ ಇಲ್ಲವೇ ಇಲ್ಲ ಎಂದು ಹೇಳಬಹುದು. ಕಾರಣ ಅಷ್ಟು ಎತ್ತರದಲ್ಲಿ ಹಾರುವಾಗ, ಎರಡು ವಿಮಾನಗಳ ಅಂತರ ಕನಿಷ್ಠ ಹತ್ತು ನಿಮಿಷಗಳಾದರೂ ಇರುತ್ತವೆ. ಎಲ್ಲ ವಿಮಾನಗಳಲ್ಲಿ Traffic Alert and Collision Avoidance System (TCAS) ಅನ್ನು ಅಳವಡಿಸಲಾಗಿರುತ್ತದೆ. ವಿಮಾನ ಹಾರುತ್ತಿರುವಾಗ, ಸುತ್ತ-ಮುತ್ತ ವಿಮಾನ ಬಂದರೆ, ತಕ್ಷಣ ಪೈಲಟ್‌ಗೆ ಎಚ್ಚರಿಕೆಯ ಸಂದೇಶ ಬರುತ್ತದೆ. ಎಷ್ಟು ಅಂತರದಲ್ಲಿ ಮತ್ತೊಂದು ವಿಮಾನ ಆಗಮಿಸುತ್ತಿದೆ ಎಂಬುದು ತಕ್ಷಣ ಪೈಲಟ್‌ಗೆ ಗೊತ್ತಾಗುತ್ತದೆ. ಹೀಗಾಗಿ ಪೈಲಟ್‌ಗಳು ಮತ್ತೊಂದು ವಿಮಾನದಿಂದ ಕನಿಷ್ಠ ಹತ್ತು ನಿಮಿಷಗಳ ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳುತ್ತಾರೆ. ಅದರಲ್ಲೂ ಮತ್ತೊಂದು ವಿಮಾನ ತನ್ನ ಎತ್ತರದಲ್ಲಿಯೇ ಹಾರುತ್ತಿದ್ದರೆ, ಆ ಸಂದೇಶವೂ ಎರಡೂ ವಿಮಾನಗಳ ಪೈಲಟ್‌ಗಳಿಗೆ ಬರುತ್ತದೆ. ಹೀಗಾಗಿ ಇಬ್ಬರೂ ಜಾಗೃತರಾಗುತ್ತಾರೆ. ಒಂದು ರಡಾರ್ ಪ್ರದೇಶದಲ್ಲಿ, ಎರಡು ವಿಮಾನಗಳು ಸಮ ಎತ್ತರದಲ್ಲಿ ಹಾರುತ್ತಿರುವಾಗ, ಎಟಿಸಿ (ಏರ್ ಟ್ರಾಫಿಕ್ ಕಂಟ್ರೋಲ್)ನಿಂದಲೂ ಪೈಲಟ್‌ಗೆ ಎಚ್ಚರಿಕೆಯ ಸಂದೇಶ ರವಾನೆಯಾಗುತ್ತದೆ. ಆಕಾಶ ಮಾರ್ಗಮಧ್ಯದಲ್ಲಿ ಎರಡು ವಿಮಾನಗಳ ಮಧ್ಯೆ ಡಿಕ್ಕಿ (Mid-air collision) ಸಂಭವಿಸಬಾರದು ಎಂಬ ಕಾರಣಕ್ಕೆ ಇಷ್ಟೆಲ್ಲ ಮುಂಜಾಗ್ರತಾ ಕ್ರಮ ಮತ್ತು ಫೂಲ್-ಪ್ರೂಫ್ ಕ್ರಮಗಳನ್ನು ಕೈಗೊಳ್ಳುವುದು. ಆದರೆ ಈ ವರ್ಷದ ಮಾರ್ಚ್ 24ರಂದು ಏನಾಯಿತು ಗೊತ್ತಾ? ಕತಾರ್ ಏರ್‌ವೇಸ್‌ಗೆ ಸೇರಿದ ಬೋಯಿಂಗ್ 777 ವಿಮಾನ ದೋಹಾದಿಂದ ಮಾಲ್ಡೀವ್ಸ್ ರಾಜಧಾನಿ ಮಾಲೆಗೆ ಹೋಗುತ್ತಿತ್ತು. ಅದೇ ಮಾರ್ಗದಲ್ಲಿ ಇಸ್ರೇಲಿನ ಎಲ್ ಅಲ್ ಏರ್‌ಲೈನ್ಸ್‌ಗೆ ಸೇರಿದ ಬೋಯಿಂಗ್ 777 ವಿಮಾನ ಇಸ್ರೇಲ್ ರಾಜಧಾನಿ ಟೆಲ್ ಅವಿವ್‌ನಿಂದ ಥೈಲ್ಯಾಂಡ್ ರಾಜಧಾನಿ ಬ್ಯಾಂಕಾಕ್‌ಗೆ ಹೋಗುತ್ತಿತ್ತು. ಎರಡೂ ವಿಮಾನಗಳೂ ಅರಬ್ಬಿ ಸಮುದ್ರದ ಮೇಲೆ, ಮುಂಬೈ ವೈಮಾನಿಕ ಮಾಹಿತಿ ಪ್ರದೇಶದ (Flight Information Region) ವ್ಯಾಪ್ತಿಯಲ್ಲಿ, 35 ಅಡಿ ಸಮ-ಸಮ ಎತ್ತರದಲ್ಲಿ ಹಾರುತ್ತಿದ್ದವು. ಸಾಮಾನ್ಯವಾಗಿ ಅಷ್ಟು ಎತ್ತರದಲ್ಲಿ ಸಮುದ್ರದ ಮೇಲೆ ಹಾರುವಾಗ ಎರಡು ವಿಮಾನಗಳ ಮಧ್ಯೆ ಕನಿಷ್ಠ ಹತ್ತು ನಿಮಿಷಗಳ ಅಂತರವನ್ನು ಕಾಪಾಡಿಕೊಳ್ಳಲೇಬೇಕು. ಇದು ಅಂತಾರಾಷ್ಟ್ರೀಯ ನಿಯಮ. ಯಾವ ಕಾರಣಕ್ಕೂ ಈ ಅಂತರವನ್ನು ಕಿರಿದುಗೊಳಿಸುವಂತಿಲ್ಲ ಹಾಗೂ ಈ ನಿಯಮವನ್ನು ಉಲ್ಲಂಘಿಸುವಂತಿಲ್ಲ. ಈ ವಿಷಯದಲ್ಲಿ ಸಣ್ಣಮಟ್ಟಿಗಿನ ರಾಜಿಯನ್ನೂ ಅಂತಾರಾಷ್ಟ್ರೀಯ ವೈಮಾನಿಕ ಸುರಕ್ಷತೆ ಸಂಸ್ಥೆಗಳು ಸಹಿಸುವುದಿಲ್ಲ. ಆದರೆ ಅಂದು ಆ ಎರಡೂ ವಿಮಾನಗಳು ಪರಸ್ಪರ ಕೇವಲ ಒಂದು ನಿಮಿಷದ ಅಂತರ (ಸುಮಾರು ಒಂಬತ್ತು ನಾಟಿಕಲ್ ಮೈಲು)ದಷ್ಟು ಸನಿಹ ಬಂದಿದ್ದವು. ಯಾವ ಕಾರಣಕ್ಕೂ, ಯಾವ ಸಂದರ್ಭದಲ್ಲೂ ಎರಡು ವಿಮಾನಗಳು ಅಷ್ಟು ಸನಿಹಕ್ಕೆ ಬರಲೇಕೂಡದು. ಆಘಾತಕಾರಿ ಸಂಗತಿ ಅಂದರೆ, ಅಂದು ಆ ಎರಡೂ ವಿಮಾನಗಳ ಪೈಲಟ್‌ಗಳಿಗೆ Traffic Alert and Collision Avoidance Systemನಿಂದ ಯಾವ ಎಚ್ಚರಿಕೆಯ ಸಂದೇಶ ಬರದೇ ಇದ್ದಿದ್ದು. ಅಂದು ಶುಭ್ರ ವಾತಾವರಣವಿದ್ದುದರಿಂದ ಮತ್ತು ಹಗಲಿನ ಹೊತ್ತಾಗಿದ್ದರಿಂದ, ಎರಡೂ ವಿಮಾನಗಳ ಪೈಲಟ್‌ಗಳು ಜಾಗೃತರಾಗಿ ದ್ದರಿಂದ, ಅದೃಷ್ಟವಶಾತ್ ಯಾವ ಅಪಘಾತವೂ ಸಂಭವಿಸಲಿಲ್ಲ, ಕೂದ ಲೆಳೆಯ ಅಂತರದಲ್ಲಿ ಭಾರಿ ಅವಘಡ ತಪ್ಪಿತು. ಇಲ್ಲದಿದ್ದರೆ ವಿಮಾನಯಾನ ಇತಿಹಾಸದಲ್ಲಿಯೇ ಕಂಡುಕೇಳರಿಯದ ಭೀಕರ ದುರಂತ ಸಂಭವಿಸಿ ಬಿಡುತ್ತಿತ್ತು. ಈ ಘಟನೆ ಬಗ್ಗೆ ಸಮಗ್ರ ತನಿಖೆ ಪೂರ್ಣಗೊಂಡಿಲ್ಲ. ಆದರೆ ಈ ಪ್ರಸಂಗ ವಿಮಾನಯಾನ ಸುರಕ್ಷತೆಯ ಸಾಚಾತನದ ಬಗ್ಗೆ ದೊಡ್ಡ ಪ್ರಶ್ನೆ ಯನ್ನೇ ಎತ್ತಿದೆ. ಇದು ಅಂತಾರಾಷ್ಟ್ರೀಯ ಪ್ರಯಾಣಿಕರ ನಿದ್ದೆಗೆಡಿಸಿರುವುದಂತೂ ಸತ್ಯ.

ರಾಜ್ಯದಲ್ಲೀಗ ರಾಜೀನಾಮೆಯ ರಾಜಕೀಯ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

ಕಳೆದ ಎರಡು ತಿಂಗಳಿನಿಂದ ಕರ್ನಾಟಕದ ರಾಜಕೀಯ ಬೆಳವಣಿಗೆಗಳು ಒಂದಿಲ್ಲೊಂದು ಕಾರಣಕ್ಕೆ ರಾಷ್ಟ್ರಮಟ್ಟದಲ್ಲಿ ಸದ್ದು ಮಾಡುತ್ತಿವೆ. ಮುಡಾ ಪ್ರಕರಣ, ಬಿಜೆಪಿಗರ ಭಿನ್ನಮತ, ಬಂಡಾಯ ಪಾದಯಾತ್ರೆ ಸೇರಿದಂತೆ ವಿವಿಧ ಕಾರಣಕ್ಕೆ ಸದ್ದು ಮಾಡಿದ್ದ ಕರ್ನಾಟಕದ ರಾಜಕೀಯ, ಇದೀಗ ಹತ್ತು ಹಲವು ಆರೋಪ-ಪ್ರತ್ಯಾರೋಪಗಳಿಂದಾಗಿ ರಾಷ್ಟ್ರವ್ಯಾಪಿ ಗಮನ ಸೆಳೆದಿದೆ. ರಾಜ್ಯದಲ್ಲಿ ರಾಜಕೀಯ ಮೀರಿ ಹೈಕೋರ್ಟ್, ಐಪಿಸಿ, ಬಿಎನ್‌ಎಸ್ ಕಲಂಗಳೇ ಚರ್ಚೆಯಾಗುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ಮಾತನಾಡುತ್ತಿದ್ದವರ ಗಮನವೀಗ, ಚುನಾವಣಾ ಬಾಂಡ್ ಪ್ರಕರಣದ ಸಂಬಂಧ ಕೇಂದ್ರದ ಅರ್ಥಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಿಸಲು ಜನಪ್ರತಿನಿಧಿಗಳ ನ್ಯಾಯಾಲಯ ಆದೇಶ ನೀಡಿದ ಬಳಿಕ ಬಿಜೆಪಿಯತ್ತ ತಿರುಗಿದೆ.

ಚುನಾವಣಾ ಬಾಂಡ್ ಪ್ರಕರಣದಲ್ಲಿ ಎಫ್‌ಐಆರ್ ದಾಖಲಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಕರಣಕ್ಕೆ ಬಹುದೊಡ್ಡ 'ಶೀಲ್ಡ್' ಸಿಕ್ಕಂತಾಗಿದೆ ಎನ್ನುವ ವಿಶ್ಲೇಷಣೆ ಕೇಳಿಬರುತ್ತಿದೆ. ಕರ್ನಾಟಕ ಪೊಲೀಸರು ದಾಖಲಿಸಿರುವ ಈ ಪ್ರಕರಣ ಕೇವಲ ಕಾಂಗ್ರೆಸಿಗರಿಗೆ ಮಾತ್ರವಲ್ಲದೇ, ದೇಶಾದ್ಯಂತ ಬಿಜೆಪಿ ವಿರೋಧಿ ಬಣದಲ್ಲಿರುವ ಎಲ್ಲ ಪಕ್ಷಗಳಿಗೆ ಸಿಕ್ಕಿರುವ ಬಹುದೊಡ್ಡ ಅಸ್ತ್ರವಾಗಿದೆ. ಕೇಂದ್ರದ ಅರ್ಥ ಸಚಿವೆಯೊಂದಿಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಜಾರಿ ನಿರ್ದೇಶನಾಲಯದ ಅಧಿಕಾರಿಗಳ ವಿರುದ್ಧವೂ ದೂರು ದಾಖಲಾಗಿರುವುದು ಪ್ರತಿಪಕ್ಷಗಳ ಪಾಲಿಗೆ ಬಿಜೆಪಿ ವಿರುದ್ಧ ಮಾತನಾಡಲು ಸಿಕ್ಕಿರುವ ಬಹುದೊಡ್ಡ ವಿಷಯವಾಗಿದೆ. ಸದ್ಯ ಈ ಪ್ರಕರಣಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರೂ, ರಾಜಕೀಯವಾಗಿ ಬಳಸಿಕೊಳ್ಳುವುದಕ್ಕೆ ಪ್ರತಿಪಕ್ಷಗಳಿಗೆ ಸಿಕ್ಕಿರುವ ಅಸ್ತ್ರ ಎನಿಸಿದೆ.

ಈ ಒಂದು ಪ್ರಕರಣದ ಎಫ್‌ಐಆರ್‌ನಿಂದ ಕೇಂದ್ರ ಸರಕಾರದ ಮೇಲೆ ಈ ಪ್ರಮಾಣದಲ್ಲಿ ಮುಗಿಬೀಳಲು ಪ್ರಮುಖ ಕಾರಣವಿದೆ. ಏಕೆಂದರೆ, ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರದ ಗದ್ದುಗೆ ಏರಿದ ಬಳಿಕ ಕೇಂದ್ರ ಸರಕಾರದ ವಿರುದ್ಧ ಹಾಗೂ ಮೋದಿ ಆಪ್ತ ಸಚಿವರ ವಿರುದ್ಧ ಕೇಳಿಬಂದಿರುವ ಬಹುದೊಡ್ಡ ಭ್ರಷ್ಟಾಚಾರದ ಆರೋಪ ಇದಾಗಿದೆ. ಚುನಾವಣಾ ಬಾಂಡ್ ವಿಷಯದಲ್ಲಿ ಈ ಹಿಂದೆಯೇ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ್ದರೂ, ಯಾವುದೇ ಒಬ್ಬ ವ್ಯಕ್ತಿಯ ವಿರುದ್ಧ ಆರೋಪಗಳಿರಲಿಲ್ಲ. ಆದರೀಗ ಇದೇ ಮೊದಲ ಬಾರಿಗೆ ನ್ಯಾಯಾಲಯದ ನಿರ್ದೇಶನದ ಮೇರೆಗೆ ಎಫ್‌ಐಆರ್ ದಾಖಲಾಗಿದೆ.

ಒಂದು ವೇಳೆ ಈ ಪ್ರಕರಣದಲ್ಲಿ ಪಿಸಿಆರ್ ಆಗದೇ ನೇರವಾಗಿ ರಾಜ್ಯ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರೆ, ಅದಕ್ಕೊಂದು 'ರಾಜಕೀಯ ಲೇಪನ' ಸಿಗುತ್ತಿತ್ತು. ಆದರೆ ಈ ಪ್ರಕರಣದಲ್ಲಿ ಆರಂಭಿಕ ಹಂತದಲ್ಲಿ ಪೊಲೀಸರು ದೂರು ಪಡೆದಿಲ್ಲ ಎನ್ನುವ ಕಾರಣಕ್ಕೆ ದೂರುದಾರ ಆದರ್ಶ್ ಅಯ್ಯರ್ ನ್ಯಾಯಾಲಯದ ಮೆಟ್ಟಿಲೇರಿದ್ದು, ನ್ಯಾಯಾಲಯದ ನಿರ್ದೇಶನದ ಮೇರೆಗೆ ದೂರು ದಾಖಲಾಗಿರುವುದು ಬಿಜೆಪಿ ವಿರುದ್ಧ ದೊಡ್ಡಮಟ್ಟದಲ್ಲಿ ಧ್ವನಿ ಎತ್ತಲು ವಿರೋಧ ಪಕ್ಷಗಳಿಗೆ ಸಿಕ್ಕಿರುವ ಬಹುದೊಡ್ಡ ಅಸ್ತ್ರವಾಗಿದೆ.

ಯಾವುದೇ ಪಕ್ಷದ ವ್ಯಕ್ತಿಯ ಮೇಲೆ ಯಾವುದೇ ರೀತಿಯ ಆರೋಪಗಳು ಬಂದಾಗ ಪ್ರತಿಪಕ್ಷಗಳು ರಾಜೀನಾಮೆಗೆ ಆಗ್ರಹಿಸುವುದು ಸಾಮಾನ್ಯ. ಕಾನೂನಾತ್ಮಕವಾಗಿ ರಾಜೀನಾಮೆ ನೀಡಬೇಕು ಎನ್ನುವ ಲಿಖಿತ ನಿಯಮವಿಲ್ಲದಿದ್ದರೂ, 'ನೈತಿಕ' ಪ್ರಶ್ನೆಯ ಕಾರಣಕ್ಕೆ ಅನೇಕರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿರುವ ಉದಾಹರಣೆಯಿದೆ. ಆದರೆ ಇತ್ತೀಚಿನ ದಿನಗಳಲ್ಲಿ ರಾಜಕೀಯ ಕಾರಣಗಳಿಗೆ ಕೇಳಿಬರುವ ಆರೋಪಗಳನ್ನು 'ರಾಜಕೀಯ'ವಾಗಿಯೇ ಎದುರಿಸುವ ಮಾತುಗಳನ್ನು ಬಹುತೇಕರು ಆಡುತ್ತಿದ್ದಾರೆ.

ನಿರ್ಮಲಾ ಸೀತಾರಾಮನ್ ವಿರುದ್ಧ ದೂರು ದಾಖಲಾಗುವ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ದೂರು ದಾಖಲಾಗಿತ್ತು. ಮುಡಾ ಪ್ರಕರಣ ಬಹಿರಂಗವಾದ ದಿನದಿಂದಲೂ ಬಿಜೆಪಿಗರು ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ. ಇದೇ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ, ಜೆಡಿಎಸ್‌ನವರು ಪಾದಯಾತ್ರೆ ನಡೆಸಿದ್ದರು. ಇದಾದ ಬಳಿಕ ಸಚಿವ ಸಂಪುಟದ ವಿವಿಧ ಸಚಿವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದಾಗಲೆಲ್ಲ, ಆ ನಾಯಕರ ರಾಜೀನಾಮೆಯನ್ನು ಬಿಜೆಪಿಗರು ಆಗ್ರಹಿಸುತ್ತಾ ಬಂದಿದ್ದಾರೆ. ಆದರೀಗ ನಿರ್ಮಲಾ ಹಾಗೂ ಬಿಜೆಪಿಯ ಇಡೀ ಪದಾಧಿಕಾರಿಗಳ ವಿರುದ್ಧವೇ ದೂರು ದಾಖಲಾಗಿರುವುದರಿಂದ ಕಾಂಗ್ರೆಸಿಗರ ರಾಜೀನಾಮೆ ಕೇಳುವ ಬಿಜೆಪಿಗರ ಧ್ವನಿಯನ್ನು ಅಡಗಿಸುವ ಸ್ಥಿತಿ ನಿರ್ಮಾಣವಾಗಿದೆ ಎಂದರೆ ತಪ್ಪಾಗುವುದಿಲ್ಲ.

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಬೆನ್ನಿಗೆ ನಿಂತಿರುವ ಕಾಂಗ್ರೆಸ್ ನಾಯಕರು ಇದೀಗ, 'ಸಿಎಂ ರಾಜೀನಾಮೆ ನೀಡಬೇಕು ಎನ್ನುತ್ತಿರುವ ಬಿಜೆಪಿಯ ಎಷ್ಟು ನಾಯಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ? ಪ್ರಧಾನಿ ನರೇಂದ್ರ ಮೋದಿ ಸಂಪುಟದಲ್ಲಿರುವ 28ಕ್ಕೂ ಹೆಚ್ಚು ಕೇಂದ್ರ ಸಚಿವರ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದರೂ, ಈವರೆಗೆ ಅವರ ರಾಜೀನಾಮೆಯನ್ನು ಏಕೆ ಕೇಳಿಲ್ಲ?' ಎನ್ನುವ ಪ್ರಶ್ನೆಗಳನ್ನು ಎತ್ತಿದ್ದಾರೆ.

ಸದ್ಯದ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಯನ್ನು ಬಿಜೆಪಿಗರು ಆಗ್ರಹಿಸಿದರೂ, ರಾಜೀನಾಮೆ ನೀಡುವ ಮನಸ್ಥಿತಿಯಲ್ಲಿ ಸಿದ್ದರಾಮಯ್ಯ ಅವರಾಗಲಿ, ಪಡೆಯುವ ಮನಸ್ಥಿತಿಯಲ್ಲಿ ಪಕ್ಷದ ಹೈಕಮಾಂಡ್ ಆಗಲಿ ಇಲ್ಲ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ವಿಚಾರಣೆಗೆ ಅನುಮತಿ ಸಿಕ್ಕಿದ್ದರೂ, ಇದೊಂದು ಸುದೀರ್ಘ ಪ್ರಕ್ರಿಯೆ ಹಾಗೂ ಕಾನೂನಾತ್ಮಕವಾಗಿ ಬಹುದೂರ ಸಾಗುವ ಪ್ರಕರಣವಾಗಿದೆ. ಈ ಹಂತದವರೆಗೂ ಹೈಕೋರ್ಟ್‌ನಲ್ಲಿಯೂ ಅರ್ಜಿ ಸಲ್ಲಿಕೆಯಾಗದೇ ಇರುವುದರಿಂದ, ಸಲ್ಲಿಕೆಯಾದ ಬಳಿಕ ಯಾವುದಾದರೂ ಒಂದು ಹಂತದಲ್ಲಿ ಈ ಪ್ರಕರಣದ ವಿಚಾರಣೆಗೆ ತಡೆಯಾಜ್ಞೆ ಸಿಗುವ ಸಾಧ್ಯತೆಯಿದೆ. ಆದ್ದರಿಂದ ಆ ಹಂತದವರೆಗೂ ಕಾದು ನೋಡೋಣ ಎನ್ನುವ ಲೆಕ್ಕಾಚಾರದಲ್ಲಿ ಪಕ್ಷದ ಹೈಕಮಾಂಡ್ ಇದೆ.

ಇನ್ನೊಂದು ಪ್ರಮುಖ ಅಂಶವೆಂದರೆ, ಸಿದ್ದರಾಮಯ್ಯ ಅವರ ಬೆನ್ನಿಗೆ ಈಗಲೂ ಅಹಿಂದ ಸಮುದಾಯ ನಿಂತಿದೆ ಹಾಗೂ ಕಾಂಗ್ರೆಸ್‌ನ ಅರ್ಧಕ್ಕಿಂತ ಹೆಚ್ಚು ಶಾಸಕರು ಸಿದ್ದರಾಮಯ್ಯ ಅವರ ಆಪ್ತರಿದ್ದಾರೆ. ಈ ಹಂತದಲ್ಲಿ ಅವರಿಂದ ರಾಜೀನಾಮೆ ಪಡೆಯುವ ಪ್ರಯತ್ನವನ್ನು ಮಾಡಿದರೂ, ಸರಕಾರ ಅಸ್ಥಿರವಾಗುವ ಹಾಗೂ ಮುಂಬರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಹೊಡೆತ ಬೀಳುವ ಸಾಧ್ಯತೆಯಿದೆ. ಕಾಂಗ್ರೆಸ್ ಅಧಿಕಾರದಲ್ಲಿರುವ ಬಹುದೊಡ್ಡ ರಾಜ್ಯವಾಗಿರುವ ಕರ್ನಾಟಕದಲ್ಲಿ, ಈ ಹಂತದಲ್ಲಿ ಸರಕಾರವನ್ನು ಅಸ್ಥಿರಗೊಳಿಸುವ ಸಾಹಸಕ್ಕೆ ಕಾಂಗ್ರೆಸ್ ಹೈಕಮಾಂಡ್ ಮುಂದಾಗುವುದಿಲ್ಲ ಎನ್ನುವುದು ಬಹುತೇಕರ ವಾದವಾಗಿದೆ.

ಇನ್ನು ಕರ್ನಾಟಕದಲ್ಲಿ ವಿರೋಧ ಪಕ್ಷಗಳು ಆಳುಗ ಕಾಂಗ್ರೆಸ್ ನಾಯಕರ ಮತ್ತು ಕಾಂಗ್ರೆಸ್ಸಿಗರು ಬಿಜೆಪಿ ನಾಯಕರ ರಾಜೀನಾಮೆ ಕೇಳುವುದು ರಾಜಕೀಯ ಚಟುವಟಿಕೆಯ ಒಂದು ಭಾಗವೇ ಆಗಿಬಿಟ್ಟಿದೆ. ಆದರೆ ಇದನ್ನು ಮೀರಿದ ಭಿನ್ನ ಪರಿಸ್ಥಿತಿ ರಾಜ್ಯ ಬಿಜೆಪಿ ಘಟಕದಲ್ಲಿ ಶುರುವಾಗಿದೆ. ಒಂದೆಡೆ ರಾಜ್ಯ, ರಾಷ್ಟ್ರೀಯ ಬಿಜೆಪಿ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರ ರಾಜೀನಾಮೆಗೆ ಆಗ್ರಹಿಸುತ್ತಿದ್ದರೆ, ಇನ್ನೊಂದೆಡೆ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಜೆ.ಪಿ. ನಡ್ಡಾ ಅವರ ರಾಜೀನಾಮೆಗೆ ಕಾಂಗ್ರೆಸಿಗರು ಆಗ್ರಹಿಸುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ರಾಜೀನಾಮೆಯನ್ನು ಕೇಳಲು ಕಾಂಗ್ರೆಸಿಗರಿಗಿಂತ ಹೆಚ್ಚಾಗಿ ಬಿಜೆಪಿಯ ಒಂದು ಗುಂಪು ಮುಂದಾಗಿದ್ದು, ಬಹುದೊಡ್ಡ ಮಟ್ಟದಲ್ಲಿಯೇ ಈ ಕೂಗನ್ನು ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ಕೇಳಿಸುವಂಥ ಪ್ರಯತ್ನವನ್ನು ಅದು ಮಾಡುತ್ತಿದೆ. ವಿಜಯೇಂದ್ರ ವಿರೋಧಿ ಬಣದಲ್ಲಿರುವ ಬಹುತೇಕರು, ಸಿದ್ದರಾಮಯ್ಯ ಹಾಗೂ ಕಾಂಗ್ರೆಸಿಗರ ಆರೋಪಗಳನ್ನು ಪ್ರಶ್ನಿಸುವುದಕ್ಕಿಂತ ಹೆಚ್ಚಾಗಿ ವಿಜಯೇಂದ್ರರ ರಾಜೀನಾಮೆಗೆ ಆಗ್ರಹಿಸುವುದರಲ್ಲಿ ತಲೀನರಾಗಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆಯುವುದರಲ್ಲಿ ಸಾಲು ಸಾಲು ಆರೋಪ ಕೇಳಿಬಂದರೂ, ಅದನ್ನು ಸಮರ್ಥವಾಗಿ ಎತ್ತಿಹಿಡಿಯುವಲ್ಲಿ ಬಿಜೆಪಿ ವಿಫಲವಾಗಿದೆ. ಈ ರೀತಿ ಸರಕಾರವನ್ನು ಮಣಿಸಲು ವಿಫಲವಾಗಿರುವುದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರ 'ಹೊಂದಾಣಿಕೆ' ರಾಜಕೀಯವೇ ಕಾರಣ ಎಂದು ಯತ್ನಾಳ್ ಸೇರಿದಂತೆ ವಿರೋಧಿ ಬಣದ ಬಹುತೇಕರು ಆರೋಪಿಸುತ್ತಿದ್ದಾರೆ. ಆದ್ದರಿಂದ ಇದೀಗ ರಾಜ್ಯ ಕಾಂಗ್ರೆಸಿಗರ ರಾಜೀನಾಮೆಗಿಂತ ಮೊದಲು ಬಿಜೆಪಿ ರಾಜ್ಯಾಧ್ಯಕ್ಷರನ್ನು ಬದಲಾಯಿಸಬೇಕು ಎನ್ನುವ ಆಗ್ರಹದಿಂದಾಗಿ ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವ ಅಪ್ರಿಯಸತ್ಯ ಬಹಿರಂಗವಾಗುತ್ತಿದೆ.

ವಿವಿಧ ಕಾರಣಕ್ಕೆ ಹತ್ತು ಹಲವರ ರಾಜೀನಾಮೆಯನ್ನು ಆಯಾ ಪಕ್ಷಗಳು ಕೇಳುತ್ತಿವೆ. ಆದರೆ ಇಂದಿನ ರಾಜಕೀಯ ಸ್ಥಿತಿ-ಗತಿಯಲ್ಲಿ ರಾಜೀನಾಮೆ ಕೊಟ್ಟು ಹೋಗುವ ಮನಸ್ಥಿತಿಯಲ್ಲಿ ಯಾವ ಪಕ್ಷದವರೂ ಇಲ್ಲ. ರಾಜೀನಾಮೆ ನೀಡದೇ ಇರುವುದಕ್ಕೆ ಮತ್ತೊಂದು ಕಾರಣವೇನೆಂದರೆ, ಆರೋಪ ಕೇಳಿಬಂದಾಕ್ಷಣ ರಾಜೀನಾಮೆ ನೀಡಿದರೆ ತಪ್ಪು ಮಾಡಿರುವುದನ್ನು ಒಪ್ಪಿಕೊಂಡಂತಾಗುತ್ತದೆ. ತೀರಾ ಇತ್ತೀಚಿಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಅಬಕಾರಿ ಹಗರಣದಲ್ಲಿ ಜೈಲು ಸೇರಿದಾಗ, ಅವರು ರಾಜೀನಾಮೆ ನೀಡಬೇಕು ಎನ್ನುವ ಒತ್ತಡ ಕೇಳಿಬಂದಿತ್ತು. ಆದರೆ ಕಾನೂನಾತ್ಮಕವಾಗಿ ರಾಜೀನಾಮೆ ನೀಡಬೇಕು ಎನ್ನುವ ನಿಯಮವಿಲ್ಲದೇ ಇರುವುದರಿಂದ ಅವರು ಮುಖ್ಯಮಂತ್ರಿಯಾಗಿಯೇ ಹೊರಬಂದರು. ಆದರೆ ಜಾಮೀನಿನ ಮೇಲೆ ಹೊರಬಂದ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಜನಾದೇಶದ ಬಳಿಕವೇ ಮತ್ತೆ ಮುಖ್ಯಮಂತ್ರಿಯಾಗುವೆ ಎನ್ನುವ 'ಶಪಥ'ದೊಂದಿಗೆ ಹೊರನಡೆದರು. ಈ ರೀತಿ ಮಾಡದೇ, ಜೈಲು ಸೇರುತ್ತಿದ್ದಂತೆ ರಾಜೀನಾಮೆ ನೀಡಿದ್ದಿದ್ದರೆ, ರಾಜಕೀಯವಾಗಿ 'ತಪ್ಪೊಪ್ಪಿಗೆ' ನೀಡಿದಂತಾಗುತ್ತದೆ ಎನ್ನುವ ಕಾರಣಕ್ಕೆ ಈ ನಡೆಯನ್ನು ಕೇಜ್ರಿವಾಲ್ ಅನುಸರಿಸಿದ್ದರು. ರಾಜೀನಾಮೆ ನೀಡುವ ವಿಷಯದಲ್ಲಿ ಅರವಿಂದ ಕೇಜ್ರಿವಾಲ್ ಅವರಿಗೆ ಇರುವ 'ಸ್ವಾತಂತ್ರ್ಯ' ರಾಷ್ಟ್ರೀಯ ಪಕ್ಷದ ನಾಯಕರಿಗೆ ಸಿಗುವುದು ತೀರಾ ವಿರಳ. ಮುಂದಿನ ದಿನಗಳಲ್ಲಿ ಆರೋಪಗಳನ್ನು ಹೊತ್ತಿರುವ ನಾಯಕರು ಅಧಿಕಾರದಲ್ಲಿದ್ದುಕೊಂಡೇ 'ಕ್ಲೀನ್ ಚಿಟ್' ಪಡೆಯುವರೇ ಅಥವಾ ರಾಜೀನಾಮೆಯ ಹಾದಿ ಹಿಡಿಯುವರೇ ಎನ್ನುವುದು 'ಸುಪ್ರೀಂ'ನಲ್ಲಿಯೇ ತೀರ್ಮಾನವಾಗುವುದು ನಿಶ್ಚಿತ.

ಮನುಷ್ಯನ ಮಿದುಳಿಗೆ ಅಮಿತ ಸಾಧ್ಯತೆಗಳಿವೆ

ನಿಜಕೌಶಲ
ಪ್ರೊ. ಆರ್.ಜಿ.ಹೆಗಡೆ
vveditoped@gmail.com

ವ್ಯಕ್ತಿತ್ವದ ಸಂದರ್ಭದಲ್ಲಿ ಮನುಷ್ಯ ಮತ್ತು ಪ್ರಾಣಿಗಳ ನಡುವೆ ಒಂದು ಪ್ರಮುಖ ವ್ಯತ್ಯಾಸವಿದೆ. ಅದೇನೆಂದರೆ, ಮನುಷ್ಯನನ್ನು ಹೊರತುಪಡಿಸಿ ಎಲ್ಲ ಪ್ರಾಣಿಗಳೂ 'ಪ್ರಿ-ಪ್ರೋಗ್ರಾಮ್ಡ್' ಮನಸ್ಸನ್ನು ಹೊಂದಿವೆ. ಅಂದರೆ, ಹುಟ್ಟುವ ಮೊದಲೇ, ಜೆನೆಟಿಕ್ ಆಗಿಯೇ ಅವುಗಳ ಗುಣಗಳು ಹೀಗೆಯೇ ಎಂದು ಪ್ರಾಕೃತಿಕವಾಗಿಯೇ ನಿರ್ಧರಿಸಲ್ಪಟ್ಟಿರುತ್ತದೆ. ಅವುಗಳಿಗೆ ಬೇರೆ ರೀತಿ ವರ್ತಿಸಲು ಬರುವುದೇ ಇಲ್ಲ. ಅವುಗಳ ಮಾನಸಿಕ ಸಾಮರ್ಥ್ಯವು ಸಂಪೂರ್ಣವಾಗಿ ಆ ಜಾತಿಯ ಪ್ರಾಣಿಗಳ ಚೌಕಟ್ಟಿನಲ್ಲಿ ಮಾತ್ರ ವ್ಯವಹರಿಸುವಂತೆ ಕಟ್ಟಿಹಾಕಲ್ಪಟ್ಟಿರುತ್ತದೆ. ಚೌಕಟ್ಟಿನ ಹೊರಗಿರುವುದನ್ನು ಕಲಿಯಲು ಅವುಗಳಿಗೆ ಬರುವುದೇ ಇಲ್ಲ. ಉದಾಹರಣೆಗೆ ಒಂದು ಹುಲಿಯ ಗುಣಗಳು ಅದಕ್ಕೆ ಹುಟ್ಟಿದ ಮರಿಗೆ ಜೈವಿಕವಾಗಿ ಆಗಿ ಬಂದಿರುತ್ತವೆ; ಅವನ್ನು ತಪ್ಪಿಸಿಕೊಳ್ಳಲು ಅದಕ್ಕೆ ಬರುವುದೇ ಇಲ್ಲ. ಹುಟ್ಟಿನಿಂದ ಬಂದಿರುವ ಗುಣಗಳನ್ನೇ ಆ ಹುಲಿ ಸಾಯುವವರೆಗೂ ಹೊಂದಿರುತ್ತದೆ, ಅದು ಬದಲಾಗುವುದಿಲ್ಲ.

ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಒಂದು ಹುಲಿಗೆ ಸಂತನಾಗಲಾಗದು, ದೈವೀಶಕ್ತಿಯನ್ನು ಪಡೆದುಕೊಳ್ಳಲಾಗದು, 'ಶ್ರೇಷ್ಠಹುಲಿ' ಎನಿಸಿಕೊಳ್ಳಲಾಗದು, ಹುಲಿಗಳ ಮಹಾನಾಯಕನಾಗಿ ಬೆಳೆದು ನಿಂತು ಎಲ್ಲ ಹುಲಿಗಳ ಬದುಕನ್ನು ಸುಧಾರಿಸಲಾಗದು. ಅದಕ್ಕೆ ತನ್ನ ವ್ಯಕ್ತಿತ್ವದ ಭಾಗವೇ ಆಗಿಹೋಗಿರುವ ಮಿತಿಗಳನ್ನು ದಾಟಲಾಗುವುದೇ ಇಲ್ಲ. ಹುಲಿ ಹುಲಿಯೇ! ಅದು ಒಂದು ಪೂರ್ವನಿರ್ಧಾರಿತವಾದ, ಬದಲಾಯಿಸಲಾಗದ ಮನಸ್ಸನ್ನು ಹೊಂದಿಬಿಟ್ಟಿರುತ್ತದೆ. ಹುಲಿಯೊಂದೇ ಅಲ್ಲ, ಎಲ್ಲ ಪ್ರಾಣಿಗಳೂ ಹೀಗೆಯೇ- ಜೈವಿಕವಾಗಿ ಪ್ರಿ-ಪ್ರೋಗ್ರಾಮ್ಡ್ ಆಗಿ ಹುಟ್ಟಿರುವಂಥವು. ತಮ್ಮ ಶಾರೀರಿಕ, ಮಾನಸಿಕ ಮಿತಿಗಳನ್ನು ದಾಟಲು ಅವಕ್ಕೆ ಸಾಧ್ಯವಾಗುವುದಿಲ್ಲ.

ಆದರೆ ಮನುಷ್ಯನ ವ್ಯಕ್ತಿತ್ವ ಹಾಗಲ್ಲ. ಸಿಗ್ಮಂಡ್ ಫ್ರಾಯ್ಡ್ ಎಂಬ ಮನಶ್ಶಾಸ್ತ್ರಜ್ಞನ ಪ್ರಕಾರ, ಮನುಷ್ಯನ ಮಿದುಳಿನಲ್ಲಿ ನಮಗೆ ಇನ್ನೂ ಅರ್ಥವಾಗಿರದ ಕತ್ತಲ ಭೂಖಂಡಗಳಿವೆ. ಅಂದರೆ, ಇಲ್ಲಿಯವರೆಗೆ ನಮಗೆ ಗೊತ್ತೇ ಇಲ್ಲದ ಚಟುವಟಿಕೆಗಳನ್ನು ಉತ್ತೇಜಿಸಬಲ್ಲ, ಹುಟ್ಟುಹಾಕಿಬಿಡಬಲ್ಲ ಭಾಗಗಳು ನಮ್ಮೊಳಗಿವೆ, ಅಪರಿಮಿತ ಸಾಧ್ಯತೆಗಳಿವೆ. ಮನುಷ್ಯನ ಮನಸ್ಸಿನ ಅದ್ಭುತವೆಂದರೆ ಆತ ಹೇಗೆ ಬೇಕಾದರೂ ಆಗಬಹುದು- ಸಂತ, ವಿರಕ್ತ, ಕೊಲೆಗಾರ, ರಾಜಕಾರಣಿ, ಕಲಾವಿದ ಹೀಗೆ. ಆತ ಯಾವುದೇ ವೃತ್ತಿ ಆಯ್ದುಕೊಂಡು ತನ್ನ ದಿಗಂತವನ್ನೇ ವಿಸ್ತರಿಸಿಕೊಳ್ಳಬಹುದು. ಷೇಕ್ಸ್‌ಪಿಯರ್‌ನಂತೆ ಮಹಾನ್ ಬರಹಗಾರನಾಗಿ, ಐನ್‌ಸ್ಟೀನ್‌ನಂತೆ ವಿಜ್ಞಾನಿಯಾಗಿ ಅರಿವಿನ ಪರಿಧಿಯನ್ನು ವಿಸ್ತರಿಸಬಹುದು. ಆತ ಹೀಗೆ ಏನು ಬೇಕಾದರೂ ಆಗಬಲ್ಲ ಸಾಧ್ಯತೆಗಳನ್ನು, 'ಕಾಗ್ನಿಟಿವ್' ಸಾಮರ್ಥ್ಯವನ್ನು ಮನುಷ್ಯನ ಮಿದುಳು ಹೊಂದಿರುತ್ತದೆ. ಇದು ಮಾನವ ವ್ಯಕ್ತಿತ್ವ ವಿಕಸನದ ಸಾಧ್ಯತೆಯ ಮೂಲ. ಮನಸ್ಸು ಹೀಗೆ ಒದಗಿಸುವ ಸಾಧ್ಯತೆಗಳು ವ್ಯಕ್ತಿತ್ವ ವಿಕಸನದ ಪರಿಕಲ್ಪನೆಯ ಆಧಾರಸ್ತಂಭ. ಹೀಗಾಗಿಯೇ ಷೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್' ನಾಟಕದಲ್ಲಿ 'ಮನುಷ್ಯ ಪ್ರಾಣಿ ಎಂಥಾ ಅದ್ಭುತ!' ಎಂಬ ಮಾತು ಬರುತ್ತದೆ- ಇದು ಮನುಷ್ಯ ಜಗತ್ತಿನ ಕುರಿತ ಆಳವಾದ ಒಳನೋಟದ ಮಾತು.

ಸಾಧ್ಯತೆಗಳು ಇಷ್ಟಕ್ಕೇ ಸೀಮಿತಗೊಂಡಿಲ್ಲ. ಈಗಾಗಲೇ ಹೇಳಿದಂತೆ ಮನುಷ್ಯನ ಆಯ್ಕೆಯಲ್ಲಿ ವಿಪುಲ ಅವಕಾಶಗಳಿವೆ. ಹೀಗೆ ಮಾಡಿಕೊಂಡ ಆಯ್ಕೆಯಲ್ಲಿಯೂ ಆತ ತನ್ನನ್ನು ಸತತವಾಗಿ ಅಭಿವೃದ್ಧಿಗೊಳಿಸಿಕೊಳ್ಳುತ್ತಲೇ ಸಾಗಿ ಬದುಕಿನ ಶ್ರೇಷ್ಠತೆಯತ್ತ ಪಯಣಿಸಲು ಸಾಧ್ಯವಾಗುತ್ತದೆ. ಕಾಡುಮನುಷ್ಯ ಆಧುನಿಕ ಮಾನವನಾಗಿ ಬದಲಾಗಿದ್ದು ಹೀಗೆ, ಗುಡಿಸಲುಗಳಿಂದ ಆಧುನಿಕ ಮಹಲುಗಳಿಗೆ ಅವನ ಜೀವನ ಪ್ರಗತಿಹೊಂದಿದ್ದು ಹೀಗೆ.

ತನ್ನ ಬದುಕಿನ ವಿಧಾನವನ್ನು ಪ್ರತಿದಿನವೂ ಉತ್ತಮಗೊಳಿಸಿಕೊಳ್ಳುವ ಸಾಧ್ಯತೆ ಮನುಷ್ಯನಿಗಿದೆ. ಜೀವನವನ್ನು ಸಾರ್ಥಕವಾಗಿ ಕಳೆಯುವ ಸಲುವಾಗಿ ಅಷ್ಟಾಂಗ ಮಾರ್ಗಗಳ ದಾರಿಯನ್ನು ಬುದ್ಧ ತೋರಿಸಿದ. ಧರ್ಮಗಳು ಹುಟ್ಟಿಕೊಂಡಿದ್ದೂ ಜೀವನ ವಿಧಾನವನ್ನು ಶ್ರೇಷ್ಠತೆಯತ್ತ ಕೊಂಡೊಯ್ಯಲೆಂದೇ. ವಿಜ್ಞಾನ ಕೂಡ ಮಾನವನ ಮನಸ್ಸಿನ ಪರಿಧಿಗಳನ್ನು ವಿಕಸಿಸುವ ಸಲುವಾಗಿ ಹುಟ್ಟಿದ್ದು. ಹಾಗೆಯೇ, ದೈಹಿಕ ಸಾಮರ್ಥ್ಯದಲ್ಲೂ ವಿಕಸನಗೊಳ್ಳುವ ಸಾಧ್ಯತೆ ಮನುಷ್ಯನಿಗಿದೆ. ಉದಾಹರಣೆಗೆ ಒಲಿಂಪಿಕ್ಸ್ ಇತಿಹಾಸದಲ್ಲಿ, 'ಮನುಷ್ಯನು ನೂರು ಮೀಟರ್ ಓಟವನ್ನು 10 ಸೆಕೆಂಡ್‌ಗಳಿಗಿಂತ ಮುಂಚೆ ಮುಗಿಸಲು ಸಾಧ್ಯವೇ ಇಲ್ಲ, ದೈಹಿಕವಾಗಿ ಅದು ಅಸಾಧ್ಯ' ಎಂದೇ ಹಲವಾರು ವರ್ಷಗಳವರೆಗೆ ಭಾವಿಸಲಾಗಿತ್ತು. ಆದರೆ ಜಿಮ್ ಹೈನ್ಸ್ ಎಂಬ ಓಟಗಾರ 10 ಸೆಕೆಂಡುಗಳ ಒಳಗೇ 100 ಮೀ. ಓಟವನ್ನು ಪೂರ್ಣಗೊಳಿಸಿದಾಗ ಜಗತ್ತೇ ನಿಬ್ಬೆರಗಾಯಿತು; ಗಡಿಯಾರಗಳು ಸರಿಯಿವೆಯೇ ಇಲ್ಲವೇ ಎಂದು ಕೂಡ ಪರಿಶೀಲಿಸಲಾಗಿತ್ತು. ಒಂದು ವಿಷಯವಂತೂ ಸ್ಪಷ್ಟ- ಮನುಷ್ಯನಿಗೆ ಮಿತಿಗಳನ್ನು ಹೀಗೆ ಎಂದು ನಿರ್ಧರಿಸುವುದು ಕಷ್ಟ. ಈಜಿಪ್ಟ್‌ನ ಪಿರಮಿಡ್‌ಗಳಿಗಾಗಿ ಬಳಸಲಾದ ದೊಡ್ಡ ಗಾತ್ರದ ಕಲ್ಲುಗಳನ್ನು ಅಂದಿನ ಜನರು ಮೇಲೆ ಸಾಗಿಸಿದ್ದು ಹೇಗೆಂಬುದು ಇಂದಿಗೂ ಅರ್ಥವಾಗುತ್ತಿಲ್ಲ. ಮನುಷ್ಯರೇ ಕೈಯಿಂದ ಎತ್ತಿ ಸಾಗಿಸಿದ್ದಿರಬಹುದು, ಏಕೆಂದರೆ ಮಾನವ ಜಗತ್ತಿನಲ್ಲಿ ಎಲ್ಲವೂ ಸಾಧ್ಯವಿದೆ.

ಆದರೆ, ಹಲವೊಮ್ಮೆ ನಮ್ಮ ಸಾಮರ್ಥ್ಯವೇ ನಮಗೆ ತಿಳಿದಿರುವುದಿಲ್ಲ. ವ್ಯಕ್ತಿತ್ವ ವಿಕಸನದ ಹಾದಿಗಳ ಮೂಲಕ ಇಂಥ ಅರಿವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಿದೆ. ಮಾತ್ರವಲ್ಲ, ಸಾಮರ್ಥ್ಯದ ವರ್ಧನೆಯೂ ಸಾಧ್ಯವಿದೆ. ಪಾಕಿಸ್ತಾನದ ಜಹಾಂಗೀರ್ ಖಾನ್‌ಗೆ ಸ್ಕ್ವಾಷ್ ಆಟಗಾರನಾಗುವ ಬಯಕೆಯಿತ್ತು; ಆದರೆ ಆತನ ಕಾಲುಗಳು ಬಲಿತಿರಲಿಲ್ಲ. ದೈಹಿಕ ಸಿದ್ಧತೆಗಿಂತಲೂ ಮೊದಲು ಆತನ ಆಲೋಚನಾಕ್ರಮವನ್ನು ತಿರುಗಿಸುವ ಅಗತ್ಯವಿತ್ತು. ಅಂಥ ತರಬೇತಿಯನ್ನು ಆತನಿಗೆ ನೀಡಿದಾಗ ಅದು ಸಾಧ್ಯವಾಯಿತು. ನಂತರ ಆತ ಜಾಗತಿಕ ಚಾಂಪಿಯನ್ ಆಗಿಹೋದ. ಹೀಗೆ ಆಲೋಚನಾಕ್ರಮವನ್ನು ದಾರಿಯಲ್ಲಿಟ್ಟುಕೊಂಡು ಮಾನಸಿಕ ಶಕ್ತಿಯನ್ನು ಹೊರಹರಿಯಬಿಟ್ಟರೆ, ವ್ಯಕ್ತಿತ್ವದೊಳಗೆ ಅಪಾರಶಕ್ತಿ ಹುಟ್ಟಿಕೊಳ್ಳುತ್ತದೆ. ಯೋಜನೆಗಳನ್ನು ಹರಿಬಿಟ್ಟು ಮನಸ್ಸನ್ನು ಒಳಗಡೆಗೆ ತಿರುಗಿಸಿದರೆ ಬೆಳಕು ಹುಟ್ಟಿಕೊಳ್ಳುತ್ತದೆ. ಅದೇ ಬೆಳಕು ಜೀವನವನ್ನು ಬೆಳಗುತ್ತದೆ. ಅದುವೇ ವ್ಯಕ್ತಿತ್ವ ವಿಕಸನ.

ಹಾಗೆಂದ ಮಾತ್ರಕ್ಕೆ ವ್ಯಕ್ತಿತ್ವ ವಿಕಸನ ಎಂದರೆ ಒಂದೇ ರೀತಿಯ (ವಿದೇಶಿ) ಮಾದರಿಯಲ್ಲಿ ಸಿದ್ಧಗೊಳಿಸುವುದು ಅಲ್ಲವೇ ಅಲ್ಲ; ಅದು ಆತ್ಮಶಕ್ತಿಯ ಚೇತನ, ಧೀಶಕ್ತಿಯ ಜಾಗೃತಗೊಳಿಸುವಿಕೆ. ಇದು ವ್ಯಕ್ತಿಯೊಬ್ಬ ತನ್ನ ವ್ಯಕ್ತಿತ್ವವನ್ನು ಪೂರ್ತಿಯಾಗಿ ಅರಳಿಸಿಕೊಳ್ಳಲು ಕಲಿಯುವ ಪ್ರಕ್ರಿಯೆ, ತಾನು ತಾನಾಗಿ ಉಳಿದೇ ಅರಳಿಕೊಳ್ಳಲು ಕಲಿಯುವ ಪ್ರಕ್ರಿಯೆ. ಇದು ಇಂದು ಎಲ್ಲ ಯಶಸ್ವಿ ವ್ಯಕ್ತಿಗಳಿಗೆ ಗೊತ್ತಾಗಿದೆ; ಹಾಗಾಗಿಯೇ ಸದಾ ವಿಪರೀತ ಒತ್ತಡದಲ್ಲಿರುವ ಆಟಗಾರರು, ಅಧಿಕಾರಿಗಳು ಹಲವು ರೀತಿಯ ವ್ಯಕ್ತಿತ್ವ ವಿಕಸನ ತರಬೇತಿಗಳಲ್ಲಿ ಭಾಗವಹಿಸುತ್ತಿರುವುದು.

ಇಲ್ಲಿ ಇನ್ನೊಂದು ಮಾತು ಹೇಳಬೇಕು. ವ್ಯಕ್ತಿತ್ವ ವಿಕಸನದ ತರಬೇತಿಯ ಪಠ್ಯಕ್ರಮಗಳನ್ನು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯಾಪಕವಾಗಿ ಅಳವಡಿಸುವ ಅಗತ್ಯವಿದೆ. ಏಕೆಂದರೆ ನಮ್ಮ ವ್ಯವಸ್ಥೆಯು ಬಹುತೇಕವಾಗಿ ಮನಸ್ಸುಗಳನ್ನು ಅರಳಿಸುವ ಬದಲು ಕುಗ್ಗಿಸುವ ವ್ಯವಸ್ಥೆಯಾಗಿ ಬದಲಾಗಿಹೋಗಿದೆ. 'ಸುಮ್ಮನೆ ಕುಳಿತುಕೊಳ್ಳುವುದು' ಶಾಲೆಯಲ್ಲಿ ಮಕ್ಕಳಿಗೆ ಕಲಿಸಲಾಗುವ ಮೊದಲ ಪಾಠ. ಸುಮಾರು 15 ವರ್ಷಗಳ ಕಾಲ ಅವರು ತರಗತಿಯೊಳಗೆ ಮೌನವಾಗಿ ಕುಳಿತಿರಬೇಕು. ಕೇವಲ ಹೇಳಿದ್ದನ್ನು ಕೇಳಿ ಅದರಂತೆ ಬರೆಯುವ ಕಲೆಯನ್ನು ಅವರಿಗೆ ಕಲಿಸಲಾಗುತ್ತಿದೆ. ಇಲ್ಲಿ ನೆನಪಿನ ಶಕ್ತಿ ಮತ್ತು ಅನುಕರಣೆಯ ಮೇಲೆ ಒತ್ತುನೀಡಲಾಗುತ್ತಿದೆ. ಕುತೂಹಲ, ಹುಡುಗಾಟ, ಪ್ರಶ್ನಿಸುವುದು, ವಿರೋಧಿಸುವುದು, ವಿಭಿನ್ನವಾಗಿ ಆಲೋಚಿಸುವುದು, ವಿರುದ್ಧವಾಗಿ ಯೋಚಿಸುವುದು ಇವಕ್ಕೆಲ್ಲ ಇಲ್ಲಿ ಅವಕಾಶವೇ ಇಲ್ಲ, ಹಾಗೆಯೇ ನಮ್ಮ ಕಲಿಕಾ ವ್ಯವಸ್ಥೆ ಅಕಡೆಮಿಕ್ ಕೇಂದ್ರಿತವಾದುದು. ಶಾರೀರಿಕ, ಮಾನಸಿಕ ಆರೋಗ್ಯದ ಬೆಳವಣಿಗೆ ಮತ್ತು ಸಾಮರ್ಥ್ಯ ವೃದ್ಧಿಯತ್ತ ಅಲ್ಲಿ ಲಕ್ಷ್ಯ ಇರುವುದೇ ಇಲ್ಲ. ಲಕ್ಷಾಂತರ ಶಾಲೆಗಳಿಗೆ ಆಟದ ಮೈದಾನಗಳೇ ಇಲ್ಲ. ಲೈಬ್ರರಿಗಳು ಅಥವಾ ಇಂಟರ್‌ನೆಟ್ ವ್ಯವಸ್ಥೆಗಳೂ ದುಸ್ತರ. ಹೆಣ್ಣುಮಕ್ಕಳ ಅವಸ್ಥೆಯನ್ನಂತೂ ಕೇಳುವುದೇ ಬೇಡ. ಈ ಹಿನ್ನೆಲೆಯಲ್ಲಿ ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸ್ವಸಹಾಯ ಸಂಘಗಳು, ಉದ್ಯೋಗದ ಸ್ಥಳಗಳಲ್ಲಿ ವ್ಯಕ್ತಿತ್ವ ವಿಕಸನದ ಪರಿಕಲ್ಪನೆಗಳನ್ನು ತೆರೆದಿಡುವ ಅಗತ್ಯವಿದೆ. ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ 'ಸಾಫ್ಟ್ ಸ್ಕಿಲ್'ಗಳನ್ನು ಬೋಧಿಸುವ ಅಗತ್ಯವಿದೆ.

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಸಂವಹನಾ ಸಮಾಲೋಚಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬಡಪಾಯಿ ಪಾರಿವಾಳಗಳು

ಮೈಸೂರಿನ ಪಾರಂಪರಿಕ ಕಟ್ಟಡಗಳ, ಅದರಲ್ಲೂ ವಿಶೇಷವಾಗಿ ಅರಮನೆಯ ಆಜುಬಾಜಿನಲ್ಲಿ ನೆಲೆ ಕಂಡುಕೊಂಡಿರುವ ನೂರಾರು ಅತ್ಯಾಕರ್ಷಕ ಪಾರಿವಾಳಗಳಿಗೆ ಕೆಲವು ಪಕ್ಷಿಪ್ರಿಯರು ಹಾಗೂ ಸಂಘ-ಸಂಸ್ಥೆಗಳು ಪ್ರತಿನಿತ್ಯ ಧಾನ್ಯ ಮತ್ತು ಇತರ ಕಾಳುಗಳನ್ನು ಹಾಕುತ್ತಾ ಬರುತ್ತಿರುವುದು ಸರಿಯಷ್ಟೇ. ಆದರೆ ಪಾರಿವಾಳಗಳ ಹಿಕ್ಕೆಯಿಂದ ಈ ಪಾರಂಪರಿಕ ಕಟ್ಟಡಗಳ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಮತ್ತು ಅಲ್ಲಿನ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂಬ ಕಾರಣದಿಂದ ಅವಕ್ಕೆ ಧಾನ್ಯಗಳನ್ನು ಉಣಿಸಬಾರದು ಎಂಬ ಕೂಗು ಕಳೆದ ಕೆಲವು ತಿಂಗಳಿಂದ ಕೇಳಿಬರುತ್ತಿದೆ. ಮನುಷ್ಯರಂತೆ ಪಶು-ಪಕ್ಷಿಗಳಿಗೂ ಹೊಟ್ಟೆ ಎಂಬುದೊಂದಿದೆ. ಮನುಷ್ಯ ನಾನಾ ರೀತಿಯ ಕೆಲಸ, ಕಸರತ್ತು ಮಾಡಿ ತನ್ನ ತುತ್ತಿನ ಚೀಲ ತುಂಬಿಸಿಕೊಳ್ಳುತ್ತಾನೆ; ಆದರೆ ಬಡಪಾಯಿ ಪಾರಿವಾಳಗಳು ಎಲ್ಲಿಗೆ ಹೋಗಬೇಕು? ಅದೂ ಅಲ್ಲದೆ, ಈ ಪಾರಿವಾಳಗಳು ಸಾಕಷ್ಟು ವರ್ಷಗಳಿಂದ ಅರಮನೆಯ ಪ್ರವೇಶದ್ವಾರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿವೆ. ಅವುಗಳನ್ನು ಅಲ್ಲಿಂದ ಓಡಿಸುವುದು ಪಾಪದ ಕೆಲಸ. ಆದ್ದರಿಂದ, ಅರಮನೆ ಮಂಡಳಿಯಾಗಲೀ, ಜಿಲ್ಲಾಡಳಿತವಾಗಲೀ ಪಾರಿವಾಳಗಳ ಆಹಾರ ಪೂರೈಕೆಗೆ ತೊಡಕಾಗದ ಹಾಗೆ ಈ ಸಮಸ್ಯೆಯನ್ನು ಬಗೆಹರಿಸುವುದು ಸೂಕ್ತ.

- ಕೆ.ವಿ.ವಾಸು, ಮೈಸೂರು

ಭಗವಾನರಿಂದ ಕಾಪಾಡಪ್ಪಾ!

ಮನುಸ್ಮೃತಿಯಲ್ಲಿ ಎಲ್ಲ ಶೂದ್ರರು ಬ್ರಾಹ್ಮಣರ ಗುಲಾಮರು ಎಂಬ ಅರ್ಥವಿದೆ. ದೇವಸ್ಥಾನ ಕಟ್ಟಿದ ಶೂದ್ರರನ್ನು ಒಳಗಿನ ಬ್ರಾಹ್ಮಣರು ಹೊರಗೇ ನಿಲ್ಲಿಸುತ್ತಾರೆ. ಇಂಥ ಆಚರಣೆ ಸರಿಯೇ? ನಿಮಗೆ ಮಾನ-ಮರ್ಯಾದೆ ಇದ್ದರೆ ದೇವಸ್ಥಾನಗಳಿಗೆ ಹೋಗಬೇಡಿ. ನಿಮ್ಮನ್ನು ನಿಂದಿಸುವ ಧರ್ಮವನ್ನು ತಿರಸ್ಕರಿಸಿ'- ಇದು ಮೈಸೂರಿನಲ್ಲಿ ನಡೆದ ಮಹಿಷ ಮಂಡಲೋತ್ಸವದಲ್ಲಿ ಪ್ರೊ.ಭಗವಾನ್‌ರವರು ಜನರಿಗೆ ಕೊಟ್ಟ ಕರೆ! ಇವರಿಗೆ ಹಿಮ್ಮೇಳವಾಗಿ ಪ್ರೊ.ನಂಜರಾಜ ಅರಸ್ ಅವರು, 'ಚಾಮುಂಡಿ ಎಂಬುದು ಸುಳ್ಳು, ಎಲ್ಲ ಕಾಲ್ಪನಿಕ. ಮಹಿಷ ಮಾತ್ರ ಸತ್ಯ!' ಎಂದಿದ್ದಾರೆ.

ತಥಾಕಥಿತ ಎಡಪಂಥೀಯ ವಿಚಾರವಾದಿ ಭಗವಾನರಿಗೆ ತಮ್ಮ ಹೇಳಿಕೆಗಳಿಂದ ವಿವಾದ ಸೃಷ್ಟಿಸುವುದೆಂದರೆ ಮೊದಲಿನಿಂದಲೂ ಅಚ್ಚುಮೆಚ್ಚು. ಅವರ ಹಿಂದಿನ ಕೆಲ ಹೇಳಿಕೆಗಳು ಹೀಗಿವೆ: ''ರಾಮಾಯಣ, ಮಹಾಭಾರತ ಎಲ್ಲವೂ ಸುಳ್ಳು, ಎಲ್ಲವೂ ಕಾಲ್ಪನಿಕ; ಶ್ರೀರಾಮ ಒಬ್ಬ ಲಂಪಟ, ಕುಡಿಯುತ್ತಿದ್ದ, ಮಾಂಸ ತಿನ್ನುತ್ತಿದ್ದ, ಸೀತೆಯೊಂದಿಗೆ ಕುಳಿತು ಅಮಲು ಪದಾರ್ಥ ಸೇವಿಸುತ್ತಿದ್ದ; ಯಜ್ಞ-ಯಾಗಾದಿಗಳಿಂದ ಏನೂ ಪ್ರಯೋಜನವಿಲ್ಲ. ನೀವು ಕಟ್ಟಿಕೊಂಡ ದಾರಕ್ಕೆ ನಿಜವಾಗಲೂ ಶಕ್ತಿಯಿದ್ದರೆ ಪಾಕಿಸ್ತಾನ, ಚೀನಾದ ಗಡಿಭಾಗಕ್ಕೆ ಹೋಗಿ ಯಜ್ಞ ಮಾಡಿಬನ್ನಿ, ನೋಡೋಣ; ನಮಗೆ ಹಿಂದೂಧರ್ಮ ಬೇಕಿಲ್ಲ. ಶೂದ್ರರು ವೇಶ್ಯೆಗೆ ಹುಟ್ಟಿದವರೆಂದು ಹೇಳುವ ಧರ್ಮವಿದು. ಎಲ್ಲರೂ ಬೌದ್ಧ ಧರ್ಮವನ್ನು ನಂಬಿ. ಹಿಂದೂ ಎಂದರೆ ಬ್ರಾಹ್ಮಣರು. ಅಂದರೆ ಹಿಂದಕ್ಕೆ ಹೋಗುವ ಜನ, ಮುಂದೆ ಬಾರದ ಜನ''.

ಸನಾತನ ಧರ್ಮ, ಬ್ರಾಹ್ಮಣರು ಎಂದರೆ ಭಗವಾನರಿಗೆ ಅದೇಕೋ ಮೈಯೆಲ್ಲಾ ಉರಿ. ಬ್ರಾಹ್ಮಣರೇ ಅವರ ಟಾರ್ಗೆಟ್. ಹಾಗಾಗಿ ಹಿಂದೂಗಳು ಪೂಜಿಸುವ ಗೋಮಾತೆಯ ಮಾಂಸವನ್ನು ಮೈಸೂರಿನ ಸರಕಾರಿ ಕಲಾಮಂದಿರದಲ್ಲಿ ಸಾರ್ವಜನಿಕವಾಗಿ ಸೇವಿಸಿ, ಎಲ್ಲರೂ ಸೇವಿಸುವಂತೆ ಪ್ರಚೋದಿಸಿದರು. ಹಾಗಾಗಿ ಹಲವಾರು ಬಾರಿ ಪೊಲೀಸ್ ಸ್ಟೇಷನ್, ಪ್ರತಿಭಟನೆ, ವಾಗ್ವಾದಗಳನ್ನು ಕಂಡಿದ್ದಾರೆ. ಸದಾ ಸುದ್ದಿಯಲ್ಲಿರಬೇಕೆಂಬ ಅವರ ತೆವಲಿಗೆ ಮದ್ದಾಗಿ ನಮ್ಮ ಮಾಧ್ಯಮಗಳು ಪ್ರತಿನಿತ್ಯ ಅವರದೊಂದು ಭಾವಚಿತ್ರ ಪ್ರಕಟಿಸಿ, ಸುಪ್ರಭಾತ ಹೇಳುವುದೊಳಿತು! ಧರ್ಮ, ಪುರಾಣ, ಜಾತಿ ಮೊದಲಾದ ಸೂಕ್ಷ್ಮ ವಿಷಯಗಳ ಬಗ್ಗೆ ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ಸಮಾಜದಲ್ಲಿ ಕ್ಷೋಭೆಯುಂಟುಮಾಡುವ ಯತ್ನವನ್ನು ಶ್ರೀಯುತರು ಇನ್ನಾದರೂ ನಿಲ್ಲಿಸುವುದು ಒಳಿತು.

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಬೆಳೆದಿದ್ದು ಸಾಕು

ಸರಕಾರದ ಪ್ರತಿಯೊಂದು ಮಹತ್ವಾಕಾಂಕ್ಷಿ ಯೋಜನೆಗೂ ಬೆಂಗಳೂರನ್ನೇ ಆಯ್ಕೆಮಾಡುವುದು ತರವಲ್ಲ. ಈ ಮಹಾನಗರಿಯು ಅಳತೆಗೂ ಮೀರಿ ಬೆಳೆದು ನಿಂತಿದೆ. ಈಗೇನಿದ್ದರೂ ಅದನ್ನು ಉಳಿಸುವುದಕ್ಕೆ ಯೋಜನೆ ರೂಪಿಸಬೇಕು. 'ಕ್ವಿನ್ ಸಿಟಿ' ಎಂಬ ಮಹತ್ವಾಕಾಂಕ್ಷಿ ಯೋಜನೆಗೆ ಪುನಃ ಬೆಂಗಳೂರನ್ನೇ ಆಯ್ಕೆಮಾಡುವ ಬದಲು, ರಾಜ್ಯದ ಮಿಕ್ಕ ಜಿಲ್ಲಾ ಕೇಂದ್ರಗಳನ್ನು ಪರಿಗಣಿಸಬಹುದಾಗಿತ್ತು. ಅಲ್ಲಿ ಇಂಥ ಯೋಜನೆ ಕಾರ್ಯರೂಪಕ್ಕೆ ಬಂದರೆ ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವುದರಿಂದ, ಜನರು ಬೆಂಗಳೂರಿಗೆ ವಲಸೆ ಬರುವುದು ತಪ್ಪುತ್ತದೆ ಮತ್ತು ಆ ಕೇಂದ್ರಗಳಿಗೂ ಸಾಕಷ್ಟು ಅನುಕೂಲವಾಗುತ್ತದೆ. ಮಾತ್ರವಲ್ಲದೆ, ಆ ಜಿಲ್ಲೆಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೂ ಆದ್ಯತೆ ನೀಡಿದಂತಾಗುತ್ತದೆ.

- ಸುರೇಂದ್ರ ಪೈ, ಭಟ್ಕಳ

ಕಠಿಣ ಕ್ರಮ ಅಗತ್ಯ

ಆಧುನಿಕತೆಯ ಹೆಸರಲ್ಲಿ 'ರೇವ್ ಪಾರ್ಟಿ'ಯಂಥ ಕಾನೂನುಬಾಹಿರ ಚಟುವಟಿಕೆಗಳು ಇತ್ತೀಚೆಗೆ ಯಥೇಚ್ಛವಾಗಿ ನಡೆಯುತ್ತಿವೆ. ಕೆಲ ಸ್ಟಾರ್ ಹೋಟೆಲ್‌ಗಳು, ಫಾರ್ಮ್‌ಹೌಸ್‌ಗಳಲ್ಲಿ ನಡೆಯುತ್ತಿದ್ದ ಇಂಥ ಪಾರ್ಟಿಗಳು ಈಗ ಮೈಸೂರು ತಾಲೂಕಿನ ರಾಮೇನಹಳ್ಳಿ ಗ್ರಾಮದ, ಕೆಆರ್‌ಎಸ್ ಜಲಾಶಯದ ಹಿನ್ನೀರಿನ ಬಳಿಯ ಪ್ರದೇಶಕ್ಕೂ ವ್ಯಾಪಿಸಿರುವುದು ಕಳವಳಕಾರಿ ಸಂಗತಿ. ಇದು ನಿರ್ಬಂಧಿತ ಪ್ರದೇಶವಾಗಿದ್ದರೂ ಕೆಲವರು ಇಲ್ಲಿಗೆ ಆಗಮಿಸಿ ಮೋಜು-ಮಸ್ತಿ ನಡೆಸುತ್ತಿರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನು ಎತ್ತಿತೋರಿಸುತ್ತದೆ. ಅಲ್ಲದೆ, ಈ ಹಿನ್ನೀರಿನ ಪ್ರದೇಶದಲ್ಲಿ ಈ ಹಿಂದೆ ಹಲವು ಅವಘಡ, ಸಾವು-ನೋವು ಸಂಭವಿಸಿವೆ. ಮೋಜು-ಮಸ್ತಿ-ಕುಡಿತದ ನೆಪದಲ್ಲಿ ಏನಾದರೂ ಪ್ರಾಣಹಾನಿ ಸಂಭವಿಸಿದರೆ ಅದಕ್ಕೆ ಹೊಣೆ ಯಾರು? ಸ್ಥಳೀಯ ಆಡಳಿತ ಹಾಗೂ ಸರಕಾರ ಇನ್ನಾದರೂ ಈ ನಿಟ್ಟಿನಲ್ಲಿ ಎಚ್ಚರ ವಹಿಸಿ ಕಠಿಣ ಕ್ರಮಕ್ಕೆ ಮುಂದಾಗಲಿ.

- ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಹೆಬ್ಬೆಟ್ಟೂ ಇರಲಿ

ಡಿನೋಟಿಫಿಕೇಷನ್ ಪ್ರಕರಣವೊಂದರ ಕುರಿತು ಕೇಂದ್ರ ಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು, 'ಆ ಕಡತದಲ್ಲಿರುವ ಸಹಿ ನನ್ನದಲ್ಲ, ಯಾರೋ ಫೋರ್ಜರಿ ಮಾಡಿದ್ದಾರೆ' ಎಂದಿದ್ದಾರೆ. ಸಹಿಯೇ ತಮ್ಮದಲ್ಲ ಎಂದರೆ ಹೇಗೆ? ತಮ್ಮದಲ್ಲದಿದ್ದರೆ ಆಗಲೇ ದೂರು ನೀಡದೆ ಇಲ್ಲಿಯವರೆಗೆ ಸುಮ್ಮನಿದ್ದುದೇಕೆ? ಇಂಥ ಪ್ರಕರಣಗಳಲ್ಲಿ ಸಹಿಯ ಸತ್ಯಾಸತ್ಯತೆ ಹೊರಬರಲು ವರ್ಷಗಳೇ ಹಿಡಿಯಬಹುದು; ಅಷ್ಟರವರೆಗೆ ನಿರಾಳವಾಗಿ ಕಾಲ ದೂಡಬಹುದು ಎಂಬ ಮನೋಭಾವ ಅಧಿಕಾರಸ್ಥರಲ್ಲಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಜತೆಗೆ, ಎಲ್ಲವೂ ಸಚಿವರ ಗಮನಕ್ಕೆ ಬಂದೇ ಬರುತ್ತದೆ ಎನ್ನಲಾಗದು; ಹಾಗಾಗಿ ಫೋರ್ಜರಿ ಆರೋಪವನ್ನೂ ತಳ್ಳಿಹಾಕುವಂತಿಲ್ಲ. ಹಾಗಾಗಿ, ಮಂತ್ರಿಗಳು ಸೇರಿದಂತೆ ಯಾವುದೇ ಅಧಿಕಾರಿಗಳೂ ಕಡತಕ್ಕೆ ಸಹಿಹಾಕುವುದರ ಜತೆಗೆ ತಮ್ಮ ಹೆಬ್ಬೆಟ್ಟಿನ ಗುರುತನ್ನೂ ದಾಖಲಿಸುವ ನಿಯಮ ರೂಪಿಸಲಿ. ಆಗ ಸಹಿಗೊಂದು ದೃಢೀಕರಣ ಲಭಿಸುತ್ತದೆ. ಸಹಿ ಹಾಕುವವರಿಗೂ, ಹಾಕಿಸಿಕೊಳ್ಳುವವರಿಗೂ ಬದ್ಧತೆಯಿರುತ್ತದೆ. ಫೋರ್ಜರಿಯ ಸಾಧ್ಯತೆಗೂ ಕಡಿವಾಣ ಬೀಳುತ್ತದೆ.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಭಟ್ಟರ್ ಸ್ಕಾಚ್

● **ನಾಗೇಶ ಕುಂಬಳೂರು, (ಇಮೇಲ್ ಮೂಲಕ)**
ಭಟ್ರೇ, ದರ್ಶನ್ ಜೈಲು ಸೇರಿ ನೂರು ದಿನ ಆಯ್ತಲ್ಲ?
- ಅಲ್ಲ ಗುರು, ಇದನ್ನು ಸಂಭ್ರಮಿಸಬೇಕಾ? ವಿಷಾದಪಡಬೇಕಾ?

● **ರಮೇಶ ಗೌಡ, ಮಳವಳ್ಳಿ**
ಭಟ್ರೇ, ದೇವೇಗೌಡರು ಕಣ್ಣೀರು ಹಾಕಲು ಅವರ ಕುಟುಂಬ ಕಾರಣ ಅಂತ ಚೆಲುವರಾಯಸ್ವಾಮಿ ಹೇಳಿದ್ದಾರಲ್ಲ?
- ಅವರ ಕುಟುಂಬವನ್ನೇಕೆ ದೂರುತ್ತೀಯಾ? ಗೌಡರಿಗೆ ಕರೆದಾಗ ಬರುವುದು ಕಣ್ಣೀರೊಂದೇ!

● **ಸತೀಶ ಹುಣಸೇಹಳ್ಳಿ, ಹುಣಸೇಹಳ್ಳಿ**
ಭಟ್ರೇ, ಕುಮಾರಣ್ಣನ ಬಗ್ಗೆ ಯಾರೇ ಮಾತಾಡಿದರೂ ಬಿಜೆಪಿ ನಾಯಕರು ವಾಗ್ದಾಳಿ ಮಾಡ್ತಾರಲ್ಲ?
- ಕುಮಾರಣ್ಣನ ಮನೆ ಕಾಯಲು ಅವರು ಸಿದ್ಧರಿರುವಾಗ ಇದೇನು ಮಹಾ?!

● **ನವೀನ ಭಾಗಮಂಡಲ, (ಇಮೇಲ್ ಮೂಲಕ)**
ಭಟ್ರೇ, ಶೂದ್ರರು ದೇವಸ್ಥಾನಕ್ಕೆ ಹೋಗೋದನ್ನು ನಿಲ್ಲಿಸಲಿ ಎಂದು ಕೆ.ಎಸ್.ಭಗವಾನ್ ಹೇಳಿದ್ದಾರಲ್ಲ?
- ಆತ ಮೊದಲು ತನ್ನ ಹೆಸರನ್ನು ಬದಲಿಸಿಕೊಳ್ಳಲಿ!

● **ಜೀವನ್ ಕೆರೆಹಳ್ಳಿ, ಮದ್ದೂರು**
ಭಟ್ರೇ, ಕೆಲವರು ಇದ್ದಕ್ಕಿದ್ದಂತೆ ನೇಪಥ್ಯಕ್ಕೆ ಸರಿದುಬಿಡ್ತಾರಲ್ಲ?
- ಭವಾನಿ ರೇವಣ್ಣ ಕುರಿತು ಈ ಮಾತು ಹೇಳಿದ್ದರೆ ಹೂಂ ಅಂತಿದ್ದೆ!

● **ಮಾರುತಿ ಪಟ್ಟೇಗಾರ, ಬೀದರ**
ಭಟ್ರೇ, ಮೋದಿಯವರನ್ನು ಇಳಿಸುವವರೆಗೂ ಸಾಯೊಲ್ಲ ಅಂತ ಖರ್ಗೆಯವರು ಹೇಳಿದ್ದಾರಂತೆ?
- ಹಾಗಾದ್ರೆ, ಖರ್ಗೆ ದೀರ್ಘ ಅವಧಿಗೆ ಬದುಕಿರಬೇಕೆಂದರೆ ಮೋದಿ ಇನ್ನೂ ಅನೇಕ ವರ್ಷ ಅಧಿಕಾರದಲ್ಲಿರಬೇಕು!

● **ಸಿ.ಚಂದ್ರು, ಬೆಂಗಳೂರು**
ಸರ್, ರಾಜಕೀಯದಲ್ಲಿ ಅರ್ಹತೆ ಮುಖ್ಯವಾ?
- ಅದು ಮುಖ್ಯವಾಗಿದ್ದರೆ ಆ ಉದಯನಿಧಿ ತಮಿಳುನಾಡಿನ ಡಿಸಿಎಂ ಆಗ್ತಾ ಇದ್ರಾ?!

● **ಭಾವನಾ ಹೆಗಡೆ, ಶಿರಸಿ**
ಭಟ್ರೇ, ಕುಮಾರಸ್ವಾಮಿಯವರು ಪೊಲೀಸ್ ಅಧಿಕಾರಿಯೊಬ್ಬರ ಬಗ್ಗೆ ಹಾಗೆ ಹೇಳಬಾರದಿತ್ತು, ಏನಂತೀರಾ?
- ಹಂದಿ ಹೇಳಿಕೆಗೆ ಮಂದಿ ಉತ್ತರ ಕೊಡುವಂತಾಯ್ತು!

● **ಹರಿ ಓಂ ಶಾಸ್ತ್ರೀ, ಶಂಕರಪುರಂ**
ಭಟ್ರೇ, ನಿಮ್ಮೊಂದಿಗೆ ಖುಲ್ಲಂ ಖುಲ್ಲಾ ಮಾತನಾಡೋಣವೆಂದು ನಾಗಮಂಗಲಕ್ಕೆ ಹೋದರೂ ನೀವು ಸಿಗಲಿಲ್ಲವಲ್ಲಾ?
- ಸಾರಿ, ನಾನು ಅಂದು ನೆಲಮಂಗಲದಲ್ಲಿದ್ದೆ!

ನಮ್ಮ ಕಥೆ ಬರೆವವರಾರು ಗೊತ್ತೇ?

ಚಿಂತನೆಗಳಿಗೆ ಜೀವಕೊಟ್ಟಾಗ ಮಾತ್ರವೇ ಮೇಲೆ ಚಮತ್ಕಾರ ನಡೆಯುತ್ತದೆ. 'ದೇವರು ಕೊಟ್ಟ ಜೋಳಿಗೆ ಎಂದು ಮರಕ್ಕೆ ನೇತುಹಾಕಿ ನಿದ್ರಿಸಿದರೆ ದವಸ-ಧಾನ್ಯ ಸಿಗುವುದಿಲ್ಲ' ಎಂದಿದ್ದಾರೆ ಬಲ್ಲವರು. ದೇವರೇ ಕೊಟ್ಟ ಜೋಳಿಗೆ ಹಿಡಿದು ಭಿಕ್ಷೆಗೆ ಸುತ್ತಬೇಕು. ಸರಿಯಾಗಿ ಕೆಲಸ ಮಾಡದೆ ವಿತಂಡವಾದ ಮಾಡಿದರೆ ಪ್ರಯೋಜನವಿಲ್ಲ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಹಾಗೇ ಸುಮ್ಮನೆ ನಿಮ್ಮ ಸುತ್ತಮುತ್ತ ತಿರುಗಿ ನೋಡಿ, ನಿಮ್ಮ ಕಣ್ಣಿಗೆ ಏನು ಕಾಣಿಸುತ್ತಿದೆ ಎನ್ನುವುದನ್ನು ಬರೆದಿಟ್ಟುಕೊಳ್ಳಿ. ನಿಮ್ಮ ಸುತ್ತಮುತ್ತ ಇರುವ ಹತ್ತು ಜನರ ಹೆಸರನ್ನು, ವಸ್ತುಗಳನ್ನು, ನಿಮ್ಮ ಇಂದಿನ ಪರಿಸ್ಥಿತಿಯನ್ನು, ನಿಮ್ಮ ಆರೋಗ್ಯ, ಹಣ... ಒಟ್ಟಾರೆ ನಿಮ್ಮ ದಿನ ನಿತ್ಯದ ಬದುಕಿನಲ್ಲಿ ಸಹಜವಾಗಿ ಭಾಗಿಯಾಗುವ ಎಲ್ಲವನ್ನೂ ಒಮ್ಮೆ ಅವಲೋಕಿಸಿ ನೋಡಿ. ಅದ್ಯಾವುದೂ ನಿಮಗೆ ಒಂದು ದಿನದಲ್ಲಿ ಸಿಕ್ಕಿದ್ದಲ್ಲ! ಅದನ್ನು ನೀವು ಬಯಸಿ ಪಡೆದುಕೊಂಡಿದ್ದು. ಅದನ್ನು ಪಡೆಯಲು ನೀವು ಪ್ರಜ್ಞಾಪೂರ್ವಕವಾಗಿಯೋ ಅಥವಾ ಇಲ್ಲದೆಯೋ ಕೆಲಸ ಮಾಡಿರುತ್ತೀರಿ. ಹೀಗಾಗಿ ಇಂದು ನಿಮ್ಮ ಸುತ್ತಮುತ್ತ ಇರುವುದೆಲ್ಲವೂ ನೀವು ಸೃಷ್ಟಿಸಿಕೊಂಡಿದ್ದು. ನಿಮ್ಮ ಇಂದಿನ ಕಥೆಯ ನಿಜವಾದ ಮಾಲೀಕರು ಯಾರಾದರೂ ಇದ್ದರೆ ಅದು ನೀವು ಮಾತ್ರ!

ಇಂದಿನ ನಿಮ್ಮ ಜೀವನ ಹಸನಾಗಿದ್ದರೆ ಮೇಲಿನ ನನ್ನ ಮಾತುಗಳನ್ನು ಒಪ್ಪುವುದರಲ್ಲಿ ಯಾರಿಗೂ ಕಷ್ಟವಾಗುವುದಿಲ್ಲ. ಆದರೆ ಇಂದಿನ ಜೀವನ ಅತ್ಯಂತ ಕಷ್ಟದಿಂದ ಇದ್ದು, ಎಲ್ಲದರಲ್ಲೂ ಸೋಲು ಕಾಣುತ್ತಿದ್ದು, ಕಣ್ಮುಂದಿನ ಬದುಕು ಕಪ್ಪು ಬಿಳುಪಾಗಿದ್ದು, ಬದುಕಿನಲ್ಲಿ ಕಲರ್ ಇಲ್ಲವಾಗಿದ್ದರೆ ಅದಕ್ಕೂ ನೀವೇ ಕಾರಣ. ಒಪ್ಪುವುದು, ಬಿಡುವುದು ಆಮೇಲಿನ ಮಾತು. ಹೌದು ನಿಮ್ಮ ಕಥೆಯನ್ನು ನೀವೇ ಬರೆದು ಕೊಂಡಿದ್ದೀರಿ. ಕಥೆ ಗೆಲುವಿನ ಕಥೆಯಾಗದೆ, ಸೋಲು ಮತ್ತು ಗೋಳಿನ ಕಥೆಯಾದರೆ ಅದಕ್ಕೂ ಬೇರೆ ಯಾರನ್ನೂ ದೂಷಿಸಿ ಪ್ರಯೋಜನವಿಲ್ಲ. ಈ ಅಧ್ಯಾಯವನ್ನು ಮೊದಲ ಅಧ್ಯಾಯವನ್ನಾಗಿ ಮಾಡಬೇಕು ಎನ್ನಿಸಿದ್ದು ಕೂಡ ನಿಜ. ಅದಕ್ಕೆ ಕಾರಣ ಸ್ಪಷ್ಟ. ಅದೆಂದರೆ- ಇವತ್ತಿಗೂ ಬಹುತೇಕರಿಗೆ ತಮ್ಮ ಹಣೆಬರಹವನ್ನು ಬರೆದುಕೊಳ್ಳುವವರು ತಾವೇ ಎನ್ನುವ ಸರಳ ಸತ್ಯ ಗೊತ್ತಿಲ್ಲದೇ ಇರುವುದು. ಇಂಥವರು ಎಲ್ಲಾ ಸೋಲುಗಳಿಗೂ ಹಣೆಬರಹವನ್ನು, ವಿಧಿಯನ್ನು, ಬಂಧು-ಮಿತ್ರರನ್ನು, ಸಮಯವನ್ನು, ವ್ಯವಸ್ಥೆಯನ್ನು ದೂಷಿಸಿಕೊಂಡು ಕಾಲ ಹಾಕುತ್ತಾರೆ. ದಯವಿಟ್ಟು ಕ್ಷಮೆ ಇರಲಿ ಸ್ನೇಹಿತರೆ, ಇದು ಶುದ್ಧ ಸುಳ್ಳು. ನೀವು ಸಮುದ್ರದ ದಂಡೆಯಲ್ಲಿ ಎಷ್ಟೇ ವೇಳೆ ಕಾಯುತ್ತ ಕುಳಿತುಕೊಳ್ಳಿ- ನೀರು ಬಿಸಿಯಾದ ಮೇಲೆ ಈಜಾಡಲು ಇಳಿಯುತ್ತೇನೆ ಎನ್ನುವ ಆಶಾಭಾವದಲ್ಲಿ; ಅದೆಂದಿಗೂ ಆಗದ ವಿಷಯ. ಬದುಕು ಕೂಡ ಥೇಟ್ ಹಾಗೆಯೇ, ಕಾಯುತ್ತ ಕುಳಿತರೆ ಕಾಯುತ್ತಲೇ ಕುಳಿತಿರುತ್ತೇವೆ. ಈ ಅಗಾಧ ಪ್ರಪಂಚದಲ್ಲಿ ಯಾರೂ ನಮಗೆ ಜಾಗವನ್ನು ಬಿಟ್ಟುಕೊಡುವುದಿಲ್ಲ, ಇಲ್ಲಿ ನಮ್ಮ ಜಾಗವನ್ನು ನಾವೇ ಸೃಷ್ಟಿಸಿಕೊಳ್ಳಬೇಕು.

ವೃತ್ತಿ-ಪ್ರವೃತ್ತಿಯ ಸಲುವಾಗಿನ ವ್ಯಾಪಕ ಓಡಾಟದಲ್ಲಿ ನನಗೆ ಬಹಳಷ್ಟು ಜನರ ಪರಿಚಯವಾಗಿದೆ, ಮಾತುಕತೆಯಾಗಿದೆ. ಅದರಲ್ಲಿ ಒಂದಷ್ಟು ಪ್ರತಿಶತ ಜನರು ಮಾತ್ರ ತಮಗೆ ಬೇಕಾದ ಯಶಸ್ಸು, ಹಣ, ಬದುಕು ಕಟ್ಟಿಕೊಂಡಿದ್ದಾರೆ. ಉಳಿದ ಬಹುತೇಕರ ಕಥೆ, ಅದು ಗೋಳಿನ ಕಥೆ. ಹಣೆಬರಹ, ಪೂರ್ವಜನ್ಮದ ಋಣ ಇತ್ಯಾದಿಗಳ ಮೇಲೆ ಸೋಲಿನ ಕಾರಣ ಹೊರಿಸಿ, ಇಷ್ಟವಿಲ್ಲದ ಬದುಕನ್ನೇ ಬದುಕುತ್ತಿರುತ್ತಾರೆ. ಇಂಥ ವ್ಯಕ್ತಿಗಳನ್ನು ನಾನು ಕೆಲವು ಬಾರಿ ಪ್ರಶ್ನೆ ಮಾಡಿದ್ದೇನೆ- 'ನಿಮ್ಮ ಬಳಿ ಸಮಯ ಮತ್ತು ಹಣ ಎರಡೂ ಹೇರಳವಾಗಿ ಇದ್ದಿದ್ದರೆ ಏನು ಮಾಡುತ್ತಿದ್ದಿರಿ?' ಅಂತ. ತಕ್ಷಣವೇ, 'ಓಹ್, ಬದುಕು ತುಂಬಾ ಖುಷಿಯಾಗಿರುತ್ತಿತ್ತು' ಎನ್ನುವುದು ಸಾಮಾನ್ಯ ಉತ್ತರ. ಖುಷಿಯಾಗಿರುವುದು ಮನಸ್ಥಿತಿ. ಅದಕ್ಕೆ ನಿಗದಿತ ಸಮಯ ಅಥವಾ ಹಣದ ಅವಶ್ಯಕತೆ ಇಲ್ಲವೇ ಇಲ್ಲ, ಇರಲಿ.

ಖುಷಿಯಾಗಿರುವುದು ಎಂದರೇನು? ಎನ್ನುವ ಪ್ರಶ್ನೆಗೆ ಉತ್ತರವೂ ಬಹುತೇಕ ರೆಡಿಮೇಡ್. ಅದನ್ನು ಈ ಸಮಾಜ ನಮಗೆ ಕಲಿಸಿಕೊಟ್ಟಿದೆ. ನನಗನ್ನಿಸಿದ್ದನ್ನೆಲ್ಲಾ ಮಾಡುವುದು, ನನ್ನಿಷ್ಟದ ಕೆಲಸ ಮಾಡುವುದು, ಪ್ಯಾಷನ್ ಹಿಂದೆ ಹೋಗುವುದು ಇತ್ಯಾದಿ ಸಿದ್ಧ ಉತ್ತರಗಳು ಸಿಗುತ್ತವೆ. ಆಗೆಲ್ಲಾ, 'ಓಹ್ ಗ್ರೇಟ್... ನಿಮ್ಮಿಷ್ಟದ ಕೆಲಸ ಯಾವುದು? ನಿಮ್ಮ ಪ್ಯಾಷನ್ ಏನು?' ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಆಗ ಬರುವ ಉತ್ತರವೇ ಅವರವರ ಸದ್ಯದ ಪರಿಸ್ಥಿತಿಗೆ ಕಾರಣ. ಇಂಥವರಿಂದ ಸಾಮಾನ್ಯವಾಗಿ ಬರುವ ಉತ್ತರ 'ಓಹ್ ಗೊತ್ತಿಲ್ಲ, ಹಣ, ಸಮಯ ಸಿಕ್ಕಾಗ ಯೋಚಿಸಿ, ಒಳ್ಳೆಯ ನಿರ್ಧಾರ ಮಾಡುತ್ತೇನೆ' ಎನ್ನುವುದು. ಅಂದರೆ ಗಮನಿಸಿ ಬಹುತೇಕರಿಗೆ 'ಏನು ಬೇಕು? ಏನಾಗಬೇಕು? ಈ ಬದುಕಿನಿಂದ ಯಾವ ನಿರೀಕ್ಷೆ ಇಟ್ಟುಕೊಳ್ಳಬೇಕು, ಅದಕ್ಕಾಗಿ ಏನು ಮಾಡಬೇಕು?' ಎನ್ನುವ ಅತ್ಯಂತ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಸಿದ್ಧವಿಲ್ಲ. ಆಟೋ ಹತ್ತಿದ ತಕ್ಷಣ ಹೋಗಬೇಕಾದ ಸ್ಥಳವನ್ನು ಹೇಳದಿದ್ದರೆ ಡ್ರೈವರ್ ಎಲ್ಲಿಗೆ ಕರೆದುಕೊಂಡು ಹೋಗಲು ಸಾಧ್ಯ? ಥೇಟ್ ಹಾಗೆಯೇ ನೀವು ನಿಮ್ಮ ಸುಪ್ತ ಮನಸ್ಸಿಗೆ ಏನು ಬೇಕು ಎನ್ನುವುದನ್ನೇ ಫೀಡ್ ಮಾಡದಿದ್ದರೆ ಅದು ಬೇಕಾದ ಫಲಿತಾಂಶವನ್ನು ಹೇಗೆ ತಾನೇ ನೀಡೀತು?

ಎಲ್ಲಕ್ಕೂ ಮೊದಲಿಗೆ ನಾನು ಎಲ್ಲಿದ್ದೇನೆ? ಎಲ್ಲಿಗೆ ಹೋಗಬೇಕು? ಈ ಪ್ರಯಾಣಕ್ಕೆ ತಗಲುವ ಸಮಯವೆಷ್ಟು? ಖರ್ಚೆಷ್ಟು? ಎನ್ನುವುದನ್ನು ಅರಿತಿರಬೇಕು. ಖರ್ಚು ಎಂದರೆ ಅದು ಹಣವೇ ಆಗಿರಬೇಕೆಂದಿಲ್ಲ. ಒಟ್ಟಿನಲ್ಲಿ ಯಾವುದೂ ಪುಕ್ಕಟೆ ಸಿಗುವುದಿಲ್ಲ. ಎಲ್ಲವೂ ಒಂದು ಮೌಲ್ಯವನ್ನು ಬೇಡುತ್ತವೆ. ಇದನ್ನು ತಿಳಿದುಕೊಳ್ಳಬೇಕು. ಈಗ ನಾವಿರುವ ಜಾಗ ಅಂದರೆ ನಮ್ಮ ಪರಿಸ್ಥಿತಿಯ ಬಗ್ಗೆ ನಮಗೆ

ಒಪ್ಪಿಗೆಯಿಲ್ಲ ಅಥವಾ ಖುಷಿ, ಹೆಮ್ಮೆಯಿಲ್ಲ ಎಂದಾದರೆ, ಆಗ ಎಲ್ಲಿಗೆ ಹೋಗಬೇಕು ಅಂದರೆ ಏನನ್ನು ಮಾಡಬೇಕು ಅಥವಾ ಬೇರಾವ ಪರಿಸ್ಥಿತಿಗೆ ಹೋಗಬೇಕು, ಸರಳವಾಗಿ ಏನು ಬೇಕು ಎನ್ನುವುದನ್ನು ಕಂಡುಕೊಳ್ಳಬೇಕು. ನೆನಪಿರಲಿ- ಎಲ್ಲಿದ್ದೇವೆ ಎನ್ನುವುದರಿಂದ ಎಲ್ಲಿಗೆ ಹೋಗಬೇಕು ಎನ್ನುವ ಎರಡು ಸರಳ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರೆ ಅಲ್ಲಿಗೆ ಅರ್ಧ ಕೆಲಸವಾದಂತೆ! ಉಳಿದರ್ಧಕ್ಕೆ ಸಮಯ, ಪರಿಶ್ರಮದ ಅವಶ್ಯಕತೆ ಜತೆಯಾದರೆ ಸಾಕು.

ಈ ವೇಳೆಗೆ ಕೆಲವರು, 'ಇವೆಲ್ಲವೂ ಹೇಳಲು, ಕೇಳಲು ಬಹಳ ಚಂದ; ಆದರೆ ಇದು ಸಾಧ್ಯವೇ?' ಎನ್ನುವ ಪ್ರಶ್ನೆಯನ್ನು ಕೇಳಿಕೊಂಡಿರುತ್ತಾರೆ. ಅವರಿಗಾಗಿ ಮತ್ತು ನಿಮ್ಮೆಲ್ಲರಿಗಾಗಿ ಕಳೆದ ಎರಡು ದಶಕಗಳ ಹಿಂದೆ ಇದ್ದ ಪ್ರಪಂಚವನ್ನು ಒಮ್ಮೆ ಗಮನಿಸಿ ನೋಡಿ, ಇಂದಿನ ಪ್ರಪಂಚವನ್ನು ಗಮನಿಸಿ ನೋಡಿ. ಆಗಿರುವ ಅಗಾಧ ಬದಲಾವಣೆ ಕಣ್ಣಿಗೆ ಕಾಣುತ್ತದೆ. ನೀವು ಅಂದುಕೊಂಡ ತಕ್ಷಣ, ನಿರ್ಧಾರ ತೆಗೆದುಕೊಂಡ ತಕ್ಷಣ ಬದುಕು ಬದಲಾಗುವುದಿಲ್ಲ. ಪುಸ್ತಕ ಓದುವುದರಿಂದ, ಈ ಲೇಖನ ಓದುವುದರಿಂದ ಕೂಡ ನಿಮ್ಮ ಬದುಕು ಬದಲಾಗುವುದಿಲ್ಲ! ಬೆಂಬಿಡದೆ ಅಂದುಕೊಂಡ ಕಡೆಗೆ ನಿಲ್ಲದ ಪ್ರಯಾಣವಿರಬೇಕು, ಅಂದುಕೊಂಡಿದ್ದನ್ನು ಕಾರ್ಯರೂಪಕ್ಕೆ ತರಬೇಕು. ಆಗ ಸಮಯದ ಜತೆಗೆ ಬದುಕು ಖಂಡಿತ ಬದಲಾಗುತ್ತದೆ.

ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಸದಾ ಬದಲಾವಣೆ ಆಗುತ್ತಿರುತ್ತದೆ, ನಿತ್ಯವೂ ನೂರೆಂಟು ಘಟನೆಗಳು ಜರುಗುತ್ತವೆ. ಇವೆಲ್ಲವೂ ನಮ್ಮ ಯೋಚನೆಯ, ನಿರ್ಧಾರಗಳ ಫಲ. ಒಳ್ಳೆಯ ಯೋಚನೆಗಳ ಫಲಿತಾಂಶ ಒಳಿತನ್ನೂ ಕೆಟ್ಟ ಯೋಚನೆಗಳ ಫಲ ಕೆಡುಕನ್ನೂ ನೀಡುತ್ತವೆ.

ನಮ್ಮ ಯೋಚನೆಗಳಿಗೆ, ಚಿಂತನೆಗಳಿಗೆ ಇರುವ ತಾಕತ್ತಿನ ಅರಿವು ನಮಗಾದರೆ ನಾವು ಎಂದಿಗೂ ಋಣಾತ್ಮಕ ಚಿಂತನೆಗಳನ್ನು ಮಾಡುವುದಿಲ್ಲ. ಧನಾತ್ಮಕ ಯೋಚನೆಯಿಂದ ಪವಾಡವೇ ಜರುಗುತ್ತದೆ. ವೈದ್ಯಕೀಯ ವಿಜ್ಞಾನವನ್ನು ಒಮ್ಮೆ ಗಮನಿಸಿ ನೋಡಿ. ಹತ್ತಿಪತ್ತು ಸಂಖ್ಯೆಯ ಇಲಿಗಳ ಮೇಲಿನ ಪ್ರಯೋಗ ಇದನ್ನು ಸಿದ್ಧಪಡಿಸಿದೆ. ಒಳ್ಳೆಯ ಮಾತು, ಒಳ್ಳೆಯ ವಾತಾವರಣದಲ್ಲಿದ್ದ ಇಲಿಗಳಿಗೂ, ಋಣಾತ್ಮಕ ವಾತಾವರಣದಲ್ಲಿದ್ದ ಇಲಿಗಳಿಗೂ ಒಂದೇ ಆಹಾರವನ್ನು ನೀಡಿದಾಗ, ಧನಾತ್ಮಕ ಪರಿಸರದಲ್ಲಿನ ಇಲಿಗಳು ಹೆಚ್ಚು ಖುಷಿಯಿಂದ, ಆರೋಗ್ಯದಿಂದ ಇರುವುದು ಕಂಡುಬಂದಿದೆ.

ನಿತ್ಯವೂ ನಾವು ಆಡುವ ಮಾತು, ನಡೆದುಕೊಳ್ಳುವ ರೀತಿ ಅಭ್ಯಾಸವಾಗಿ ಬದಲಾಗುತ್ತವೆ. ಅಭ್ಯಾಸಗಳು ನಿಧಾನವಾಗಿ ನಮ್ಮ ಪರಿಚಯವಾಗುತ್ತವೆ. ನಮ್ಮ ಪರಿಚಯ ನಮ್ಮ ಚಿಂತನೆಗಳನ್ನು ಜಗತ್ತಿಗೆ ಪ್ರಚುರಪಡಿಸುತ್ತದೆ. ಹೀಗಾಗಿ ನಾವು ನಿತ್ಯವೂ ನಮ್ಮ ಅಭ್ಯಾಸಗಳನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳುವುದರ ಮೂಲಕ ಬದುಕನ್ನು ಖಂಡಿತ ಬದಲಿಸಿಕೊಳ್ಳಬಹುದು.

ಧನಾತ್ಮಕ ಚಿಂತನೆಗಳಿಂದ ಎಲ್ಲವೂ ಸಾಧ್ಯ ಎನ್ನುವುದನ್ನು ಅವಹೇಳನ ಮಾಡುವವರ ಸಂಖ್ಯೆಯೂ ದೊಡ್ಡದಿದೆ. ಎಲ್ಲವನ್ನೂ ಕೇವಲ ಯೋಚನೆ, ಚಿಂತನೆಗಳಿಂದ ಸಾಧಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ವಾದ ಇವರದು. 'ಹೊಟ್ಟೆ ತುಂಬಿದೆ ಎನ್ನುವ ಭಾವನೆಯಿಂದ ಎಷ್ಟು ದಿನ ಊಟ ಮಾಡದೆ ಇರಲು ಸಾಧ್ಯ? ನನಗೆ ಸಮಸ್ಯೆಗಳು ಇಲ್ಲ ಅಥವಾ ಸಮಸ್ಯೆಗಳು ಪರಿಹಾರವಾಗುತ್ತವೆ ಎನ್ನುವ ಧನಾತ್ಮಕ ಯೋಚನೆಯಿಂದ ಸಮಸ್ಯೆ ಪರಿಹಾರವಾಗುತ್ತದೆಯೇ?' ಎನ್ನುವ ಪ್ರಶ್ನೆಗಳನ್ನು ಕೇಳುತ್ತಾರೆ. ಗಮನಿಸಿ, ಚಿಂತನೆಗಳಿಗೆ ಜೀವಕೊಟ್ಟಾಗ ಮಾತ್ರವೇ ಮೇಲೆ ಹೇಳಿದ ಚಮತ್ಕಾರ ನಡೆಯುತ್ತದೆ. ಇದನ್ನು ಕನ್ನಡದ ಒಂದು ನಾಣ್ನುಡಿ ಚೆನ್ನಾಗಿ ವಿವರಿಸುತ್ತದೆ. 'ದೇವರು ಕೊಟ್ಟ ಜೋಳಿಗೆ ಎಂದು ಮರಕ್ಕೆ ನೇತುಹಾಕಿ ನಿದ್ದೆ ಮಾಡಿದರೆ ದವಸ-ಧಾನ್ಯಗಳು ಸಿಗುವುದಿಲ್ಲ' ಎನ್ನುತ್ತದೆ ಆ ಮಾತು. ಸ್ವತಃ ದೇವರೇ ಜೋಳಿಗೆ ಕೊಟ್ಟಿದ್ದರೂ ಅದನ್ನು ಹಿಡಿದು ಭಿಕ್ಷೆಗೆ ಊರೂರು ಸುತ್ತಬೇಕಾದ್ದು ಕರ್ತವ್ಯ. ಕೆಲಸವನ್ನು ಸರಿಯಾಗಿ ಮಾಡದೆ ವಿತಂಡವಾದದಿಂದ ಯಾವುದೇ ಪ್ರಯೋಜನವಿಲ್ಲ.

ನಂಬಿಕೆ, ಧನಾತ್ಮಕತೆ ಎಲ್ಲವೂ ಬದುಕಿಗೆ ಬೇಕು. ಅವೆಲ್ಲವುಗಳ ಜತೆಗೆ ನಿತ್ಯಜೀವನಕ್ಕೆ ಬೇಕಾಗುವ ಸಾಮಾನ್ಯ ಜ್ಞಾನ ಮತ್ತು ರಿಯಾಲಿಟಿಗಳ ಅರಿವು ಕೂಡ ಮುಖ್ಯ. ಯಾವ ಸನ್ನಿವೇಶಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದನ್ನು ಯಾರೂ ಹೇಳಿಕೊಡಲು ಸಾಧ್ಯವಿಲ್ಲ. ಅದನ್ನು ನಾವೇ ಕಲಿಯಬೇಕು.

ಬದಲಾವಣೆಯೊಂದೇ ಜಗತ್ತಿನಲ್ಲಿ ಶಾಶ್ವತ. ನಾವಿರುವ ಪರಿಸ್ಥಿತಿ ಎಷ್ಟೇ ಚಂದವಿರಲಿ ಅದು ಬದಲಾಗುತ್ತದೆ, ಬದಲಾಗಬೇಕು. ಇಲ್ಲದಿದ್ದರೆ ನಾವೇ ಬದಲಾಯಿಸುತ್ತೇವೆ. ನೀವು ಓದುತ್ತಿರುವ ಪುಸ್ತಕದ ಒಂದು ಅಧ್ಯಾಯದಲ್ಲಿನ ಪುಟದಲ್ಲಿ ಒಳ್ಳೆಯ ಮಾಹಿತಿ ಇದ್ದರೆ, ಅದನ್ನು ಓದಿ ಬಹಳ ಮುದಗೊಂಡಿರುತ್ತೀರಿ. ಹಾಗಂತ ಎಷ್ಟು ಸಮಯ ಅದೇ ಹಾಳೆಯಲ್ಲಿ ಉಳಿಯಬಹುದು? ಮುಂದಿನ ಪುಟಕ್ಕೆ ಹೋಗಲೇಬೇಕು, ಪುಟ ತಿರುಗಿಸದೆ ವಿಧಿಯಿಲ್ಲ. ಬದುಕೂ ಹಾಗೆಯೇ ಬದಲಾಗಬೇಕು, ಬದಲಾವಣೆಗೆ ಒಗ್ಗಿಕೊಳ್ಳಬೇಕು. ಸಮಯಕ್ಕೆ ತಕ್ಕಂತೆ ನಮ್ಮ ಬದುಕಿನ ಸ್ಕ್ರಿಪ್ಟ್‌ನಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಬೇರೆ ಯಾರೋ ಬರೆದ ಸ್ಕ್ರಿಪ್ಟ್‌ನಲ್ಲಿ ಪಾತ್ರವಾಗುವುದಕ್ಕಿಂತ ನಾವೇ ಬರೆದ ಕಥೆಯಲ್ಲಿ ನಮ್ಮನ್ನು ಕಂಡುಕೊಳ್ಳುವುದರಲ್ಲಿ ಸುಖವಿದೆ. ನೆನಪಿರಲಿ- ಇಲ್ಲಿ ನಮ್ಮ ಕಥೆಯ ಬರಹಗಾರ, ಪಾತ್ರಧಾರಿ, ನಿರ್ದೇಶಕ ಎಲ್ಲವೂ ನಾವೇ. ಗೆಲುವಿಗೂ, ಸೋಲಿಗೂ ಕಾರಣರು ನಾವೇ. ಅದು ಬೇರಾರೂ ಆಗಿರಲು ಸಾಧ್ಯವಿಲ್ಲ.

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಹಂದಿ ಹಿಂದೆ ಮಂದಿ!

ಅದೊಂದು ಪ್ರತಿಷ್ಠಿತ ಮೃಗಾಲಯ. ಅಲ್ಲಿನ ಕೆಲಸಗಾರರು ಪ್ರಾಣಿಗಳಿಗೆ ಸರದಿಯಂತೆ ಊಟ ಕೊಟ್ಟು, ತಂತಮ್ಮ ನೆಲೆಗೆ ತೆರಳಿ ಗೊರಕೆ ಹೊಡೆಯುತ್ತಾ ನಿದ್ರೆಗೆ ಜಾರಿದರು. ಅದನ್ನು ಖಾತ್ರಿಪಡಿಸಿಕೊಂಡ ವಿಶಿಷ್ಟ ತಳಿಯ ಹಂದಿಯೊಂದು ತಾನಿದ್ದ ಜಾಗದಿಂದಲೇ ಸಿಂಹನನ್ನು ಪಿಸುದನಿಯಲ್ಲಿ ಕರೆಯಿತು. ''ಏನು?'' ಎಂಬಂತೆ ಸಿಂಹ ಮುಖವನ್ನು ಪ್ರಶ್ನಾರ್ಥಕ ಚಿಹ್ನೆಯಾಗಿಸಿಕೊಂಡಾಗ ಹಂದಿಯು, ''ಎಷ್ಟೆಂದರೂ ನೀನು ಮೃಗರಾಜ ನಲ್ಲವೇ? ನಿನ್ನಲ್ಲಿ ಅಹವಾಲು ಹೇಳಿಕೊಳ್ಳುವುದಿದೆ'' ಎಂದಿತು. ಅದಕ್ಕೆ ಸಿಂಹವು ''ಅಯ್ಯೋ ನಿನ್ನಜ್ಜಿ... ಮೃಗರಾಜ ಅನ್ನೋದೆಲ್ಲಾ ನಾನು ಕಾಡಿನಲ್ಲಿ ಸ್ವೇಚ್ಛೆಯಿಂದ ತಿರುಗಾಡಿಕೊಂಡಿರುವಾಗ ಮಾತ್ರ; ನನ್ನಂಥ ಬಲಶಾಲಿಯನ್ನೇ ತಂದು ಇಲ್ಲಿ ಪಂಜರದಲ್ಲಿ ಕೂಡಿಹಾಕಿದ್ದಾರೆ, ನಾನೆಲ್ಲಿಯ ಮೃಗರಾಜ?!'' ಎಂದು ಅಲವತ್ತುಕೊಂಡಿತು.

ಆಗ ಹಂದಿಯು, ''ಹಾಗೆನ್ನಬೇಡಣ್ಣಾ... ಸಿಂಹ ಕಾಡಲಿದ್ರೂ ಮೃಗರಾಜನೇ, ಬೋನಲ್ಲಿದ್ರೂ ಮೃಗರಾಜನೇ'' ಎಂದು ಬೆಣ್ಣೆ ಹಚ್ಚಿದ್ದಾಗ ಕೊಂಚ ಸಮಾಧಾನಗೊಂಡ ಸಿಂಹ, ''ಆಯ್ತು, ಅದೇನು ಹೇಳು ನಿನ್ನ ಪ್ರಾಬ್ಲಂ?'' ಎಂದು ಕೇಳಿತು. ಆಗ ಹಂದಿಯು ಗೊಳೋ ಎಂದು ಅಳುತ್ತಾ,

''ನೋಡಣ್ಣಾ, ಈ ಮನುಷ್ಯರೆಲ್ಲಾ ಒಬ್ಬರು ಮತ್ತೊಬ್ಬರನ್ನ ಹಂಗಿಸುವಾಗ 'ಹಂದಿ' ಅಂತ ಕರೀತಾರೆ; ಅದನ್ನ ನಾವು ಹೇಗೋ ಸಹಿಸ್ಕೋಬಹುದು. ಆದರೆ, ತಮ್ಮ ಮಾತಿನ ನಡುವೆಯೋ ಅಥವಾ ಪತ್ರದಲ್ಲೋ, 'ಹಂದಿಗಳೊಂದಿಗೆ ಎಂದೂ ಕುಸ್ತಿಯಾಡಬೇಡಿ; ಅದರಿಂದ ನೀವು ಕೊಳಕಾಗುತ್ತೀರಿ. ಹಂದಿಯೂ ಅದನ್ನೇ ಇಷ್ಟಪಡುತ್ತೆ' ಅಂತ ಬುದ್ಧಿವಾದ ಹೇಳ್ತಾರಲ್ಲಣ್ಣಾ ಈ ಮನುಷ್ಯರು? ತಮ್ಮ ಜಗಳದ ನಡುವೆ ಅವರು ನಮ್ಮಂಥ ಹಂದಿಗಳನ್ಯಾಕೆ ಎಳೆಯಬೇಕಣ್ಣಾ? ಶತಮಾನಗಳಿಂದಲೂ ಈ ಅವಮಾನ ಸಹಿಸಿ ಸಹಿಸಿ ಸಾಕಾಗಿಹೋಗಿದೆ'' ಎನ್ನುತ್ತಾ ಕೊಚ್ಚೆಯಲ್ಲಿ ಬಿದ್ದು ಹೊರಳಾಡತೊಡಗಿತು.

ಪಕ್ಕದ ಬೋನಿನಲ್ಲಿ ಇದ್ದುಕೊಂಡೇ ಇದೆಲ್ಲವನ್ನೂ ಕೇಳಿಸಿಕೊಂಡ ವಿದೇಶಿ ತಳಿಯ ನಾಯಿಯೊಂದು, ''ಹಂದಿ ಹೇಳ್ತಿರೋದು ನಿಜ ಸಿಂಹಣ್ಣಾ, ನಾವು ನಾಯಿಗಳು ಎಷ್ಟು ನಿಯತ್ತಿಂದ ಸೇವೆ ಮಾಡಿದ್ರೂ ಈ ಮನುಷ್ಯರಿಗೆ ತೃಪ್ತಿನೇ ಇಲ್ಲ. ಯಾರಾದ್ರೂ ತಮ್ಮ ವಿರುದ್ಧ ಆಪಾದನೆ ಮಾಡಿದ್ರೆ, ಅಥವಾ ನಿರಂತರವಾಗಿ ಟೀಕಿಸ್ತಾ ಇದ್ರೆ, ಮತ್ತೊಬ್ಬರು, 'ಅಯ್ಯೋ ಬೊಗಳಿಕೊಳ್ಳಲಿ ಬಿಡ್ರೀ; ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತಾ?' ಅಂತ ಗೇಲಿಮಾಡಿ, ಕಾಲಾನುಕಾಲಕ್ಕೆ ಎಚ್ಚರಿಸುವ ನಮ್ಮ ಬೊಗಳುವಿಕೆಯನ್ನೇ 'ಅಂಡರ್ ಎಸ್ಟಿಮೇಟ್' ಮಾಡ್ತಾರಣ್ಣಾ...'' ಎನ್ನುತ್ತಾ ಮುಗಿಲಿನ ಕಡೆಗೆ ಮುಖಮಾಡಿ ಊಳಿಡತೊಡಗಿತು.

ಮೃಗಾಲಯದ ಸದಸ್ಯನಲ್ಲದಿದ್ದರೂ ಕಾಂಪೌಂಡ್ ಮೇಲೆ ಕೂತಿದ್ದ ಗೋಸುಂಬೆಯೊಂದು ಆಗ ಮುಸಿಮುಸಿ ಅಳತೊಡಗಿತು. ಸಿಂಹ ಅತ್ತ ಕಡೆ ತಿರುಗಿ, ''ನಿಂದೇನು ರೋಗ?'' ಎನ್ನುವಂತೆ ಮುಖಮಾಡಿದಾಗ ಗೋಸುಂಬೆ ಮಾತಿಗಿಳಿದು, ''ಸಿಂಹಣ್ಣಾ, ಈ ಬಿಳೀ ಟೋಪಿಯ ಪುಢಾರಿಗಳು ನಿನ್ನೆ ಒಂದು ಮಾತಾಡಿ, ಇವತ್ತೊಂದು ಮಾತಾಡಿದ್ರೆ ಅಥವಾ 'ನಾನು ಹಾಗೆ ಮಾತಾಡೇ ಇಲ್ಲ, ಮೀಡಿಯಾದವ್ರು ತಿರುಚಿದ್ದಾರೆ' ಅಂತಂದ್ರೆ, ಜನರು, 'ನೋಡ್ರೀ ಈ ಪುಢಾರಿನಾ, ಗೋಸುಂಬೆ ಥರ ಹೇಗೆ ಬಣ್ಣ ಬದಲಿಸ್ತಾನೆ' ಅಂತ ಗೇಲಿಮಾಡ್ತಾರಣ್ಣಾ. ನಾವು ಗೋಸುಂಬೆಗಳು ಶತ್ರುಗಳಿಂದ ನಮ್ಮ ಜೀವ ಉಳಿಸಿಕೊಳ್ಳೋಕೆ ಒಮ್ಮೊಮ್ಮೆ ಹೀಗೆ ಬಣ್ಣ ಬದಲಿಸ್ತೀವಿ; ಹಾಗಂತ, ಈ ಜನರು ಪುಢಾರಿಗಳಿಗೆ ನಮ್ಮನ್ನು ಹೋಲಿಸೋದು ಸರಿಯೇನಣ್ಣಾ?'' ಎಂದು ಕಾಂಪೌಂಡಿಗೆ ಹಣೆಹಣೆ ಚಚ್ಚಿಕೊಂಡಿತು! ಈ ವರಾತ ಕೇಳಿಸಿಕೊಂಡು ಅಲ್ಲಿಗೆ 'ಟಣ್ಣನೆ' ಜಿಗಿದ ಮಂಗವೊಂದು ಗೋಸುಂಬೆಯ ತಲೆಗೆ ಮೊಟಕಿ, ''ಲೇಯ್ ತೆಪರಾ, ಬಿಳಿಬಟ್ಟೆ-ಬಿಳಿಟೋಪಿಯ ಕೆಲ ಪುಢಾರಿಗಳು ಈ ಪಕ್ಷದಿಂದ ಆ ಪಕ್ಷಕ್ಕೆ, ಆ ಪಕ್ಷದಿಂದ ಈ ಪಕ್ಷಕ್ಕೆ ಹಾರಿದಾಗೆಲ್ಲಾ, 'ನೋಡ್ರೀ, ಒಂದು ಪಕ್ಷದಲ್ಲಿ ನಿಲ್ಲದೆ, ಹೆಂಗೆ ಮಂಗನ ಹಾಗೆ ಜಂಪ್ ಮಾಡ್ತಾನೆ ಇಲ್ತಾರೆ' ಅಂತ ಜನ ಆಡಿಕೊಳ್ತಾರೆ. ಮನುಷ್ಯರಲ್ಲಿ ಇವೆಲ್ಲಾ ಮಾಮೂಲು, ನಮ್ಮಂಥ ಪ್ರಾಣಿಗಳು ಅದನ್ನೆಲ್ಲಾ ತಲೆಗೆ ಹಚ್ಕೋಬಾರ್ದು'' ಅಂತ ಹೇಳಿ ಅಲ್ಲಿಂದ ಮತ್ತೊಂದೆಡೆಗೆ ಜಿಗಿಯಿತು. ಪಂಚಾಯ್ತಿ ಮುಗಿಯಿತು ಎಂಬ ಗ್ರಹಿಕೆಯಲ್ಲಿ ಸಿಂಹವೂ ಪಂಜರದ ಮೂಲೆಗೆ ತೆರಳಿ ಪಾಚಿಕೊಂಡಿತು!!

ಪ್ರತ್ಯೇಕ ಧರ್ಮ ಕೇಳುತ್ತೇವೆ ಎನ್ನುವುದು ಬಸವ ರಾಜಕಾರಣ!

ಬಸವ ಮಂಟಪ
ರವಿ ಹಂಜ್
vveditoped@gmail.com

ಪ್ರೊ.ಎಂ.ಎಂ. ಕಲಬುರ್ಗಿಯವರು ಆಕರವಾಗಿ ಉಲ್ಲೇಖಿಸಿರುವ 'ನಾಥ' ಎನ್ನುವ, ಮುಕ್ತಿಮುನಿ ಎನ್ನುವ ವ್ಯಕ್ತಿಯ ಚಿತ್ರಣ ಚೆನ್ನಬಸವ ಪುರಾಣದ 62ನೆಯ ಸಂಧಿಯಲ್ಲಿ ಪುಟ 435ರಿಂದ 437ರವರೆಗೆ ಬರುವ ಕಾವ್ಯಗಳಲ್ಲಿ ವರ್ಣಿಸಲಾಗಿದೆ. ಅದರ ಸಂಪೂರ್ಣ ನಡುಗನ್ನಡ ಪಾಠ ಹೀಗಿದೆ:

36. ಅಕ್ಕ ನಾಗಾಂಬಿಕೆಯು ಸಹವಾಗಿ ನಾವಲ್ಲಿ ಮಿಕ್ಕ ಶರಣರನಿರದೆ ನಿರವಯವನ್ನೈದಿಸಿ ಬಳಿಕ್ಕಾವು ನಿರವಯವನ್ನೈದುವೆವು ಸಿದ್ಧ ರಾಮೇಶ ನೀಂ ಕೇಳ್ವುದಿನ್ನು ಲಕ್ಕದಿಂ ಮೇಲೆ ತೊಂಬತ್ತಾರು ಸಾವಿರದ ಲೆಕ್ಕದಿಂ ಮಿಗಿಲಾದ ಜಂಗಮಂ ಚರಿಸುವೊಡೆ ದಿಕ್ಕುದಿಕ್ಕಿಗೆ ಪೋಪರುಳಿದ ಚರಪತಿಗಳೇ ಕಲ್ಯಾಣಕ್ಕೆ ತರುವರು.

37. ಬಂದನಿಬರತಿಗೋಪ್ಯದಿಂದಿರುತೆ ರುದ್ರಮುನಿ ತಂದೆ ತನ್ನಯ ಶಿಷ್ಯ ಮುಕ್ತಿಮುನಿಯೊಡನೆ ನೀ ನಿಂದ್ಯೆದಿ ಸಕಲದೇಶಂಗಳಂ ಚರಿಸುತುಂ ದುಷ್ಟಪರವಾದಿಗಳನು ಕೊಂದು ಶರಣರ ಪೊರೆವುದೆಂದುಸಿರಿ ಕಳುಹಲಾನಂದದಿಂದಖಿಳದೇಶಂಗಳಂ ಚರಿಸುತಾ ನಿಂದು ಶ್ರೀಗಿರಿಯ ಸಿಂಹಾಸನದ ಸಕಲ ಸದ್ಭಕ್ತರಂ ಪಾಲಿಸುವನು.

38. ಇರುತಲೈವತ್ತಾರು ದೇಶಕ್ಕೆ ತಾವು ಸದ್ವರಗಣಾಚಾರಿಗಳ ಕಳುಹಿ ತಮ್ಮಾಜ್ಞೆಯಿಂದಿರದೆ ಮಾರಿದರ ಕೈಯಿಂದಲಪರಾಧಕಾಣ್ಕೆಗಳ ತಾಂ ತರಿಸಿಕೊಳುತೆ ಪರವಾದಿಗಳನಿರದೆ ಸಂಹರಿಸುತಾಗಲತಿ ಹರುಪದಿಂದಿರಲತ್ತ ಮಲೆರಾಜ್ಯದೊಳ್ ದುರುಳ ದೊರೆ ಜೈನರೇ ಪೆರ್ಚಿ ಶಿವಮತವ ಜರೆದು ವೀರೇಶನಂ ಕಿತ್ತು ಬಿಸುಡೆ.

39. ಈ ವಾರ್ತೆಯಂ ಕೇಳ್ದು ಬಳಿಕಲಾ ಮುಕ್ತಿಮುನಿ ದೇವರಾಜಾತಭಿಕ್ಷಾವರ್ತಿಯೆಂದೆಂಬ ದೇವರ್ಗೆ ಪಟ್ಟಮಂ ಕಟ್ಟಿ ಕಾಣ್ಕೆಯನ್ನಿತ್ತು ತನ್ನ ಪರಶಿಷ್ಯನಾದ ಕೋವಿದ ದಿಗಂಬರ ಸುಮುಕ್ತಿ ಮುನಿಯೆಂದೆಂಬ ದೇವರಂ ಕರೆದು ನೀನೀಗ ಮಲೆರಾಜ್ಯದೊಳ್ ತೀವಿರ್ದ ಪರವಾದಿಗಳನಿರದೆ ಸಂಹರಿಸು ಹೋಗೆಂದು ಪೇಳ್ದು ತಾವು.

40. ಮಲ್ಲಿಕಾರ್ಜುನಲಿಂಗದಲ್ಲಿ ನಿರವಯವಾಗೆ ನಿಲ್ಲದೆ ದಿಗಂಬರ ಸುಮುಕ್ತಿಮುನಿಚರಪತಿಗಳಲ್ಲಿ ಕೆಲಬರ್, ಸಹಿತೆ ಮಲದೇಶಕ್ಕೈತಂದು ಖಾಂಡೆಯದಿ ಬಂದು ನಿಂದು ಖುಲ್ಲ ಪರವಾದಿ ಜೈನರನಿರದೆ ಸಂಹರಿಸಿ ಹಲ್ಲುಗಳ ಕಳೆದು ಮಣುವಿನ ಮೂರು ಖಂಡುಗವನಲ್ಲಿ ಕಣಜಂ ಕಟ್ಟಿ ತುಂಬಿಸುವರೆಲೆ ಸಿದ್ಧರಾಮೇಶ ಕೇಳೆಂದನು.

41. ಬಳಿಕಲ್ಲಿ ವೀರೇಶನಂ ಕಿತ್ತು ಜೈನರಾ ಹೊಳೆಯಲ್ಲಿ ಹಾಯ್ಕಿರಲ್ ತೆಗೆದು ಬಾಳೆಯದೊಂದು ಎಲೆಯದಂಡಿಗೆಯ ಮೇಲೊಲಿದು ಬಿಜಯಂಗೆಯ್ಸಿ ತಂದಾಗ ಹೊನ್ನೂರಿನ ಬಳಿಯಲ್ಲಿ ಗುಡಿಯ ಕಟ್ಟಿಸಿ ಪ್ರತಿಷ್ಠಿಸಿ ತಾವು ನೆಲೆಯಾಗಿ ನಿಂದು ದುರ್ಜನರ ಸಂಹರಿಸುವೊಡೆ ಸ್ಥಳಮಿದೀಗೆಂದು ಬಾಳೆಯಹಳ್ಳಿಯೆಂಬ ಪುರಮಂ ಬೇಗ ಕಟ್ಟಿಸುವರು.

42. ಹರುಷದಿಂದಲ್ಲಿ ಸಿಂಹಾಸನಾಸೀನನಾಗಿರುತಾ ದಿಗಂಬರ ಸುಮುಕ್ತಿನಾಥನಾ ಚರಪತಿಗಳಲ್ಲೋರ್ವ ಯೋಗ್ಯರು ನೋಡಿ ಪಟ್ಟವಗಟ್ಟಿ ಬಳಕವರೊಳು ಪರವಾದಿಗಳನಿರದೆ ಸಂಹರಿಸುವುದು ತಮ್ಮ ಶರಣರು ಪಾಲಿಸುವುದೆಂದುಸುರಿ ತಾವಾಗ ಪರಮ ಶಿವಯೋಗದಿಂ ನಿಜಸಮಾಧಿಯೊಳಿರ್ಪರೆಲೆ ರಾಮ ಕೇಳೆಂದನು.

ಇದರ ಗದ್ಯಾನುವಾದ ಹೀಗಿದೆ:

36. ಅಕ್ಕ ನಾಗಲಾಂಬಿಕೆಯೊಡನೆ ಮಿಕ್ಕ ಶರಣರನ್ನು ನಾವು ಬಯಲಾಗಿಸಿ ನಾವೂ ಬಯಲಾಗುವೆವು. ಸಿದ್ಧರಾಮೇಶ್ವರ ನೀನು ಕೇಳು, ಲಕ್ಷ ತೊಂಬತ್ತಾರು ಸಾವಿರ ಲೆಕ್ಕಕ್ಕೂ ಅಧಿಕವಾಗಿ ಜಂಗಮರು ಚದುರಿಹೋಗುವರು. ಉಳಿದವರು ಕಲ್ಯಾಣಕ್ಕೆ ಬರುವರು.

37. ಬಂದ ಅಷ್ಟು ಜನರೂ ಅತಿ ಗೋಪ್ಯವಾಗಿರುತ್ತ ರುದ್ರ ಮುನಿತಂದೆಯು ತನ್ನ ಶಿಷ್ಯ ಮುಕ್ತಿಮುನಿಯೊಡನೆ ಹೀಗೆನ್ನುವನು, ನೀನು ಈ ದಿನ ಹೊರಟು ಎಲ್ಲ ದೇಶಗಳನ್ನೂ ಸಂಚಾರ ಮಾಡುತ್ತ ದುಷ್ಟರಾದ ಅನ್ಯಮತೀಯರನ್ನು ಕೊಂದು ಶರಣರನ್ನು ಕಾಪಾಡು ಎಂದು ಹೇಳಿ ಕಳಿಸಿಕೊಡಲು ಆವನು ಆನಂದದಿಂದ ಅಖಿಲದೇಶಗಳ ಸುತ್ತುತ್ತಾ ಶ್ರೀಗಿರಿಯ ಸಿಂಹಾಸನದಲ್ಲಿ ನಿಂತು ಸಕಲ ಸದ್ಭಕ್ತರನ್ನೂ ಕಾಪಾಡುವನು.

38. ಹೀಗಿರುತ್ತ ಐವತ್ತಾರು ದೇಶಕ್ಕೆ ತಾವು ಶ್ರೇಷ್ಠಗಣಾಚಾರಿಗಳನ್ನು ಕಳಿಸಿ ತಮ್ಮಾಜ್ಞೆಯನ್ನು ಮಾರಿದವರ ಕೈಯಿಂದ ತಪ್ಪು ಕಾಣಿಕೆಗಳನ್ನು ತರಿಸಿಕೊಳ್ಳುತ್ತಾ ಅನ್ಯಮತೀಯರನ್ನು ಸಂಹರಿಸುತ್ತ ಆಗ ಬಹಳ ಸಂತೋಷದಿಂದ ಇರಲು ಇತ್ತಕಡೆ ಮಲೆನಾಡಿನಲ್ಲಿ ದುಷ್ಟ ಜೈನದೊರೆಗಳೇ ಅಧಿಕರಾಗಿ ಶಿವಮತವನ್ನು ಹೀಯಾಳಿಸಿ ವೀರೇಶನನ್ನು ಕಿತ್ತು ಬಿಸಾಡಿದರು

39. ಈ ಸುದ್ದಿಯನ್ನು ಕೇಳಿ ಅನಂತರ ಆ ಮುಕ್ತಿಮುನಿದೇವರು ಅಜಾತ ಭಿಕ್ಷಾವರ್ತಿ ಎಂಬ ದೇವರಿಗೆ ಪಟ್ಟವನ್ನು ಕಟ್ಟಿ ಕಾಣಿಕೆಯನ್ನಿತ್ತು ತನ್ನ ಶ್ರೇಷ್ಠ ಶಿಷ್ಯನಾದ ಕೋವಿದ ದಿಗಂಬರ ಸುಮುಕ್ತಿ ಮುನಿಯೆಂಬುವವನ್ನು ಕರೆದು ನೀನೀಗ ಮಲೆನಾಡಿನಲ್ಲಿ ತುಂಬಿರುವ ಅನ್ಯಮತೀಯರನ್ನು ಕೂಡಲೆ ಸಂಹರಿಸು ಹೋಗು ಎಂದು ಹೇಳಿ ತಾವು

40. ಮಲ್ಲಿಕಾರ್ಜುನಲಿಂಗದಲ್ಲಿ ಬಯಲಾಗಲು ದಿಗಂಬರ ಸುಮುಕ್ತಿಮುನಿಯು ಜಂಗಮರು ಕೆಲವರೊಡಗೂಡಿ ಮಲೆನಾಡಿಗೆ ಬಂದು ಖಾಂಡ್ಯವೆಂಬಲ್ಲಿ ನಿಂತು ಕ್ಷುಲ್ಲಕ ಅನ್ಯಮತೀಯರಾದ ಜೈನರನ್ನು ನಾಶಮಾಡಿ ಅವರ ಹಲ್ಲುಗಳನ್ನು ಕಿತ್ತು ಬಂದು ಮಣದ ಮೇಲೆ ಮೂರು ಖಂಡುಗದಷ್ಟು ತೂಕವಿದ್ದ ಕಣಜವನ್ನು ಕಟ್ಟಿ ತುಂಬಿಸುವರು, ಎಲೆ ಸಿದ್ಧರಾಮೇಶ ಕೇಳು ಎಂದನು.

41. ಆನಂತರ ಅಲ್ಲಿ ವೀರೇಶನನ್ನು ಕಿತ್ತು ಜೈನರು ಹೊಳೆಯಲಿ ಹಾಕಿರಲು ಅದನ್ನು ತೆಗೆದು ಬಾಳೆಎಲೆಯ ಪಲ್ಲಕ್ಕಿಯಲ್ಲಿ ಪ್ರೀತಿಯಿಂದ ಕರೆತಂದು ಹೊನ್ನೂರಿನ ಬಳಿ ಗುಡಿ ಕಟ್ಟಿಸಿ, ಪ್ರತಿಷ್ಠಾಪನೆ ಮಾಡುವರು. ತಾವು ಅಲ್ಲೇ ನೆಲೆನಿಂತು ದುಷ್ಟರನ್ನು ಸಂಹರಿಸಲು ಇದೀಗ ಸರಿಯಾದ ಸ್ಥಳವೆಂದು ಆಲೋಚಿಸಿ ಬಾಳೆಯಹಳ್ಳಿ ಎಂಬ ಊರನ್ನು ಬೇಗನೆ ಕಟ್ಟಿಸುವರು.

42. ಸಂತೋಷದಿಂದ ಅಲ್ಲಿ ಸಿಂಹಾಸನಾರೂಢರಾಗಿರುತ್ತ ಆ ದಿಗಂಬರ ಸುಮುಕ್ತಿ ಮುನಿನಾಥನು ಆ ಜಂಗಮರಲ್ಲಿ ಒಬ್ಬ ಯೋಗ್ಯರನ್ನು ನೋಡಿ ಅವರಿಗೆ ಪಟ್ಟವನ್ನು ಕಟ್ಟಿ ಆನಂತರ ಅವರೊಡನೆ ಅನ್ಯಮತೀಯರನ್ನು ನಾಶಮಾಡಿ ನಮ್ಮ ಶರಣರನ್ನು ಕಾಪಾಡಿ ಎಂದು ಹೇಳಿ ತಾವು ಆಗ ಪರಮಶಿವಯೋಗದಿಂದ ತಮ್ಮ ಸಮಾಧಿಯಲ್ಲಿರುವರು, ಎಲೆ ಸಿದ್ಧರಾಮ ಕೇಳು ಎಂದನು.

ಹೀಗೆ ಕಾವ್ಯವು ಸಾಗುತ್ತಾ ನಂತರದ ಶ್ಲೋಕದಲ್ಲಿ, ''... ಶ್ರೇಷ್ಠನಾದ ಸುಮುಕ್ತಿಮುನಿದೇವರ ಆಜ್ಞೆಯಂತೆ ಸುಕುಮಾರ ಚೆನ್ನಬಸವೇಶ್ವರನು ಶರಣ ಸಮೂಹವನ್ನು ಕಾಪಾಡುತ್ತಾ ಅನ್ಯಮತೀಯರನ್ನು ಸಂಹರಿಸುತ್ತ ಇರಲು ಇತ್ತ ಕಲ್ಯಾಣದಲ್ಲಿ.....'' ಎಂದು ವರ್ತಮಾನಕ್ಕೆ ಬರುವನು. ಇಲ್ಲಿ ಚೆನ್ನಬಸವಣ್ಣನು ಆರಂಭದಲ್ಲಿ ತನ್ನ ವರ್ತಮಾನದ ಕಥೆಯನ್ನು ಹೇಳುತ್ತಾ ಪುರಾತನರು ತಮಗೊದಗಿದ್ದ ಇಂಥ ವಿಪ್ಲವ ಸನ್ನಿವೇಶವನ್ನು ಹೇಗೆ ನಿಭಾಯಿಸಿದ್ದರು ಎಂದು ಪುರಾತನರ ಸ್ಫೂರ್ತಿದಾಯಕ ಕಥೆಯನ್ನು ವಿವರಿಸುತ್ತಾನೆ. ಅಂದರೆ ಪುರಾತನರು ಹಾಗೆ ಮಾಡಿದ ಸಿದ್ಧ ನಮೂನೆ ಯಾ ಸ್ಫೂರ್ತಿ ನಮಗೆ ಇರುವ ಕಾರಣ ನಾವು ಅದನ್ನೇ ಇಂದಿನ ವಿಪ್ಲವ ಕಾಲದಲ್ಲಿ ಅನುಸರಿಸಬೇಕು ಎಂಬ ಉದ್ದೇಶದಿಂದ ಈ ಕಥೆಯನ್ನು ಸಿದ್ಧರಾಮನಿಗೆ ಬೋಧನೆಯ ರೂಪವಾಗಿ ಹೇಳಿದ್ದಾನೆ. ಚೆನ್ನಬಸವ ಪುರಾಣದ ಈ ಮೇಲಿನ ಪುಟಗಳಲ್ಲಿ ವರ್ತಮಾನ-ಪುರಾತನ ಬೆಸೆಯುವ ಪುರಾಣದ ಶೈಲಿ ಸುಸ್ಪಷ್ಟವಾಗಿದೆ. ಆರಂಭದಲ್ಲಿ ಹೇಗೆ ತನ್ನ



ವರ್ತಮಾನದ ''ಅಕ್ಕ ನಾಗಲಾಂಬಿಕೆಯೊಡನೆ ಮಿಕ್ಕ...'' ಎನ್ನುತ್ತ ಸುಮುಕ್ತಿಮುನಿಯ ಪುರಾತನ ಕಥೆಗೆ ಅನುವಾದನೋ ಹಾಗೆಯೇ ಕಥೆಯ ಅಂತ್ಯದ ನಂತರ ''ಇತ್ತ ಕಲ್ಯಾಣದಲ್ಲಿ...'' ಎನ್ನುತ್ತಾ ವರ್ತಮಾನಕ್ಕೆ ಬರುತ್ತಾನೆ. ಹೀಗೆ ವರ್ತಮಾನಕ್ಕೂ ಪುರಾಣ ಕಥನಕ್ಕೂ ಕಥಾ ಸಂಯೋಜನೆಯನ್ನು ಮಾಡುವ ಕ್ರಿಯಾಶೀಲತೆಯೇ ಇಂದಿನ ದೃಶ್ಯ ಮಾಧ್ಯಮದಲ್ಲಿ 'ಫ್ಲ್ಯಾಷ್ ಬ್ಯಾಕ್' ತಂತ್ರವಾಗಿದೆ.

ಕಲ್ಯಾಣ ಕ್ರಾಂತಿಯ ನಂತರ ಚೆನ್ನಬಸವಣ್ಣ ನಾಗಲಾಂಬಿಕೆ ಮತ್ತಿತರರ ಜತೆ ಕಲ್ಯಾಣದಿಂದ ಬೇರೆಲ್ಲಿಗೋ ಚರಿಸಿರುವ ವರ್ತಮಾನ, ಸುಮುಕ್ತಿಮುನಿಯ ಪುರಾತನ ಎರಡೂ ಹೇಗೆ ಈ ಕಥಾಶೈಲಿಯಲ್ಲಿ ತಳುಕು ಹಾಕಿಕೊಂಡಿದೆ ಎಂಬುದು ಗಮನಿಸಬೇಕಾದ ಸಂಗತಿ. ಇಡೀ ಚೆನ್ನಬಸವ ಪುರಾಣವು ಇದೇ ಶೈಲಿಯಲ್ಲಿ ಸಾಗುತ್ತದೆ.

ಇರಲಿ, ಈಗ ಘನ ಸಂಶೋಧಕ ಪ್ರೊಫೆಸರರು ಹೇಳಿದ ಮುಕ್ತಿಮುನಿ'ನಾಥ' ಎನ್ನುವ ವ್ಯಕ್ತಿ ಮೇಲಿನ ಪುರಾಣ ಪ್ರಸಂಗದಲ್ಲಿ ಎಲ್ಲಿದ್ದಾನೆ?!

ಕವಿಯು ಪದ್ಯ 39ರಲ್ಲಿ ಮುಕ್ತಿಮುನಿಯನ್ನು ಮುಕ್ತಿಮುನಿ 'ದೇವರಾಜ' ಎಂದು, ಪದ್ಯ 40ರಲ್ಲಿ ಮುಕ್ತಿಮುನಿ 'ಚರಪತಿ' ಎಂದು, ಪದ್ಯ 42ರಲ್ಲಿ ಸುಮುಕ್ತಿಮುನಿ'ನಾಥ' ಎಂದು ಸಂಬೋಧಿಸಿದ್ದಾನೆ. ಇಲ್ಲಿ ಸುಮುಕ್ತಿಮುನಿಗೆ ದೇವ, ದೇವರು, ದೇವರಾಜ ಎಂಬ ಗೌರವಸೂಚಕಗಳನ್ನು ಸೇರಿಸಿದಂತೆಯೇ 'ನಾಥ' ಎಂದು ಬಳಸಿರುವುದು ಅತ್ಯಂತ ಸುಸ್ಪಷ್ಟವಾಗಿದೆ.

ಇಂಥ ಸುಸ್ಪಷ್ಟ ಗೌರವ ಸೂಚಕವಾಗಿ ಕೇವಲ ಒಮ್ಮೆ ಮಾತ್ರ ಬಳಸಿರುವ 'ನಾಥ' ಪದವನ್ನು ಹಿಡಿದು ''ನಾಥಪಂಥದ ಕೇಂದ್ರವಾಗಿ ಸುಮುಕ್ತಿನಾಥರು ಇದರ ಪ್ರವರ್ತಕರೆಂದು ಚೆನ್ನಬಸವ ಪುರಾಣವು ಹೇಳುತ್ತದೆ'' ಎಂದು 'ಷರಾ' ಬರೆದಿರುವುದು ಪ್ರೊ. ಕಲಬುರ್ಗಿಯವರ ಸಂಶೋಧನಾ ಚಾತುರ್ಯವಿರಲಿ ಅವರ ಕನಿಷ್ಠ ಬುದ್ಧಿಮತ್ತೆಯನ್ನೇ ಅತ್ಯಂತ ಪ್ರಶ್ನಾರ್ಹವಾಗಿಸುತ್ತದೆ! ಅಥವಾ ಇದು ಅವರು ಉದ್ದೇಶಪೂರ್ವಕವಾಗಿ ತಮ್ಮ ವೃತ್ತಿಗೆ ಬಗೆದ ಮಹಾದ್ರೋಹ ಎನಿಸುತ್ತದೆ.

ಇರಲಿ, ಈ ಪುರಾಣದ ಪ್ರಮುಖ ಅಂಶದ ಪ್ರಕಾರ ಅಲ್ಲಿ ಅದಾಗಲೇ ಇದ್ದ 'ವೀರೇಶ'ನನ್ನು ಅನ್ಯಮತೀಯ ಜನರು ಕಿತ್ತು ಬಿಸಾಡಿದ್ದಾರೆ. ನೀನು ಹೋಗಿ ಅದನ್ನು ಮರುಸ್ಥಾಪಿಸು ಎಂದ ಗುರುವಿನ ಆಜ್ಞೆಯಂತೆ ಸುಮುಕ್ತಿಮುನಿಯು ವೈರಿಗಳನ್ನು ಸದೆಬಡಿದು ಹೊಳೆಯಲ್ಲಿ ಮುಳುಗಿದ್ದ ವೀರೇಶನನ್ನು ಪುನರ್‌ಸ್ಥಾಪಿಸಿದನು ಎಂಬುದು ಇಲ್ಲಿನ ಕಥೆ. ಇಲ್ಲಿ ವೀರೇಶ ಎಂದರೆ 'ವೀರಸಿಂಹಾಸನ'. ವೀರಶೈವ ರಂಭಾಪುರಿ ಸಂಸ್ಥಾನವು ವೀರಸಿಂಹಾಸನ ಎಂದೇ ಗುರುತಿಸಲ್ಪಟ್ಟಿದೆ. ಇದರ ಈಗಿನ ಗುರುಗಳ ಹೆಸರು 'ವೀರ'ಸೋಮೇಶ್ವರ, ಅಂತೆಯೇ ಹಿಂದಿನ ಗುರುಗಳು 'ವೀರ'ಗಂಗಾಧರ! ಇಲ್ಲಿ ಪೀಠವನ್ನು ಪುನರ್ ಸ್ಥಾಪಿಸಿದ ಸುಮುಕ್ತಿಮುನಿಯು ಅಲ್ಲಿ ಬಾಳೆಹಳ್ಳಿ ಎಂಬ ಪಟ್ಟಣವನ್ನು ಕಟ್ಟುತ್ತಾನೆಯೇ ಹೊರತು ಯಾವುದೋ ಹೊಸ ಪೀಠವನ್ನಲ್ಲ ಎಂಬುದು ಈ ಪುರಾಣದ ಅಧ್ಯಾಯದಲ್ಲಿ ತಿಳಿದುಬರುವ ಅತಿ ಸಾಮಾನ್ಯ ಸಂಗತಿ.

ಭಾಗ-2

ಕೇವಲ ಓರ್ವ ಕುತೂಹಲಿಯಾದ ಅತಿ ಸಾಮಾನ್ಯ ಕನ್ನಡ ಭಾಷಾ ತಿಳಿವಳಿಕೆಯ ನನ್ನಂಥವನ ಓದಿಗೆ ಸರಳವಾಗಿ ದಕ್ಕಿದ ಈ ವಿರೂಪಾಕ್ಷ ಪಂಡಿತನ ನಡುಗನ್ನಡ ಕಾವ್ಯವು, ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಬಂಗಾರದ ಪದಕ ಪಡೆದು ''ಕವಿರಾಜಮಾರ್ಗದ ಪರಿಸರದಲ್ಲಿ ಕನ್ನಡ ಸಾಹಿತ್ಯ'' ಎಂಬ ಪ್ರಬಂಧಕ್ಕೆ ಡಾಕ್ಟರೇಟ್ ಪಡೆದು ಕನ್ನಡ ಪ್ರೊಫೆಸರರಾಗಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ನಾಡಿನ ಸಂಶೋಧನಾ ಪಿತಾಮಹ ಎನಿಸಿಕೊಂಡ ಪ್ರೊ. ಕಲಬುರ್ಗಿಯವರಿಗೆ ಏಕೆ ದಕ್ಕಲಿಲ್ಲ ಎಂಬುದು, ಅವರ ಕನ್ನಡ ವಿಶ್ವವಿದ್ಯಾಲಯದಲ್ಲಿ ನೂರು ಪಿಎಚ್‌ಡಿಗಳಿಗೆ ಸಂಶೋಧನಾ ತೌಲನಿಕ ಅಧ್ಯಯನದ ಸರಕಾಗಬಹುದು!

ಓರ್ವ ಸಂಶೋಧಕನಿಗೆ ಇರಬೇಕಾದ ತಟಸ್ಥ ನಿಲುವು, ಮಾನವಿಕ ನೆಲೆ, ಸಮಗ್ರ ಗ್ರಹಿಕೆ ಮತ್ತು ಸೂಕ್ಷ್ಮ ಅವಲೋಕನದಿಂದ ಸತ್ಯದ ಪರಂಪರೆಯನ್ನು ಎತ್ತಿಹಿಡಿಯುವುದಕ್ಕೆ ತರ್ಪಣ ಬಿಟ್ಟು ಪೂರ್ವಗ್ರಹಪೀಡಿತರಾಗಿ ಸ್ವಪಂಥಪ್ರೇಮ, ಪರಪಂಥ ದ್ವೇಷ, ವೈಯಕ್ತಿಕ ದ್ವೇಷ, ಸಿದ್ಧಾಂತ ಮೌಢ್ಯಕ್ಕೆ ಮಾದರಿ ಎನ್ನಿಸಬಹುದಾದ ಇಂಥ ಸಂಶೋಧಕರು ನಾಡಿನ 'ಸಂಶೋಧನೆಯ ಪಿತಾಮಹ' ಎನಿಸಿದ್ದು ಕನ್ನಡ ನಾಡಿನ ದುರಂತ!

ಇಂಥ ಅರಿಷಡ್ವರ್ಗಗಳ ವ್ಯಕ್ತಿರೂಪವು ಸೃಷ್ಟಿಸಿದ 'ವೀರಶೈವ ಬೇರೆ, ಲಿಂಗಾಯತ ಬೇರೆ' ಎನ್ನುವ ಕ್ಷುಲ್ಲಕ ಸುಳ್ಳಿಗೆ ಮರುಳಾಗಿ 'ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು' ಎನ್ನುತ್ತ 'ನಾವು ಹಿಂದೂ ಅಲ್ಲ, ವೀರಶೈವ ಅಲ್ಲ' ಎಂದು ಬೋಧಿಸುವುದು 21ನೇ ಶತಮಾನದ ಜಗತ್ತಿನ ಬಹುದೊಡ್ಡ ಜೋಕು! ಇಂಥ ದುರಂತ ಸಂಶೋಧನೆಗಳನ್ನು ಪ್ರಮುಖ ಆದರ್ಶ ಮಾಡಿಕೊಂಡು ಬಸವಣ್ಣನನ್ನು ಗೋಮಾತೆಯಂತೆ ಹಿಂಡಿ ಹಿಂಡಿ 'ದೂಧ್ ಸಾಗರ'ಗಳನ್ನೇ ಕಟ್ಟಿಕೊಂಡಿರುವ ಬಸವ ಸೆಂಟರ್, ಬಸವ ವೇ, ಬಸವ ಬ್ರಿಗೇಡ್, ಬಸವ ಅಸೋಸಿಯೇಷನ್, ಬಸವ ಫಿಲಾಸಫಿ, ಬಸವ ಬ್ರದರ್‌ಹುಡ್, ಬಸವ ಕಮಿಟಿ, ಬಸವ ಸರ್ವಿಸ್, ಬಸವ ಮೊರಾಲಿಟಿ, ಬಸವ ವುಮೆನ್, ಬಸವ ಮೆನ್, ಬಸವ ನ್ಯೂಟ್ರಲ್, ಬಸವ ರಿಲಿಜಿಯನ್, ಬಸವ ದಟ್, ಬಸವ ದಿಸ್ (ತೀವ್ರ ನಾಣ್ಯಗಳ ಸುರಿಮಳೆಯ ಸದ್ದನ್ನು ಊಹಿಸಿಕೊಳ್ಳಿ)... ಎಲ್ಲವೂ ಬಸವ ಆರ್ಥಿಕತೆ!

ಇನ್ನು, ನಾಡಿನ ಸಾಕ್ಷಿಪ್ರಜ್ಞೆ ಚಿಂತಕರಿಗೆ, ಅದರಲ್ಲೂ ರಾಜ್ಯದ ಓರ್ವ ಮುಖ್ಯಮಂತ್ರಿಗಳು ರಚಿಸಿದ್ದ ಲಿಂಗಾಯತ ಪ್ರತ್ಯೇಕ ಧರ್ಮ ಸಮಿತಿಗೆ ಇಂಥ ಸಂಶೋಧನೆಗಳೇ ಆಧಾರವಾಗಿ ಇದೇ ಸಂಶೋಧಕರು ಪ್ರಮುಖ ಸ್ತಂಭವಾಗಿದ್ದರು ಎಂದರೆ ಈ ಸಮಿತಿಯ ಸದಸ್ಯರ ವಿದ್ಯಾರ್ಹತೆ, ವೃತ್ತಿಪರತೆ, ನೈತಿಕತೆ, ಸತ್ಯಶೋಧನೆ ಎಲ್ಲವೂ ಏನೆನಿಸುತ್ತದೆ (ತೀವ್ರ ಡೊಳ್ಳು ಬಡಿತದ ಸದ್ದನ್ನು ಊಹಿಸಿಕೊಳ್ಳಿ)... ಎಲ್ಲವೂ ಬಸವ ಅವಕಾಶ!

ಇದೆಲ್ಲಕ್ಕೂ ಹೆಚ್ಚಾಗಿ ಈ ಸಂಶೋಧನಾ ಪಿತಾಮಹರ ಪರಂಪರೆಯ ಶಿಷ್ಯಪಡೆಯೇ ಸಾಸಿರಮಡಿಯಾಗಿ ಸರಕಾರಿ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರರಾಗಿ ಸರಕಾರಿ ಅನುದಾನ, ವೇತನ, ಕಚೇರಿ ಸೌಲಭ್ಯಗಳನ್ನು ಬಳಸಿಕೊಂಡು ಭಾರತೀಯ ಸಾಂಸ್ಕೃತಿಕ ಸಂಶೋಧನಾ ಪರಂಪರೆಗೆ ಎಲ್ಲಿಯೂ ಚಲಾವಣೆಯಿರದ ಕಮ್ಯುನಿಸ್ಟ್ ಬಣ್ಣ ಬಳಿದು ವಿದ್ಯಾರ್ಥಿ ಸಮೂಹವನ್ನು ಶಿಲಾಯುಗದತ್ತ ತೆಗೆದುಕೊಂಡು ಹೋಗಲು ದಾಪುಗಾಲಿಟ್ಟು ದೌಡಾಯಿಸುತ್ತಿರುವುದು (ತೀವ್ರ ತಮಟೆಯ ಬಡಿತದ ಸದ್ದನ್ನು ಊಹಿಸಿಕೊಳ್ಳಿ)... ಎಲ್ಲವೂ ಬಸವ ಸಮಾಜವಾದಿ ತತ್ವಜ್ಞಾನ!

ಒಂದು ಸುಭದ್ರ ಪರಂಪರೆಯನ್ನು ಅಳಿಸಿ ಇಂತಪ್ಪ ತೆಳುತೇಲು ಅಡಿಪಾಯದ ಮೇಲೆ ಪ್ರತ್ಯೇಕ ಧರ್ಮ ಕೇಳುತ್ತೇವೆ ಎನ್ನುವುದು (ನಾಣ್ಯ, ಡೊಳ್ಳು, ತಮಟೆಯ ಜತೆಗೆ ಕಹಳೆ, ಕೊಂಬು ತುತ್ತೂರಿಗಳ ಅತಿ ತೀವ್ರ ಸದ್ದನ್ನು ಒಟ್ಟೊಟ್ಟಿಗೆ ಊಹಿಸಿಕೊಳ್ಳಿ)... ಬಸವ ರಾಜಕಾರಣ!

ವಿ.ಸೂ: ಅಂದ ಹಾಗೆ, ಈ ಬರಹ ಅತ್ಯಂತ ತೀಕ್ಷ್ಣ ಎನ್ನಿಸಿದರೆ ಅದಕ್ಕೆ ಕಾರಣ ನಾನು ಮಾನ್ಯ ಸಂಶೋಧಕರ ಪುಸ್ತಕದಲ್ಲಿರುವ ದಸ್ತಕತ್ತಿನ ಶೈಲಿಯ ಕೇವಲ ಎರಡು ಪೈಸೆಯಷ್ಟನ್ನು ನನ್ನ ಬರಹದಲ್ಲಿ ಉದ್ದೇಶಪೂರ್ವಕವಾಗಿ ಅಳವಡಿಸಿಕೊಂಡಿದ್ದೇನಷ್ಟೇ. ಉಳಿದಂತೆ ನನ್ನದು ವೈಚಾರಿಕ ಸತ್ಯದ ಮಾನವಧರ್ಮದ ಹಿಂದೂ ಕಾಳಾಮುಖ ವೀರಶೈವ ಲಿಂಗಾಯತ ಬಸವನ ಬ್ರಹ್ಮಾಂಡ ಬೆಳಕು!

(ಲೇಖಕರು ಶಿಕಾಗೊ ನಿವಾಸಿ ಹಾಗೂ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:271

ಸಮಾಚಾರ ಸಣ್ಣದಲ್ಲ

ಕೇರಳ ನಟ ಸಿದ್ದಿಕ್‌ಗೆ ಸುಪ್ರೀಂ ಜಾಮೀನು

ದೆಹಲಿ: ಕೇರಳದ ಇಡೀ ಸಿನಿರಂಗವನ್ನೇ ತಳಮಟ್ಟ ಅಲುಗಾಡಿಸಿದ 'ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖಾ ವರದಿ'ಯ ಪರಿಣಾಮ ಹಾಗೂ ನಟಿಯೊಬ್ಬರಿಂದ ದೂರು ದಾಖಲಾದ ಹಿನ್ನೆಲೆ ಬಂಧನ ಭೀತಿಗೊಳಗಾಗಿದ್ದ ಹಿರಿಯ ನಟ, ಕಲಾವಿದರ 'ಅಮ್ಮ' ಸಂಘಟನೆಯ ಮಾಜಿ ಪ್ರಧಾನ ಕಾರ್ಯದರ್ಶಿ ಸಿದ್ದಿಕ್‌ಗೆ ಕಡೆಗೂ ಸುಪ್ರೀಂ ಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಸಿಕ್ಕಿದೆ. ಸದ್ಯ ಕೇರಳ ಪೊಲೀಸ್ ವಿಶೇಷ ತನಿಖಾ ತಂಡ ದಿಂದ ಬಂಧನಕ್ಕೊಳಗಾಗಬೇಕಿದ್ದ ಸಿದ್ದಿಕ್‌ಗೆ ತಕ್ಷಣಕ್ಕೆ ಪರಿಹಾರ ಸಿಕ್ಕಿದೆ. ಸಿದ್ದಿಕ್‌ಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ ಪೀಠ, ರಾಜ್ಯ ಸರಕಾರಕ್ಕೆ ಈ ಸಂಬಂಧ ನೋಟಿಸ್ ಜಾರಿಗೊಳಿಸಿದೆ.

ನೇಪಾಳದಲ್ಲಿ ಮಳೆ, ಪ್ರವಾಹ: 192 ಸಾವು

ಕಠ್ಮಂಡು: ಕಳೆದ 4-5 ದಿನಗಳಿಂದ ನೇಪಾಳದಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಪ್ರವಾಹ ಪರಿಸ್ಥಿತಿ ಎದುರಾಗಿದ್ದು, ಕಳೆದೆರಡು ದಶಕಗಳಲ್ಲೇ ಕಂಡು ಕೇಳರಿಯದಷ್ಟು ಹಾನಿ ಉಂಟಾಗಿದೆ. ಮಳೆ-ಪ್ರವಾಹ ಸಂಬಂಧಿತ ಅವಘಡಗಳಲ್ಲಿ ಈವರೆಗೆ 192 ಮಂದಿ ಸಾವಿಗೀಡಾಗಿದ್ದಾರೆ. ಇನ್ನೂ 31 ಜನರು ಕಾಣೆಯಾಗಿದ್ದಾರೆ. 200ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಭೀತಿ ಎದುರಾಗಿದೆ. 20 ಸಾವಿರ ಭದ್ರತಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದು, ಈವರೆಗೆ 4 ಸಾವಿರ ಜನರನ್ನು ರಕ್ಷಿಸಿ ಸುರಕ್ಷಿತ ಸ್ಥಳಗಳಿಗೆ ತಲುಪಿಸಲಾಗಿದೆ. ರಸ್ತೆಗಳಿಗೆ ಭಾರೀ ಹಾನಿಯಾಗಿದ್ದು, ನೇಪಾಳದ ಹಲವು ನಗರಗಳು ಸಂಪರ್ಕ ಕಳೆದುಕೊಂಡಿವೆ.

ಜಮ್ಮು-ಕಾಶ್ಮೀರ ಇಂದು 3ನೇ ಹಂತದ ಮತದಾನ

ಶ್ರೀನಗರ: ದೇಶ-ವಿದೇಶದಲ್ಲಿ ಭಾರೀ ಕುತೂಹಲ ಕೆರಳಿಸಿದ್ದ ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆ ಈಗ ಕಡೆಯ ಘಟ್ಟಕ್ಕೆ ಬಂದಿದೆ. 90 ಸದಸ್ಯ ಬಲದ ವಿಧಾನಸಭೆಗೆ 3 ಹಂತಗಳಲ್ಲಿ ಚುನಾವಣೆ ಹಮ್ಮಿಕೊಂಡ ಭಾರತ ಚುನಾವಣಾ ಆಯೋಗ, ಈವರೆಗೂ ಯಾವುದೇ ಅಡೆತಡೆ ಬಾರದಂತೆ ನೋಡಿಕೊಂಡಿದೆ. ಮೊದಲ ಹಂತದಲ್ಲಿ ಶೇ.62 ಮತ್ತು 2ನೇ ಹಂತದಲ್ಲಿ ಶೇ.57 ಮತದಾನವಾಗಿದೆ. 3ನೇ ಹಂತದಲ್ಲಿ 7 ಜಿಲ್ಲೆಗಳ ಒಟ್ಟು 40 ವಿಧಾನಸಭಾ(ಕಾಶ್ಮೀರ-16 ಮತ್ತು ಜಮ್ಮು-24) ಕ್ಷೇತ್ರಗಳಿಗೆ ಮಂಗಳವಾರ ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಮತದಾನವಾಗಲಿದೆ. 40 ಕ್ಷೇತ್ರಗಳಲ್ಲಿ ಒಟ್ಟು 39.18 ಲಕ್ಷ ಮತದಾರರಿದ್ದಾರೆ. ಬಹಿರಂಗ ಪ್ರಚಾರ ಭಾನುವಾರ ಸಂಜೆ ಕೊನೆಗೊಂಡಿದ್ದು, ಸೋಮವಾರ ಮನೆ ಮನೆ ಪ್ರಚಾರ ನಡೆದಿದೆ.

ಮಹಾರಾಷ್ಟ್ರದಲ್ಲಿ 4.2 ತೀವ್ರತೆ ಭೂಕಂಪ

ಅಮರಾವತಿ: ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯಲ್ಲಿ ಸೋಮವಾರ ಮಧ್ಯಾಹ್ನ ರಿಕ್ಟರ್ ಮಾಪಕದಲ್ಲಿ 4.2ರಷ್ಟು ತೀವ್ರತೆಯ ಭೂಕಂಪವಾಗಿದೆ. ಸದ್ಯ ಘಟನೆಯಲ್ಲಿ ಸಾವು-ನೋವು ವರದಿಯಾಗಿಲ್ಲ. ರಾಷ್ಟ್ರೀಯ ಭೂಕಂಪ ಮಾಪನ ಕೇಂದ್ರ, ಭೂಮಿ ಕಂಪಿಸಿರುವುದನ್ನು ಖಚಿತಪಡಿಸಿದೆ. ಚಿಕಲ್ದಾರಾ, ಕಟ್ಕುಂಭ್, ಚೂರ್ಣಿ, ಪಚ್ದೊಂಗ್ರಿ, ತಾಲೂಕುಗಳು ಹಾಗೂ ಮೆಲ್ಘಾಟ್, ಅಕೋಟ್ ಪ್ರದೇಶಗಳಲ್ಲಿ ಸೋಮವಾರ ಮಧ್ಯಾಹ್ನ 1.37ರಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ.

ದೇಶೀ ಹಸು ರಾಜ್ಯಮಾತೆ, ಗೋಮಾತೆ: ಮಹಾರಾಷ್ಟ್ರ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಹತ್ತಿರವಿರುವಾಗಲೇ ಶಿವಸೇನೆ(ಶಿಂದೆ ಬಣ), ಬಿಜೆಪಿ ಮತ್ತು ಎನ್‌ಸಿಪಿ(ಅಜಿತ್ ಬಣ) ಮೈತ್ರಿ ಸರಕಾರ ಸೋಮವಾರ ಮಹತ್ವದ ಘೋಷಣೆ ಮಾಡಿದೆ. ದೇಶೀ ಹಸುಗಳನ್ನು 'ರಾಜ್ಯಮಾತಾ-ಗೋಮಾತಾ' ಎಂದು ಘೋಷಿಸಿದೆ. ಸರಕಾರದ ಅಧಿಸೂಚನೆಗೆ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅಂಕಿತ ಹಾಕಿದ್ದಾರೆ. ವೇದಗಳ ಕಾಲದಿಂದಲೂ ಗೋವು ಮಾನವ ಜೀವನ ಪ್ರಮುಖ ಭಾಗವಾಗಿದೆ. ಆಯುರ್ವೇದ, ಪಂಚಗವ್ಯ ಚಿಕಿತ್ಸೆ ಹಾಗೂ ಸಾವಯವ ಕೃಷಿಯಲ್ಲೂ ಗೋವುಗಳ ಪಾತ್ರ ಮಹತ್ವದ್ದಾಗಿದೆ. ರಾಜ್ಯದಲ್ಲಿ ದೇವ್ನಿ, ಲಲ್ಕಾನಾರಿ, ದಾಂಗಿ, ದಿಯೋನಿ, ನಿಮಾರಿ ಸೇರಿ ವಿವಿಧ ದೇಶೀ ಗೋವು ತಳಿಗಳಿವೆ. ಆದರೆ, ಈ ದೇಶೀ ತಳಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ದೇಶೀ ತಳಿ ರಕ್ಷಣೆಗಾಗಿಯೇ ರಾಜ್ಯ ಸ್ಥಾನಮಾನ ನೀಡಲಾಗಿದೆ ಎಂದು ಡಿಸಿಎಂ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಗೋಶಾಲೆಗಳಲ್ಲಿ ಹಸು ಸಾಕಾಣಿಕೆಗೆ ಪ್ರತಿ ದೇಶೀ ಗೋವಿಗೆ ದಿನಕ್ಕೆ 50 ರು. ಸಹಾಯಧನ ನೀಡಲಾಗುವುದು ಎಂದರು.

ನಾಲ್ಕೂ ದಿಶೆಗಳಲ್ಲೂ ಇಸ್ರೇಲ್ ದಾಳಿ

ಗಾಜಾ, ಇರಾನ್, ಲೆಬನಾನ್ ಬಳಿಕ ಯೆಮನ್ ಗುರಿ | ಸಾವಿರಾರು ಮೈಲು ದಾಟಿದ ಯಹೂದಿ ಟಾರ್ಗೆಟ್

ಹಮಾಸ್‌ನ ಕಮಾಂಡರ್ ಫತಾಹ್ ಷರೀಫ್ ಮರಣ | ಭಾನುವಾರದ ದಾಳಿಗೆ ಲೆಬನಾನ್‌ನಲ್ಲಿ 105 ಸಾವು

ಜೆರುಸಲೇಂ: ಇಸ್ರೇಲ್‌ನ ಸೇನಾಪಡೆಗಳ ದಾಳಿ ಮತ್ತಷ್ಟು ಮಗದಷ್ಟು ವಿಸ್ತಾರಗೊಳ್ಳುತ್ತಲೇ ಸಾಗಿದೆ. ಮೊದಲಿಗೆ ಗಾಜಾ, ಬಳಿಕ ಲೆಬನಾನ್, ಇರಾನ್, ಈಗ ಸಾವಿರಾರು ಮೈಲು ದೂರದ ಯೆಮನ್ ದೇಶದ ಮೇಲೂ ಇಸ್ರೇಲ್ ದಾಳಿ ನಡೆಸಿದೆ. ಇಸ್ರೇಲ್ ಯುದ್ಧ ವಿಮಾನಗಳು ಸುರಿಸಿದ ರಾಶಿ ಬಾಂಬ್‌ಗಳಿಗೆ ಯೆಮನ್‌ನ ಕರಾವಳಿ ಭಾಗ ಅಕ್ಷರಶಃ ಹೊತ್ತಿ ಉರಿದು ಬೂದಿಯಾಗಿದೆ.

ಇಸ್ರೇಲ್‌ನ ಯುದ್ಧ ವಿಮಾನಗಳು ಯೆಮನ್‌ನತ್ತ ಹಾರಿ ಹೋಗಿ ಅಲ್ಲಿನ ಪ್ರಮುಖ ಬಂದರುಗಳು, ತೈಲೋತ್ಪನ್ನ ಉತ್ಪಾದನಾ ಕೇಂದ್ರಗಳು, ವಿದ್ಯುತ್ ಸ್ಥಾವರಗಳು ಹಾಗೂ ಹೌತಿ ಉಗ್ರರ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿವೆ. ಯೆಮನ್ ಮೇಲಿನ ಈ ದಾಳಿಯಿಂದ ಹೌತಿ ಉಗ್ರರ ನೆಲೆಗಳು, ಬಂದರು, ತೈಲ ಘಟಕಗಳು, ವಿದ್ಯುತ್ ಉತ್ಪಾದನಾ ಸ್ಥಾವರಗಳು ಸುಟ್ಟು ಭಸ್ಮವಾಗಿವೆ. ನಾಲ್ವರು ಸಾವಿಗೀಡಾಗಿದ್ದಾರೆಂದು ವರದಿಯಾಗಿದೆ.

1 ದಿನದ ಹಿಂದಷ್ಟೇ ಇರಾನ್ ಬೆಂಬಲಿತ ಹೌತಿ ಉಗ್ರ ಸಂಘಟನೆ, ಲೆಬನಾನ್ ಹಾಗೂ ಗಾಜಾಕ್ಕೆ ಬೆಂಬಲ ಸೂಚಿಸಿ, ಇಸ್ರೇಲ್‌ನ ಟೆಲ್ ಅವೀವ್‌ನ ಬೆನ್ ಗುರಿಯಾನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಗುರಿಯಾಗಿಸಿ ಖಂಡಾಂತರ ಕ್ಷಿಪಣಿ ಸಿಡಿಸಿದ್ದಾಗಿ ಹೇಳಿಕೊಂಡಿತ್ತು. ಈ ದಾಳಿಗೆ ಪ್ರತಿಕಾರವಾಗಿ ಇಸ್ರೇಲ್ ವಾಯುಪಡೆ, ಯೆಮನ್‌ನ 'ಸಾನಾ' ಮತ್ತು 'ರಾಸ್ ಇಸಾ' ಮತ್ತು 'ಹೊದೈದಾಹ್' ಪ್ರದೇಶಗಳನ್ನು ಗುರಿಯಾಗಿಸಿ ಭಾನುವಾರ ದಾಳಿ ನಡೆಸಿದೆ.

ಇಸ್ರೇಲ್‌ನ ಡಜನ್‌ಗೂ ಹೆಚ್ಚು ಯುದ್ಧ ವಿಮಾನಗಳು, ಫೈಟರ್ ಜೆಟ್‌ಗಳು ಬಲು ವಿಸ್ತಾರವಾದ ಸೌದಿ ಅರೇಬಿಯ ಭೂಪ್ರದೇಶವನ್ನು ದಾಟಿ ಬಂದು ಯೆಮನ್‌ನ ಹಲವು ಪ್ರದೇಶಗಳನ್ನು ಭಸ್ಮಮಾಡಿವೆ. ಪರಿಣಾಮ ಯೆಮನ್‌ನಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ದಾಳಿಯ ತೀವ್ರತೆ ಮತ್ತಷ್ಟು ಹೆಚ್ಚಿಸುವ ಸುಳಿವನ್ನೂ ಇಸ್ರೇಲ್ ನೀಡಿದೆ.

2023ರ ನವೆಂಬರ್‌ನಿಂದ ಇರಾನ್ ನಿರ್ದೇಶನದ ಮೇರೆಗೆ ಇಸ್ರೇಲ್ ದೇಶವನ್ನು ಕೆಣಕುತ್ತಾ ಬಂದ ಹೌತಿ ಉಗ್ರ ಸಂಘಟನೆ, ರೆಡ್ ಸೀ, ಗಲ್ಫ್ ಆಫ್ ಈಡನ್, ಬಾಬ್ ಅಲ್-ಮಾನ್‌ದೆಬ್ ಸ್ಟ್ರೇಟ್‌ನಲ್ಲಿ ಇಸ್ರೇಲ್ ಹಾಗೂ ಇಸ್ರೇಲ್ ಮಿತ್ರ ದೇಶಗಳ ವಾಣಿಜ್ಯ ಸರಕು ಸಾಗಣೆ ಹಡಗುಗಳ ಮೇಲೆ



ದಾಳಿ ಮಾಡುತ್ತಾ, ತನ್ನ ನಿಲುಕಿನ ಜಲಪ್ರದೇಶದಲ್ಲಿ ನೌಕಾಯಾನ ಪೂರ್ಣ ಹದಗೆಡುವಂತೆ ಮಾಡಿತ್ತು.

ಈಗ ಹಮಾಸ್ ಮತ್ತು ಹಿಜ್ಬುಲ್ಲಾ ವಿರುದ್ಧದ ಸಂಘರ್ಷದ ವೇಳೆಯಲ್ಲಿಯೇ ಹೌತಿ ಉಗ್ರರನ್ನೂ ಬಗ್ಗುಬಡಿಯಲು ಇಸ್ರೇಲ್ ನಿರ್ಧರಿಸಿದಂತಿದೆ. ಆ ಮಟ್ಟಕ್ಕೆ ತೀವ್ರ ಸ್ವರೂಪದ ದಾಳಿ ನಡೆಸಿದೆ.

ಹಮಾಸ್ ಕಮಾಂಡರ್ ದ.ಲೆಬನಾನ್‌ನಲ್ಲಿ ಹತ್ಯೆ

ಬೈರೂತ್: ಹಿಜ್ಬುಲ್ಲಾ ಪ್ರಮುಖ ಕಮಾಂಡರ್ ಹಸನ್ ನಸ್ರುಲ್ಲಾ ಹತ್ಯೆ ಬಳಿಕ ಇಸ್ರೇಲ್, ಮತ್ತೊಬ್ಬ ದೊಡ್ಡ ನಾಯಕನನ್ನು ಕೊಂದು ಹಾಕಿದೆ. ಹಮಾಸ್‌ನ ಕಮಾಂಡರ್ 'ಫತಾಹ್ ಷರೀಫ್ ಅಬು ಅಲ್ ಅಮಿನೆ' ಎಂಬಾತನನ್ನು ದಕ್ಷಿಣ ಲೆಬನಾನ್‌ನಲ್ಲಿದ್ದ ಆತನ ನಿವಾಸದಲ್ಲೇ

ಸೋಮವಾರದ ದಾಳಿಯಲ್ಲಿ ಇಸ್ರೇಲ್ ಸೇನೆ ಕೊಂದಿದೆ. ದಕ್ಷಿಣ ಲೆಬನಾನ್‌ನ ತೈರೆಯ ಲ್ಲಿದ್ದ ಫತಾಹ್ ಷರೀಫ್ ನಿವಾಸ ವನ್ನು 'ಎ1 ಬೇಸ್ ಕ್ಯಾಂಪ್' ಎಂದು ಗುರುತಿಸಲಾಗಿತ್ತು.

ಇಸ್ರೇಲ್‌ನ ಗುರಿಯಿಟ್ಟ ದಾಳಿಯಲ್ಲಿ ಫತಾಹ್ ಷರೀಫ್, ಆತನ ಪತ್ನಿ, ಮಗಳು ಸೇರಿ ಇಡೀ ಕುಟುಂಬ ಸಾವಿಗೀಡಾ ಗಿದೆ ಎಂದು ಹಮಾಸ್ ತಿಳಿಸಿದೆ. ಜತೆಗೆ ಬೈರೂತ್‌ನ ಕೊಲಾ ಪ್ರದೇಶದ ಮೇಲೆಯೂ ದಾಳಿ ನಡೆಸಲಾಗಿದೆ. ಪಿಎಫ್‌ಎಲ್‌ಪಿ (ಪಾಪ್ಯುಲರ್ ಫ್ರಂಟ್ ಫಾರ್ ದಿ ಲಿಬರೇಶನ್ ಆಫ್ ಪ್ಯಾಲೆಸ್ತೀನ್) ಸಂಘಟನೆಯ ಮೂವರು ಪ್ರಮುಖರನ್ನು ಸಾಯಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಪಿಎಫ್‌ಎಲ್‌ಪಿಯ ಸೇನಾಪಡೆ 'ಅಬು ಅಲಿ ಮುಸ್ತಫಾ ಬ್ರಿಗೇಡ್' ಗಾಜಾದಲ್ಲಿ ಸಕ್ರಿಯವಾಗಿದೆ. ಇಸ್ರೇಲ್ ದಾಳಿಗೆ ಲೆಬನಾನ್‌ನಲ್ಲಿ ಭಾನುವಾರ ಒಂದೇ ದಿನ 105 ಮಂದಿ ಸಾವನ್ನಪ್ಪಿದ್ದಾರೆ. ಕಳೆದ ಕೆಲದಿನಗಳಿಂದ ಇಸ್ರೇಲ್‌ನ ಸತತ ದಾಳಿಗೆ 700ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ಗಾಜಾದಲ್ಲಿ 2023ರ ಅ.7ರಂದು ಆರಂಭವಾದ ಇಸ್ರೇಲ್ ಸಂಘರ್ಷದಲ್ಲಿ ಸಾವಿನ ಸಂಖ್ಯೆ 41 ಸಾವಿರ ದಾಟಿದೆ.

ನೇರ ದಾಳಿಗೆ ಹಿಜ್ಬುಲ್ಲಾ ಸಿದ್ಧ

ಲೆಬನಾನ್ ಮೇಲೆ ಇಸ್ರೇಲ್ ನೇರ ದಾಳಿ ನಡೆಸುತ್ತಿದೆ. ಇಸ್ರೇಲ್ ಟ್ಯಾಂಕ್‌ಗಳು ಗಡಿ ದಾಟಿ ಲೆಬನಾನ್ ಒಳಕ್ಕೇ ನುಗ್ಗಿವೆ. ನಾವು ಕೂಡ ನೇರ ದಾಳಿಗೆ, ದೀರ್ಘ ಯುದ್ಧಕ್ಕೆ ಸಿದ್ಧವಿದ್ದೇವೆ. ಇಸ್ರೇಲ್ ದಾಳಿಯಿಂದ ಹಿಜ್ಬುಲ್ಲಾ ಯುದ್ಧ ತಂತ್ರಗಳಿಗೆ ಯಾವುದೇ ಹಾನಿಯಾಗಿಲ್ಲ. ನಾವಿನ್ನಷ್ಟು ಗಟ್ಟಿಯಾಗಿದ್ದೇವೆ' ಎಂದು ಹಿಜ್ಬುಲ್ಲಾ ಉಪ ನಾಯಕ ಕಾಸೀಮ್ ಹೇಳಿದ್ದಾರೆ. ಇನ್ನೊಂದೆಡೆ, ಲೆಬನಾನ್ ಪ್ರಧಾನಿ ಮಿಕಾತಿ, ದಕ್ಷಿಣ ಲೆಬನಾನ್‌ನಲ್ಲಿ ಸೇನೆ ನಿಯೋಜಿಸಲು ಸಿದ್ಧ. ಕದನ ವಿರಾಮಕ್ಕೂ ಬೆಂಬಲವಿರಲಿದೆ ಎಂದಿದ್ದಾರೆ. 'ಲೆಬನಾನ್ ಜನರ ಮೇಲೆ ದಾಳಿಯಾಗುತ್ತಿದೆ, ಹಿಜ್ಬುಲ್ಲಾ ಕಮಾಂಡರ್‌ಗಳ ಹತ್ಯೆಯಾಗುತ್ತಿದೆ. ಆದರೆ ಹಿಜ್ಬುಲ್ಲಾ ತನ್ನ ಧ್ಯೇಯದಿಂದ ಹಿಂದೆ ಸರಿಯಲ್ಲ. ನಮ್ಮ ಗೆಲುವು ಖಚಿತ' ಎಂದು ಹಿಜ್ಬುಲ್ಲಾ ಉಪ ನಾಯಕ ನೈಮ್ ಕಾಸೀಂ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಹಸನ್ ನಸ್ರುಲ್ಲಾ ಹತ್ಯೆ ಬಳಿಕ ಆ ಸ್ಥಾನಕ್ಕೆ ಮತ್ತೊಬ್ಬ ನಾಯಕನ ಹುಡುಕಾಟ ನಡೆದಿದೆ. ಶೀಘ್ರವೇ ಹೊಸ ನಾಯಕ ಅಧಿಕಾರಕ್ಕೆ ಬರಲಿದ್ದಾನೆ ಎಂದಿದ್ದಾರೆ. ಹಿಜ್ಬುಲ್ಲಾ ರಾಜಕೀಯ ವ್ಯವಹಾರಗಳ ಮುಖ್ಯಸ್ಥ ಹಾಶಿಮ್ ಸಫಿಯೆದ್ದಿನ್ ನೇಮಕ ಸಾಧ್ಯತೆ ಇದೆ ಎನ್ನಲಾಗಿದೆ.

ಖರ್ಗೆ ಮಾತು ಅಸಹ್ಯಕರ: ಶಾ

ದೆಹಲಿ: 'ಪ್ರಧಾನಿ ನರೇಂದ್ರ ಮೋದಿಯನ್ನು ಅಧಿಕಾರದಿಂದ ಕಿತ್ತೊಗೆಯುವವರೆಗೂ ನಾನು ಸಾಯಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿರುವುದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಕಿಡಿಕಾರಿದ್ದಾರೆ. ಖರ್ಗೆ ಹೇಳಿಕೆ 'ಬಲು ಅಸಹ್ಯಕರ, ಅಪಮಾನಕರ' ಎಂದು ಕಟುವಾಗಿ ಟೀಕಿಸಿದ್ದಾರೆ.

ವಿಕಸಿತ ಭಾರತ್ ನೋಡುವವರೆಗೂ ಅವರು ಬದುಕಿರಲಿ

ಖರ್ಗೆ ಅವರ ಹೇಳಿಕೆ ಮೋದಿ ಬಗ್ಗೆ ಕಾಂಗ್ರೆಸ್‌ಗಿರುವ ದ್ವೇಷ-ಭಯ ತೋರುತ್ತದೆ. ನಿಂದಿಸುವುದರಲ್ಲಿ ಖರ್ಗೆ ತಮ್ಮ ಪಕ್ಷದ ಎಲ್ಲಾ ನಾಯಕರನ್ನೂ ಮೀರಿಸಿದ್ದಾರೆ. ಅವರ ಆರೋಗ್ಯ ವಿಷಯಕ್ಕೆ ಮೋದಿ ಅವರನ್ನು ಎಳೆತರುವುದು ಸರಿಯಲ್ಲ ಎಂದು ಶಾ ಕಿಡಿಕಾರಿದ್ದಾರೆ.

ಖರ್ಗೆ ಅವರ ಆರೋಗ್ಯಕ್ಕಾಗಿ ಮೋದಿ ಅವರು ಪ್ರಾರ್ಥನೆ ಸಲ್ಲಿಸಿದ್ದಾರೆ. ಖರ್ಗೆ ಅವರು ಇನ್ನೂ ಹಲವು ವರ್ಷ ಬದುಕಲಿ ಎಂದು ನಾನೂ ಪ್ರಾರ್ಥಿಸುವೆ. 2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣ ಆಗುವುದನ್ನು ನೋಡಲು ಖರ್ಗೆ ಅವರು ಬದುಕಿರಬೇಕು ಎಂದು ಶಾ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

ಆಗಿದ್ದೇನು?: ಜಮ್ಮು-ಕಾಶ್ಮೀರದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಭಾನುವಾರ ಮಾತನಾಡುತ್ತಿದ್ದ ಖರ್ಗೆ ಅವರು ತುಸು ಅಸ್ವಸ್ಥರಾದರು. ಬಳಿಕ ಸುಧಾರಿಸಿಕೊಂಡು ಭಾಷಣ ಮುಂದುವರೆಸಿ, 'ಈಗ ನನಗೆ 83 ವರ್ಷ, ನಾನು ಅಷ್ಟು ಬೇಗ ಸಾಯಲ್ಲ. ಮೋದಿಯನ್ನು ಅಧಿಕಾರದಿಂದ ಕಿತ್ತೊಗೆಯುವವರೆಗೂ ಬದುಕಿರುತ್ತೇನೆ' ಎಂದಿದ್ದರು. ಬಳಿಕ ಖರ್ಗೆ ಅವರಿಗೆ ಕರೆ ಮಾಡಿ ಆರೋಗ್ಯ ವಿಚಾರಿಸಿದ ಪ್ರಧಾನಿ ಮೋದಿ, ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾರೈಸಿದ್ದರು.

ಶಾಗೆ ಕುಟುಕಿದ ಖರ್ಗೆ

ಅಮಿತ್ ಶಾ ಕಿಡಿನುಡಿಗೆ ಅಷ್ಟೇ ಖಾರವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜನಗಣತಿ, ಜಾತಿಗಣತಿ, ಮಣಿಪುರ ಜನಾಂಗೀಯ ಸಂಘರ್ಷ ಮೊದಲಾದ ಗಂಭೀರ ವಿಷಯಗಳತ್ತ ಮೊದಲು ಕೇಂದ್ರ ಗೃಹ ಸಚಿವರು ಗಮನ ಹರಿಸಲಿ ಎಂದು ಕುಟುಕಿದ್ದಾರೆ.

ಬಲಕ್ಕೆ ಹೊರಳಿದ ಆಸ್ಟ್ರೇಲಿಯ; ಕಿಕ್ಕೆಲ್ 'ಎಫ್‌ಪಿಒ' ಪಕ್ಷಕ್ಕೆ ಜಯ

ಆಸ್ಟ್ರೇಲಿಯ ಸಂಸತ್ ಚುನಾವಣೆಯಲ್ಲಿ ಮೊದಲ ಸ್ಥಾನ ಗಳಿಸಿದ ಖುಷಿಯಲ್ಲಿ ಬೆಂಬಲಿಗರ ಜತೆ ಎಫ್‌ಪಿಒ ಪಕ್ಷದ ಮುಖಂಡ ಹರ್ಬರ್ಟ್ ಕಿಕ್ಕೆಲ್

ಸಿಡ್ನಿ: ಆಸ್ಟ್ರೇಲಿಯದಲ್ಲಿ ಇದೇ ಮೊದಲ ಬಾರಿಗೆ ತೀರಾ ಬಲಪಂಥೀಯ ವಾದದ ರಾಜಕೀಯ ಪಕ್ಷವಾದ 'ಪ್ರೀಡಂ ಪಾರ್ಟಿ'(ಎಫ್‌ಪಿಒ) ಚುನಾವಣೆಯಲ್ಲಿ ಗೆಲುವು ಕಂಡಿದೆ. ಹರ್ಬರ್ಟ್ ಕಿಕ್ಕೆಲ್ ನೇತೃತ್ವದ ಪಕ್ಷ 'ಎಫ್‌ಪಿಒ' ಶೇ.29.2ರಷ್ಟು ಮತ ಗಳಿಸಿ ಪ್ರಥಮ ಸ್ಥಾನದಲ್ಲಿದೆ.

ಆಡಳಿತಾರೂಢ ಪಕ್ಷವಾಗಿದ್ದ, ಚಾನ್ಸೆಲರ್ ಕಾರ್ಲ್ ನೆಹಮ್ಮೆರ್ ನಾಯಕತ್ವದ 'ಕನ್ಸರ್ವೇಟಿವ್ ಪೀಪಲ್ ಪಾರ್ಟಿ'(ಒವಿಪಿ) ಶೇ.26.5ರಷ್ಟು ಮತಗಳನ್ನಷ್ಟೇ ಪಡೆಯಲು ಸಾಧ್ಯವಾಗಿದ್ದು, ಎರಡನೇ ಸ್ಥಾನಕ್ಕೆ ಕುಸಿದಿದೆ.

ಚುನಾವಣೆಯಲ್ಲಿ ಶೇ.74ರಷ್ಟು ಮತದಾನವಾಗಿದೆ. ಕಿಕ್ಕೆಲ್ ಪಕ್ಷ ಕಾರ್ಲ್ ಪಕ್ಷಕ್ಕಿಂತ ಶೇ.2.7ರಷ್ಟು ಅಧಿಕ ಮತಗಳನ್ನು ಗಳಿಸಿ ಗೆಲುವು ಸಾಧಿಸಿದ್ದರೂ, ಸರಕಾರ ರಚನೆಗೆ ಬೇಕಾಗುವಷ್ಟು ಮತಗಳು ಸಿಕ್ಕಿಲ್ಲ. ಹಾಗಾಗಿ ಮೈತ್ರಿಕೂಟ ಸರಕಾರ ರಚಿಸಬೇಕಾದ ಅನಿವಾರ್ಯ ಕಿಕ್ಕೆಲ್ ಅವರಿಗೆ ಎದುರಾಗಿದೆ. ಕಾರ್ಲ್ ಅವರ ಪಕ್ಷ ಮೈತ್ರಿ ಸರಕಾರಕ್ಕೆ ಕಿಕ್ಕೆಲ್ ಜತೆ ಕೈಜೋಡಿಸಲು ನಿರಾಕರಿಸಿದೆ. ಉಳಿದಂತೆ ಎಸ್‌ಪಿಒ ಪಕ್ಷ ಶೇ.21, ನಿಯೋಸ್ ಶೇ.8, ಕೆಪಿಒ ಶೇ.2.3, ಬೀರ್ ಪಕ್ಷ ಶೇ.2 ಮತ ಗಳಿಸಿವೆ. ಈ ಪಕ್ಷಗಳಲ್ಲಿ ಕೆಲವದರ ಜತೆಗೂಡಿ ಮೈತ್ರಿ ಸರಕಾರ ರಚಿಸಬೇಕಿದೆ. ಈಗ ಆಸ್ಟ್ರೇಲಿಯ ರಾಜಕೀಯ ಆಸಕ್ತರ ಗಮನವೆಲ್ಲಾ ಕಿಕ್ಕೆಲ್ ಕಡೆ ನೆಟ್ಟಿದೆ.

ತೀರಾ ಬಲಪಂಥೀಯರ ಪಕ್ಷ ಚುನಾವಣೆಯಲ್ಲಿ ಗೆಲುವು ಸಾಧಿಸಿರುವುದರಿಂದ ಆಸ್ಟ್ರೇಲಿಯದಲ್ಲಿ ಹೊಸಶಕೆ ಶುರುವಾದಂತಿದೆ ಎಂದು ಬಿಬಿಸಿ ಸೇರಿದಂತೆ ವಿವಿಧ ಮಾಧ್ಯಮಗಳು ವರದಿ ಮಾಡಿವೆ.

> 183 ಸದಸ್ಯ ಬಲದ ಸಂಸತ್ತಿನಲ್ಲಿ ಕಿಕ್ಕೆಲ್ ಪಕ್ಷ (ಎಫ್‌ಪಿಒ) 56 ಸ್ಥಾನಗಳನ್ನು ಗೆದ್ದಿದೆ. ಕಾರ್ಲ್ ಅವರ ಪಕ್ಷ (ಒವಿಪಿ) 52, ಸೋಷಿಯಲ್ ಡೆಮಾಕ್ರಾಟ್ಸ್(ಎಸ್‌ಪಿಒ) 41 ಸ್ಥಾನ ಗಳಿಸಿವೆ.

ದೇವರನ್ನ ರಾಜಕೀಯದಿಂದ ಹೊರಗಿಡಿ

ಆಂಧ್ರ ಮುಖ್ಯಮಂತ್ರಿಗೆ ಸುಪ್ರೀಂ ಚಾಟಿ | ರಾಜ್ಯ ಸರಕಾರ ರಚಿಸಿದ ಎಸ್‌ಐಟಿಗೆ ತಡೆ

ದೆಹಲಿ: ತಿರುಪತಿ ಲಡ್ಡು ತಯಾರಿಕೆಗೆ ಪ್ರಾಣಿಗಳ ಕೊಬ್ಬು ಬೆರೆಸಿದ ತುಪ್ಪ ಬಳಸಲಾಗಿದೆ ಎಂಬ ಆರೋಪ ಸಂಬಂಧ ವಿಚಾರಣೆ ನಡೆಸಲು ಸೋಮವಾರ ಆರಂಭಿಸಿದ ಸುಪ್ರೀಂ ಕೋರ್ಟ್ 'ಕನಿಷ್ಠ ದೇವರನ್ನಾದರೂ ರಾಜಕೀಯದಿಂದ ಹೊರಗಿಡಿ' ಎಂದು ಬೇಸರದಿಂದ ಹೇಳಿದೆ.

ಲಡ್ಡು ಪ್ರಸಾದ ತಯಾರಿಕೆಯಲ್ಲಿ ಪ್ರಾಣಿಗಳ ಕೊಬ್ಬು ಬೆರೆತ ತುಪ್ಪ ಬಳಸಲಾಗಿದೆ ಎಂದು ಮಾಧ್ಯಮದೆದುರು ನೇರ ಆರೋಪ ಮಾಡಿದ ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ನಡೆಗೆ ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಾಲಯದ ಮೇಲ್ವಿಚಾರಣೆಯಲ್ಲೇ ತಿರುಪತಿ ಲಡ್ಡು ವಿವಾದ ತನಿಖೆ ಆಗಬೇಕು ಎಂದು ಆಗ್ರಹಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗೂ ನ್ಯಾ. ಕೆ.ವಿ.ವಿಶ್ವನಾಥನ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠ 'ಲ್ಯಾಬ್ ವರದಿ ನೋಡಿದರೆ ಪ್ರಾಥಮಿಕವಾಗಿ ತಿರಸ್ಕೃತಗೊಂಡಿದ್ದ ತುಪ್ಪದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿರುವಂತೆ ಕಾಣಿಸುತ್ತದೆ. ಈ ಕಲಬೆರಕೆ ತುಪ್ಪವನ್ನೇ ಪ್ರಸಾದ ತಯಾರಿಸಲು ಬಳಸಲಾಗಿದೆ ಎಂಬುದಕ್ಕೆ ಯಾವ ಸಾಕ್ಷಿ ಇದೆ?' ಎಂದು ಪ್ರಶ್ನಿಸಿದೆ.

ಲಡ್ಡುಗೆ ಕಲಬೆರಕೆ ತುಪ್ಪ ಬಳಕೆ ಮತ್ತು ಹಿಂದಿನ ವೈಎಸ್ ಜಗನ್ ರೆಡ್ಡಿ ಸರಕಾರದ ಅವಧಿಯಲ್ಲಿ ತಿರುಪತಿ ತಿರುಮಲ ದೇಗುಲದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖೆಗಾಗಿ ರಾಜ್ಯ ಸರಕಾರ ರಚಿಸಿದ ವಿಶೇಷ ತನಿಖಾ ತಂಡ(ಎಸ್‌ಐಟಿ) ತನಿಖೆ ಮುಂದುವರೆಸಬಾರದು ಎಂದೂ ಪೀಠ ಸೂಚನೆ ನೀಡಿದೆ. ಆ ಮೂಲಕ ಹೊಸದಾಗಿ ಎಸ್‌ಐಟಿ ರಚಿಸಿ ತನಿಖೆಗೆ ವಹಿಸುವ ಸೂಚನೆ ನೀಡಿದೆ. ಈ ವಿಚಾರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಕೇಂದ್ರದಿಂದ ನಿರ್ದೇಶನ ಪಡೆಯುವಂತೆ ಸೂಚಿಸಲಾಗಿದೆ. ಬಳಿಕ ಪೀಠ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದೆ.

ಸಿಎಂ ನಡೆಗೆ ಅಸಮಾಧಾನ

ತಿರುಪತಿ ಲಡ್ಡು ಪ್ರಸಾದದಲ್ಲಿ ಕಳಪೆ ತುಪ್ಪ ಬಳಕೆಯಾಗಿಲ್ಲ ಎಂದಾದಲ್ಲಿ ಇಡೀ ವಿವಾದವೇ ಸುಳ್ಳಾಗುತ್ತದೆ. ಜನರ ನಂಬಿಕೆ ವಿಚಾರದಲ್ಲಿ ವಿವಾದ ಸೃಷ್ಟಿಯಾಗಿದೆ. ಇಂತಹ ವಿಚಾರದಲ್ಲಿ ರಾಜಕೀಯ ಸಲ್ಲ. ಖಚಿತ ಮಾಹಿತಿ ಇಲ್ಲದೇ, ತನಿಖೆಯೂ ಆಗದೇ ಮಾಧ್ಯಮದೆದುರು ಹೇಳಿಕೆ ನೀಡುವ ಅಗತ್ಯವೇನಿತ್ತು? ಎಂದು ಆಂಧ್ರಪ್ರದೇಶ ಸರಕಾರದ ಪರ ಹಾಜರಾಗಿದ್ದ ಹಿರಿಯ ವಕೀಲ ಮುಕುಲ್ ರೋಹ್ಟಗಿ ಅವರನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಕೋಟ್ಯಂತರ ಜನರ ನಂಬಿಕೆಗೆ ಸಂಬಂಧಿಸಿದ ವಿಚಾರಗಳಲ್ಲಿ ಆರೋಪ ಮಾಡುವಾಗ ಸೂಕ್ಷ್ಮತೆ ಇರಬೇಕು ಎಂದೂ ಹೇಳಿದೆ.

ಕಥುವಾ: ಒಬ್ಬ ಉಗ್ರನ ಹತ್ಯೆ, ಶಸ್ತ್ರಾಸ್ತ್ರ ವಶ

ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ಗುಂಡೇಟು | ಭದ್ರತಾ ಪಡೆ-ಉಗ್ರರ ಚಕಮಕಿ

ಶ್ರೀನಗರ: ಜಮ್ಮು-ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಸೇನೆಯ ರೈಸಿಂಗ್ ಸ್ಟಾರ್ ಕಾರ್ಪ್ಸ್ ಮತ್ತು ಜಮ್ಮು-ಕಾಶ್ಮೀರ ಪೊಲೀಸರು ನಡೆಸುತ್ತಿರುವ ಜಂಟಿ ಕಾರ್ಯಾಚರಣೆಯಲ್ಲಿ ಮತ್ತೊಬ್ಬ ಉಗ್ರನನ್ನು ಕೊಂದು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಭಾನುವಾರದ ಕಾರ್ಯಾಚರಣೆಯಲ್ಲಿ ಇಬ್ಬರು ಜೆ-ಕೆ ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದಾರೆ. ಕಾರ್ಯಾಚರಣೆ ಮುಂದುವರಿದಿದೆ ಎಂದು ಸೇನೆಯ ವೆಸ್ಟರ್ನ್ ಕಮಾಂಡ್ ಮಾಹಿತಿ ನೀಡಿದೆ.

ರಜೌರಿಯಲ್ಲಿ ಭದ್ರತಾ ಪಡೆಗಳು-ಉಗ್ರರ ನಡುವೆ ಸೋಮವಾರವೂ ಗುಂಡಿನ ಚಕಮಕಿ ಮುಂದುವರಿದಿದೆ. ಉಗ್ರರು ಅಡಗಿರುವ ಬಗ್ಗೆ ಗುಪ್ತಚರ ಇಲಾಖೆಯ ನಿರ್ದಿಷ್ಟ ಮಾಹಿತಿ ಆಧರಿಸಿ ರಜೌರಿಯ ಥಾನಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯ ಮನ್ಯಾಲ್ ಗಲಿಯಲ್ಲಿ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿವೆ. ಎರಡೂ ಕಡೆಯಿಂದ ಕೆಲವು ಸುತ್ತುಗಳನ್ನು ಗುಂಡು ಹಾರಿಸಲಾಗಿದೆ. ಪ್ರದೇಶವನ್ನು ಭದ್ರತಾಪಡೆಗಳು ಸುತ್ತುವರಿದಿವೆ. ಹೆಚ್ಚಿನ ವಿವರಗಳಿಗಾಗಿ ಕಾಯಲಾಗುತ್ತಿದೆ ಎಂದು ಜಮ್ಮು ವಲಯದ ಎಡಿಜಿಪಿ ತಿಳಿಸಿದ್ದಾರೆ.

ಹಿಜ್ಬುಲ್ಲಾ ನಾಯಕ ನಸ್ರಲ್ಲಾ ಸಾವಿಗೆ ಸಿರಿಯ ಸಂಭ್ರಮ!

ದಮಾಸ್ಕಸ್: ಲೆಬನಾನ್‌ನ ಉಗ್ರ ಸಂಘಟನೆ 'ಹಿಜ್ಬುಲ್ಲಾ'ದ ಮುಖ್ಯ ಕಮಾಂಡರ್ ಹಸನ್ ನಸ್ರಲ್ಲಾ ಇಸ್ರೇಲ್ ರಾಕೆಟ್ ದಾಳಿಯಲ್ಲಿ ಸಾವಿಗೀಡಾಗಿರುವುದಕ್ಕೆ ಮಧ್ಯ ಪ್ರಾಚ್ಯದ ಹಲವು ರಾಷ್ಟ್ರಗಳಲ್ಲಿ ಶೋಕಾಚರಣೆ ನಡೆದಿದ್ದರೆ, ಪಕ್ಕದ ಸಿರಿಯ ದೇಶದ ಕೆಲವೆಡೆ ಸಂಭ್ರಮಾಚರಣೆ ನಡೆದಿದೆ! ಹಸನ್ ನಸ್ರಲ್ಲಾ ಸಾವಿನ ಸುದ್ದಿ ಕೇಳಿ ಬೀದಿಗಿಳಿದ ಜನತೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದ್ದಾರೆ.

ಸಿರಿಯ ರಾಷ್ಟ್ರದ ವಾಯುವ್ಯ ಭಾಗದಲ್ಲಿರುವ ಇದ್ಲಿಬ್ ಪ್ರದೇಶದಲ್ಲಿ ಹಸನ್ ಸಾವಿನ ಸುದ್ದಿ ಹರಡುತ್ತಿದ್ದಂತೆ ಜನ ಸಂಭ್ರಮಿಸಿದ್ದಾರೆ. ಆತ ಸಿರಿಯ ಜನರಿಂದಲೇ ಸಾಯಬೇಕಿತ್ತು ಎಂದು ಕೊಂಚ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ.

ಈ ಪ್ರದೇಶದ ಜನರು ಹಸನ್ ನಸ್ರಲ್ಲಾನನ್ನು ಬಹಳವಾಗಿ ದ್ವೇಷಿಸುತ್ತಾರೆ. 2011ರಲ್ಲಿ ನಡೆದ ಸಿರಿಯ ಆಂತರ್ಯುದ್ಧದಲ್ಲಿ ಸಾವಿರಾರು ಜನರ ಸಾವಿಗೆ ಬಾಷರ್ ಅಲ್ ಅಸ್ಸಾದ್ ಕಾರಣನಾಗಿದ್ದ. ಹಸನ್ ನಸ್ರಲ್ಲಾ, ಬಾಷರ್‌ನ ಸಹಚರ. ಆ ಕಾರಣಕ್ಕಾಗಿ ನಸ್ರಲ್ಲಾನನ್ನು ಸದೆಬಡಿಯಲು ಸಿರಿಯದ ಬಹಳಷ್ಟು ಸಂಘಟನೆಗಳು ಸಿದ್ಧತೆ ಮಾಡಿಕೊಂಡು ಸಮಯಕ್ಕಾಗಿ ಕಾಯುತ್ತಿದ್ದವು ಎನ್ನಲಾಗಿದೆ.

ಶಿತೆ ಪವಿತ್ರ ಪ್ರದೇಶಗಳನ್ನು ಹಾಗೂ ಗಡಿ ಗ್ರಾಮಗಳನ್ನು ರಕ್ಷಿಸುವುದಾಗಿ ಹೇಳಿಕೊಂಡು ಬಂದಿದ್ದ ಬಂಡುಕೋರರು ನಿಧಾನವಾಗಿ ಸುನ್ನಿ ಪ್ರಾಬಲ್ಯದ ಪ್ರದೇಶಗಳಲ್ಲಿ ಬಹಳಷ್ಟು ಜನರನ್ನು ಸಾಯಿಸಿ ತಮ್ಮ ಅಧಿಕಾರ ವ್ಯಾಪ್ತಿ ವಿಸ್ತರಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲೇ ನಸ್ರಲ್ ಸಾವಿಗೆ ಸಂಭ್ರಮಾಚರಣೆಯಾಗಿದೆ. ಗಂಡ, ಮಕ್ಕಳನ್ನು ಕಳೆದುಕೊಂಡ ಎಷ್ಟೋ ಮಹಿಳೆಯರ ಮನಸ್ಸಿಗೆ ಶಾಂತಿ ಸಿಕ್ಕಿದೆ ಎಂದು ಇದ್ಲಿಬ್ ಜನತೆ ಹೇಳುತ್ತಿದ್ದಾರೆ.

ದಲಿತ ಯುವಕನ 'ಐಐಟಿ' ಕನಸು ನನಸಾಗಿಸಿದ ಸಿಜೆಐ

ಸಂವಿಧಾನದ ವಿಧಿ 142ರಡಿ ದತ್ತವಾದ ವಿಶೇಷ ಅಧಿಕಾರ ಬಳಸಿ ಆದೇಶ

ದೆಹಲಿ: 2024ರ 'ಅತ್ಯುತ್ತಮ ಚಲನಚಿತ್ರ'ವಾಗಿ ಫಿಲಂಫೇರ್ ಪ್ರಶಸ್ತಿ ಪಡೆದ 'ಟ್ವೆಲ್ತ್ ಫೇಲ್' ಹಿಂದಿ ಸಿನಿಮಾ ಕಥಾನಾಯಕ ಮನೋಜ್ ಕುಮಾರ್ ಶರ್ಮಾ (ನಟ: ವಿಕ್ರಾಂತ್ ಮೆಸ್ಸೆ) ಕಥೆ-ವ್ಯಥೆಗೆ ಹೋಲುವಂತಹುದೇ ಪರಿಸ್ಥಿತಿಯಲ್ಲಿದ್ದ, ಐಐಟಿ ಪ್ರವೇಶ ಕನಸು ಕಂಡಿದ್ದ ಬಡ ಕುಟುಂಬದ ಪ್ರತಿಭಾವಂತ ದಲಿತ ಯುವಕನೊಬ್ಬನ ನೈಜ ಪ್ರಸಂಗವಿದು.

ಪ್ರತಿಷ್ಠಿತ 'ಐಐಟಿ' ಶಿಕ್ಷಣ ಸಂಸ್ಥೆಯಲ್ಲೇ ವ್ಯಾಸಂಗ ಮಾಡಿ ಬಿಟೆಕ್ ಪದವೀಧರ ಆಗಬೇಕೆಂದು ಕನಸು ಕಂಡಿದ್ದ ಉತ್ತರ ಪ್ರದೇಶದ ಮುಜಫ್ಫರ್ ನಗರದ ಬಡ ಕುಟುಂಬದ ದಲಿತ ಯುವಕ 18 ವರ್ಷದ ಅತುಲ್ ಕುಮಾರ್‌ಗೆ, 'ಜೆಇಇ' ಮೂಲಕವೇ 'ಐಐಟಿ ಧನಬಾದ್'ನಲ್ಲಿ ಬಿಟೆಕ್‌ಗೆ (ಎಲೆಕ್ಟ್ರಿಕಲ್ ಇಂಜಿನಿಯರಿಂಗ್) ಸೀಟು ಸಿಕ್ಕಿತ್ತು. ಜೂ.24ಕ್ಕೆ ಶುಲ್ಕ ಪಾವತಿಗೆ ಕಡೆ ದಿನವಾಗಿತ್ತು. ಆದರೆ, ದಿನಗೂಲಿಯಾದ ಅತುಲ್ ತಂದೆಗೆ ಕಡೆ ದಿನದವರೆಗೂ ಮಗನ ಕಾಲೇಜು ಪ್ರವೇಶ ಶುಲ್ಕಕ್ಕೆ ಬೇಕಾದ 17,500 ರು. ಹೊಂದಿಸಲಾಗಲೇ ಇಲ್ಲ. ಪರಿಣಾಮ ಐಐಟಿ ಸೀಟು ರದ್ದುಗೊಂಡು ಅತುಲ್‌ನ ಐಐಟಿ ಕನಸು ಭಗ್ನವಾಗುವುದರಲ್ಲಿತ್ತು.

ಇಂಥ ಕಷ್ಟದ ಸಮಯದಲ್ಲಿ ಅಸಹಾಯಕನಾಗಿದ್ದ ಅತುಲ್‌ನ ಸಹಾಯಕ್ಕೆ ಬಂದವರು ನ್ಯಾ.ಡಿ.ವೈ. ಚಂದ್ರಚೂಡ್. ಪ್ರವೇಶದ ಅವಧಿ ಕೊನೆಗೊಂಡಿದ್ದರೂ ಪರವಾಗಿಲ್ಲ, ಅತುಲ್‌ನನ್ನು ಕಾಲೇಜಿಗೆ ಸೇರಿಸಿಕೊಳ್ಳಬೇಕು ಎಂದು ಕಾಲೇಜಿಗೆ ಸೂಚಿಸಿದರು. ಆದರೆ ಐಐಟಿ ಧನಬಾದ್ ಆಡಳಿತ 'ಪ್ರವೇಶದ ಅವಧಿ ಮುಗಿದಿದೆ' ಎಂದಿತು.

ಆದರೆ, ಮುಖ್ಯ ನ್ಯಾ. ಡಿ.ವೈ.ಚಂದ್ರಚೂಡ್ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಸಂವಿಧಾನದ ವಿಧಿ 142ರಡಿ ಪ್ರದತ್ತವಾದ 'ವಿಶೇಷ ಅಧಿಕಾರ' ಬಳಸಿ ಅತುಲ್‌ಗೆ 'ಐಐಟಿ- ಧನಬಾದ್'ನ ಬಿಟೆಕ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪ್ರವೇಶ ಸಿಗುವಂತೆ ಮಾಡಿದ್ದಾರೆ. ಯುವಕನ ಐಐಟಿ ಕನಸು ನನಸಾಗಿಸಿದ್ದಾರೆ.

> ಅತುಲ್ ಕುಮಾರ್ ಬಡ ಕುಟುಂಬದಲ್ಲೇ ಜನಿಸಿದ್ದರೂ ಪ್ರತಿಭಾವಂತನಾಗಿದ್ದಾನೆ. ಇಂಜಿನಿಯರಿಂಗ್ ಕಾಲೇಜು ಪ್ರವೇಶ ಪರೀಕ್ಷೆ ಜೆಇಇ ತೇರ್ಗಡೆಯಾಗಿದ್ದಾನೆ. ಕಾನೂನು ನೆರವು ಕೋರಿ ಮೊದಲು ಜಾರ್ಖಂಡ್, ನಂತರ ಮದ್ರಾಸ್ ಹೈಕೋರ್ಟ್ ಎಂದು ಕಂಬ ಕಂಬ ಅಲೆದಿದ್ದಾನೆ. ಕಾಲೇಜು ಪ್ರವೇಶ ಶುಲ್ಕ ಕಟ್ಟಲಾಗಲಿಲ್ಲ ಎಂಬ ಕಾರಣಕ್ಕೆ ಬಡ ಪ್ರತಿಭಾವಂತ ಯುವಕನೊಬ್ಬನ ಕನಸು ಯಾವುದೇ ಕಾರಣಕ್ಕೂ ವ್ಯರ್ಥವಾಗಬಾರದು.
>
> -ಡಿ.ವೈ.ಚಂದ್ರಚೂಡ್
> ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಮೈಸೂರು ಮಹಾನಗರಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನೀಸ & ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-8/483/2024-25 ದಿನಾಂಕ: 30-09-2024

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ ಸಂ	ವಿವರ	ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	KW-2 & KW-3	4	245.30	05.10.2024	21.10.2024	22.10.2024
2	KC-4	6	218.68	05.10.2024	21.10.2024	22.10.2024
3	KC-7	6	-	05.10.2024	21.10.2024	22.10.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಮಾಚಾರ ಸಣ್ಣದಲ್ಲ

ಕರ್ನಾಟಕ ಸಂಘಕ್ಕೆ ಶಾಸ್ತ್ರೀ ಬಣ ಆಯ್ಕೆ

ಶಿವಮೊಗ್ಗ: ನಗರದ ಪ್ರತಿಷ್ಠಿತ ಕರ್ನಾಟಕ ಸಂಘದ ಮೂರು ವರ್ಷದ ಅವಧಿಗೆ ಕಾರ್ಯಕಾರಿ ಸಮಿತಿಯ 15 ನಿರ್ದೇಶಕ ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಎಚ್.ಡಿ.ಮೋಹನ ಶಾಸ್ತ್ರಿ ಬಣದ 15 ಅಭ್ಯರ್ಥಿಗಳ ಪೈಕಿ 14 ಮಂದಿ ಜಯಗಳಿಸಿದ್ದಾರೆ. ಎದುರಾಳಿ ಕತ್ತಿಗೆ ಚೆನ್ನಪ್ಪ ಬಣದಿಂದ ಆರ್.ಎಸ್.ಹಾಲಸ್ವಾಮಿ ಮಾತ್ರ ಗೆಲುವು ಸಾಧಿಸಿದ್ದಾರೆ. 2024-25ರಿಂದ 2026-27ನೇ ಸಾಲಿನವರೆಗೆ ಕಾರ್ಯಕಾರಿ ಮಂಡಳಿಗೆ ಕರ್ನಾಟಕ ಸಂಘದ ಸಭಾಂಗಣದಲ್ಲಿ ಭಾನುವಾರ ಚುನಾವಣೆ ನಿಗದಿಯಾಗಿತ್ತು. ಬೆಳಗ್ಗೆಯಿಂದ ಮತದಾನ ನಡೆದು ಸಂಜೆ ವೇಳೆಗೆ ಫಲಿತಾಂಶ ಹೊರಬಿದ್ದಿದ್ದು ಮೋಹನ್‌ಶಾಸ್ತ್ರಿ ಬಣ ಮೇಲುಗೈ ಸಾಧಿಸಿದೆ. ಇ.ಸಿ.ಮೇರಿ ಮತ್ತು ಎಚ್.ಆರ್.ಹಾಲಸ್ವಾಮಿ ತಲಾ 87 ಮತಗಳನ್ನು ಗಳಿಸಿದ್ದರು. ಇ.ಸಿ.ಮೇರಿ ಚುನಾವಣೆಗೆ ಗೈರಾಗಿದ್ದರು. ನಂತರ ಲಾಟರಿಯಲ್ಲಿ ಹಾಲಸ್ವಾಮಿ ಅವರಿಗೆ ಅದೃಷ್ಟ ಒಲಿಯಿತು. 245 ಸದಸ್ಯರಿದ್ದು 223 ಮಂದಿ ಮತದಾನ ಮಾಡಿದ್ದರು. ಶಿವಮೊಗ್ಗ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ನಿಬಂಧಕ ಎಂ.ಸಿ.ಮಂಜುನಾಥ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ವಸತಿ ಬಡಾವಣೆ ನಿವೇಶನ ಹಂಚಿಕೆ

ಶಿವಮೊಗ್ಗ: ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರವು ಶಿವಮೊಗ್ಗ ನಗರದ ಊರಗಡೂರು ವಸತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಯ ಅರ್ಜಿಗಳನ್ನು ಹಂಚಲು ಕೊನೆಯ ದಿನಾಂಕವನ್ನು ಅ.05 ರವರೆಗೆ ವಿಸ್ತರಿಸಲಾಗಿದ್ದು, ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅ.30ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಶಿ-ಭ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಸ್ವಚ್ಛತಾ ಹಿ ಸೇವಾ ಅಭಿಯಾನ

ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಇಂದು ಸಂಜೆ 4.00ಕ್ಕೆ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಸ್ವಚ್ಛತಾ ಹಿ ಸೇವಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಸಂತೋಷ್ ಎಂ.ಎಸ್. ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಬೀರಯ್ಯಗೆ ಅಭಿನಂದನೆ

ಭದ್ರಾವತಿ: ತಾಲೂಕಿನ ಅನುದಾನ ರಹಿತ ವಿದ್ಯಾ ಸಂಸ್ಥೆಗಳ ಒಕ್ಕೂಟದ ವತಿಯಿಂದ ಡಾಕ್ಟರೇಟ್ ಗೆ ಪದವಿಗೆ ಭಾಜನರಾದ ನಗರದ ಶ್ರೀ ಸತ್ಯಸಾಯಿ ಸಮಗ್ರ ಶಿಕ್ಷಣ ಸಂಸ್ಥೆಯ ಪ್ರಭಾಕರ್ ಬೀರಯ್ಯನವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಧಾರ್ಮಿಕ, ಶೈಕ್ಷಣಿಕ, ವಿವಿಧ ಸಂಘ ಸಂಸ್ಥೆಗಳ ಹಾಗೂ ಸಮಾಜಸೇವಾ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ, ದಿ ಯೂನಿವರ್ಸಿಟಿ ಆಫ್ ಸೆಂಟ್ರಲ್ ಅಮೆರಿಕ ರವರಿಂದ ಶಿಕ್ಷಣ ಕ್ಷೇತ್ರದಲ್ಲಿನ ಪ್ರತಿಷ್ಠಿತ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ. ಡಾ.ಎಸ್. ರಾಧಾಕೃಷ್ಣನ್ ಟೀಚರ್ಸ್ ವೆಲ್ಫೇರ್ ಅಸೋಸಿಯೇಷನ್ ರವರ ಸಹಯೋಗ ದೊಂದಿಗೆ ನಗರದ ಹೊಸಮನೆ ಸೆಂಟ್ ಜೋಸೆಫ್ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಲತಾ ರಾಬರ್ಟ್, ಪ್ರಧಾನ ಕಾರ್ಯದರ್ಶಿ ಶಿವಲಿಂಗೇಗೌಡ, ಸಹಕಾರ್ಯದರ್ಶಿಗಳಾದ ಸಂತೋಷ್ .ಬಿ.ಎಂ, ದೇವರಾಜ್ ಖಜಾಂಚಿ, ನಾಗರಾಜ್, ಜಗದೀಶ್, ಪ್ರಸಾದ್, ಸುರೇಶ್ ಬಾಬು, ಚೇಲೂರಪ್ಪ, ಪರಮೇಶ್ವರಪ್ಪ, ಡಾ:ಮಲ್ಲಿಕಾರ್ಜುನ್ ಸೇರಿದಂತೆ ಪದಾಧಿಕಾರಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

ಅಪ್ರತಿಮ ಸಾಧಕರ ಪ್ರಶಸ್ತಿ ಸ್ವೀಕಾರ ಸಂತೃಪ್ತಿ

ಭದ್ರಾವತಿ: ಅಸಮಾನ್ಯ ಸಾಧಕರಾದ ಗಾನಯೋಗಿ ಪಂಡಿತ್ ಪುಟ್ಟರಾಜ್ ಗವಾಯಿ ರವರ ಸ್ಮರಣಾರ್ಥ ಬೆಂಗಳೂರಿನ ಪುಟ್ಟರಾಜ ಗವಾಯಿ ಸಂಗೀತ ಅಕಾಡೆಮಿ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಗಾನಯೋಗಿ ಪುಟ್ಟರಾಜ ಸಮ್ಮಾನ್ -2024 ಪ್ರಶಸ್ತಿ ಕಾರ್ಯಕ್ರಮಕ್ಕೆ ನ್ಯೂಟೌನ್ ಸಂಚಾರಿ ಪೊಲೀಸ್ ಠಾಣೆಯ ಹೆಡ್ ಕಾನ್ಸ್ ಟಬಲ್ ಹಸಿರುಯೋಧ ಹಾಲೇಶಪ್ಪ ಉದ್ಘಾಟಿಸಿದರು. ಅಕಾಡೆಮಿಯ ವತಿಯಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 05 ಜನರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಹಾಲೇಶಪ್ಪ ಅಪ್ರತಿಮ ಸಾಧಕರ ಹೆಸರಿನಲ್ಲಿ ನೀಡಿದ ಪ್ರಶಸ್ತಿಯನ್ನು ಸ್ವೀಕರಿಸಿದ್ದಕ್ಕೆ ತಮಗೆ ಸಂತೃಪ್ತಿ ದೊರೆತಿದೆ ಎಂದು ಮಾಧ್ಯಮಗಳಿಗೆ ಧನ್ಯವಾದಗಳನ್ನು ಹೇಳಿದರು.

{ಡಾ.ಎಚ್.ಸಿ.ಮಹದೇವಪ್ಪ} ಸಚಿವ

ಈ ಬಾರಿಯ ದಸರಾ ಮಹೋತ್ಸವಕ್ಕೆ ಅದ್ದೂರಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅ.3 ರಂದು ಚಾಮುಂಡಿಬೆಟ್ಟದಲ್ಲಿ ಬೆಳಗ್ಗೆ 9.15ರಿಂದ 9.45ರೊಳಗೆ ದಸರಾ ಉದ್ಘಾಟನೆಯಾಗಲಿದೆ. ವಸ್ತುಪ್ರದರ್ಶನ, ಆಹಾರ ಮೇಳ, ಕುಸ್ತಿ, ಚಲನಚಿತ್ರೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆಯಾಗಲಿವೆ.

ಡಿಎಲ್‌ಆರ್‌ಸಿ ಬ್ಯಾಂಕರ್ ಸಭೆ | ಸಂಸದ ಬಿ.ವೈ.ರಾಘವೇಂದ್ರ ಸೂಚನೆ

ಕೃಷಿ ಸಾಲಕ್ಕೆ ಹೆಚ್ಚಿನ ಒತ್ತು ನೀಡಿ

ಶಿವಮೊಗ್ಗ: ಕೃಷಿ ಸಾಲಕ್ಕೆ ಹೆಚ್ಚಿನ ಒತ್ತು ನೀಡಬೇಕು. ಪಿಎಂ-ವಿಶ್ವಕರ್ಮ, ಮುದ್ರಾ, ಕೃಷಿ ಯೋಜನೆಗಳು, ವಸತಿ, ಶಿಕ್ಷಣ ಸಾಲ ಸೌಲಭ್ಯ ಸೇರಿದಂತೆ ವಿವಿಧ ಯೋಜನೆಗಳನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಡಿಎಲ್‌ಆರ್‌ಸಿ ಬ್ಯಾಂಕರ್ ಸಭೆ ಹಾಗೂ ಡಿಸಿಸಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಉಪ ನಿರ್ದೇಶಕ ಸುರೇಶ್ ಮಾತನಾಡಿ, ಪಿಎಂ ಸ್ವನಿಧಿ ಸಾಲ ಯೋಜನೆಯಡಿ ಮೊದಲ ಹಂತದ ಸಾಲ ರು.10 ಸಾವಿರ ನೀಡುವಲ್ಲಿ ಶೇ75, ಎರಡನೇ ಹಂತದ ರು.20 ಸಾವಿರ ನೀಡುವಲ್ಲಿ ಶೇ.101 ಮತ್ತು ಮೂರನೇ ಹಂತದ ರು.50 ಸಾವಿರ ನೀಡುವಲ್ಲಿ ಶೇ.158 ಪ್ರಗತಿ ಸಾಧಿಸಲಾಗಿದೆ.

ಸಂಸದರು ಪ್ರತಿಕ್ರಿಯಿಸಿ, ಪಿಎಂ-ವಿಶ್ವಕರ್ಮ ಪ್ರಧಾನ ಮಂತ್ರಿಯವರ ಮಹಾತ್ವಾಕಾಂಕ್ಷಿ ಯೋಜನೆಯಾಗಿದ್ದು, ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಮಂಜೂರಾದ ಎಷ್ಟು ಫಲಾನುಭವಿಗಳಿಗೆ ತರಬೇತಿ ಆಗಿದೆ. ಯಾವ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗಿದೆ. ಹಾಗೂ ಬ್ಯಾಂಕುಗಳಲ್ಲಿ ಶೇ.50 ರಷ್ಟು ಅರ್ಜಿಗಳು ತಿರಸ್ಕೃತವಾಗಲು ಕಾರಣ ಏನೆಂದು ಒಂದು ವಾರದೊಳಗೆ ಮಾಹಿತಿ ನಿಡಬೇಕು ಎಂದು ಸೂಚನೆ ನೀಡಿದರು.

ಹಾಗೂ ಗೋವಿಂದಾಪುರದಲ್ಲಿ ವಸತಿ ಯೋಜನೆಯಡಿ ಕೆನರಾ ಬ್ಯಾಂಕ್, ಎಸ್‌ಬಿಐ ಸೇರಿದಂತೆ ಸಾಲಕ್ಕೆ 390 ಅರ್ಜಿಗಳು ಬಾಕಿ ಇದ್ದು, ಬ್ಯಾಂಕುಗಳು ದಸರಾ ಹಬ್ಬದೊಳಗೆ ಅವುಗಳನ್ನು ವಿಲೇ ಮಾಡಬೇಕು. ಆಯುಧ ಪೂಜೆಯಂದು ವಸತಿ ಸಾಲ ಸೌಲಭ್ಯವನ್ನು ವಿತರಣೆ ಮಾಡೋಣ ಎಂದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಡಿಎಲ್‌ಆರ್‌ಸಿ ಬ್ಯಾಂಕರ್ ಸಭೆ ಹಾಗೂ ಡಿಸಿಸಿ ಸಭೆ ನಡೆಯಿತು.

ಸಂಸದರು, ಬ್ಯಾಂಕುಗಳಲ್ಲಿ ಬಾಕಿ ಇರುವ ಪಿಎಂ-ಸ್ವನಿಧಿ, ಮುದ್ರಾ, ಸ್ಟ್ಯಾಂಡ್ ಅಪ್, ಪಿಎಂಎಫ್‌ಎಂಇ ಯೋಜನೆಯ ಅರ್ಜಿಗಳನ್ನು ಪರಿಶೀಲಿಸಿ ಶೀಘ್ರದಲ್ಲೇ ವಿಲೇವಾರಿ ಮಾಡುವಂತೆ ಹಾಗೂ ಪಿಎಂ-ಸುರಕ್ಷ ಬಿಮಾ ಯೋಜನೆಯ ಗುರಿಯನ್ನು ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುಬೇಕು. ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ ನೀಡುವಲ್ಲಿ, ಫೈನಾನ್ಶಿಯಲ್ ಲಿಟರೆಸಿ ಕ್ಯಾಂಪ್ ನಡೆಸುವಲ್ಲಿ ಬ್ಯಾಂಕುಗಳು ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆನರಾ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಡಿಜಿಎಂ ದೇವರಾಜ್ ಆರ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯು ಸಿಡಿ ಅನುಪಾತದಲ್ಲಿ ಸುಧಾರಣೆ ಕಂಡಿದೆ. ಶೇ.75.82 ರಿಂದ ಶೇ.80.11 ವರೆಗೆ ಸುಧಾರಣೆ ಆಗಿದೆ. ಕೃಷಿ ಕ್ಷೇತ್ರದಲ್ಲಿ ಈ ಮಾಹೆವರೆಗೆ ಶೇ.31.71, ಎಂಎಸ್‌ಎಂಇ ಶೇ.42.84, ಶಿಕ್ಷಣ ಸಾಲ ಶೇ.13.60 ವಸತಿ ಶೇ.28.77, ಒಟ್ಟಾರೆ ಆದ್ಯತಾ ಮತ್ತು ಆದ್ಯತಾ ರಹಿತ ವಲಯದಲ್ಲಿ ಶೇ.36.96 ಪ್ರಗತಿ ಸಾಧಿಸಿದ್ದು, ವಿಶ್ವಕರ್ಮ, ಕೃಷಿ, ಶಿಕ್ಷಣ ಇತರೆ ಕ್ಷೇತ್ರಗಳಲ್ಲಿ ಬಾಕಿ ಇರುವ ಅರ್ಜಿಗಳನ್ನು ಬ್ಯಾಂಕುಗಳು ಶೀಘ್ರವಾಗಿ ವಿಲೇವಾರಿ ಮಾಡಬೇಕೆಂದು ತಿಳಿಸಿದರು.

ಪಿಎಂ-ವಿಶ್ವಕರ್ಮ ಯೋಜನೆಯಡಿ ಒಟ್ಟು 85223 ಅರ್ಜಿಗಳನ್ನು ಸ್ವೀಕರಿಸಿದ್ದು 65305 ಅರ್ಜಿಗಳನ್ನು ಮೊದಲನೆ ಹಂತದಲ್ಲಿ, 16979 ಗಳನ್ನು ಎರಡನೇ ಹಂತದಲ್ಲಿ ಹಾಗೂ ಮೂರನೇ ಹಂತದಲ್ಲಿ 13920 ಅರ್ಜಿಗಳನ್ನು ಶಿಫಾರಸು ಮಾಡಲಾಗಿದೆ. ಬ್ಯಾಂಕುಗಳಲ್ಲಿ 3882 ಅರ್ಜಿಗಳು ಸ್ವೀಕೃತವಾಗಿದ್ದು 2007 ಮಂಜೂರಾಗಿದೆ. 1507 ಅರ್ಜಿಗಳು ತಿರಸ್ಕೃತಗೊಂಡಿವೆ.
- ಬಿ.ವೈ.ರಾಘವೇಂದ್ರ, ಸಂಸದ

ಸಂಸದರು, ಸರ್ಕಾರದ ಯೋಜನೆಗಳನ್ನು ರೈತರಿಗೆ ನೀಡುವಾಗ ಬ್ಯಾಂಕುಗಳು ಓಟಿಎಸ್ ಮಾಡದಂತೆ ಕ್ರಮ ವಹಿಸಬೇಕು. ರೈತರಿಗೆ, ಫಲಾನುಭವಿಗಳಿಗೆ ತೊಂದರೆ ನೀಡಬಾರದು. ಡಿಸಿಸಿ ಬ್ಯಾಂಕು ಸೊಸೈಟಿಗಳಿಗೆ ಸಮನಾಗಿ ಸಾಲ ವಿತರಣೆ ಮಾಡಬೇಕು.

ಲೀಡ್ ಬ್ಯಾಂಕ್ ಮ್ಯಾಜೇಜರ್ ಬಿ.ಚಂದ್ರಶೇಖರ್ , ವೆಂಕಟರಾಮ್, ನಬಾರ್ಡ್ ಡಿಡಿಎಂ ಶರತ್ ಗೌಡ ಪಿ, ಬ್ಯಾಂಕುಗಳ ಮುಖ್ಯಸ್ಥರುಗಳು ಹಾಜರಿದ್ದರು.

ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ

ಶಿವಮೊಗ್ಗ: ಕಾಂಗ್ರೆಸ್ ಪಕ್ಷದ 29ನೇ ಬೆಳಗಾವಿ ಅಧಿವೇಶನಕ್ಕೆ 100 ವರ್ಷ ತುಂಬಿದ್ದು, ಇದರ ಅಂಗವಾಗಿ ಕೆಪಿಸಿಸಿ ಆದೇಶದಂತೆ ಗಾಂಧಿ ಭಾರತ ಹೆಸರಿನಲ್ಲಿ ಒಂದು ವರ್ಷದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿಯ ಸೂಚನೆ ಮೇರೆಗೆ ಅ. 2ರಿಂದ ಮುಂದಿನ ವರ್ಷದ ಅ. 2ರವರೆಗೆ ಒಂದು ವರ್ಷ ವಿವಿಧ ಕಾರ್ಯಕ್ರಮಗಳನ್ನು ಗ್ರಾಪಂ, ಜಿಲ್ಲಾ ಮತ್ತು ತಾಲೂಕು ಹಾಗೂ ವಾರ್ಡ್ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಅ. 2ರಂದು ಶಿವಮೊಗ್ಗದಲ್ಲಿಯೂ ಕೂಡ ಚಾಲನೆ ನೀಡಲಾಗುವುದು ಎಂದರು.

ಅಂದು ಬೆಳಗ್ಗೆ 9.30ಕ್ಕೆ ಶಿವಪ್ಪನಾಯಕ ಪ್ರತಿಮೆಯಿಂದ ಗೋಪಿ ವೃತ್ತದ ಮಾರ್ಗವಾಗಿ ಕಾಂಗ್ರೆಸ್ ಕಚೇರಿವರೆಗೆ ಗಾಂಧಿ ನಡಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ನಂತರ ಬೆಳಗ್ಗೆ 10 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಮುಖ್ಯವಾಗಿ ಬೆಂಗಳೂರಿನ ಕೇಂದ್ರ ಕಚೇರಿಯಿಂದ ನಡೆಯುವ ಕಾರ್ಯಕ್ರಮದ ನೇರ ಪ್ರಸಾರವನ್ನು ಎಲ್‌ಇಡಿ ಪರದೆ ಮೂಲಕ ಪ್ರದರ್ಶಿಸಲಾಗುವುದು ಎಂದರು.

ಅ. 2ರಂದು ಜಿಲ್ಲಾ ಕೇಂದ್ರಗಳು ಸೇರಿದಂತೆ ತಾಲೂಕು, ಹೋಬಳಿ, ಗ್ರಾಪಂ ಮಟ್ಟಗಳಲ್ಲೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಯಾ ವಾರ್ಡ್‌ಗೆ ಸಂಬಂಧಿಸಿದಂತೆ ಕನಿಷ್ಟ ಒಂದು ಕಿಮೀ ಪಾದಯಾತ್ರೆ ಕೈಗೊಳ್ಳಲಾಗಿದೆ. ಈ ಗಾಂಧಿ ನಡಿಗೆ ಪಾದಯಾತ್ರೆಯಲ್ಲಿ ಪಕ್ಷದ ಧ್ವಜವನ್ನು ಹಿಡಿದುಕೊಳ್ಳುವುದಿಲ್ಲ.ಈ ಕಾರ್ಯಕ್ರಮ ಆಯೋಜಿಸಲು ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ವಿಧಾನಪರಿಷತ್ ಸದಸ್ಯರು ಸಹಕಾರ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಈಗಾಗಲೇ ಪಕ್ಷದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಚಂದ್ರಭೂಪಾಲ್, ಕಲಗೋಡು ರತ್ನಾಕರ್, ಎಸ್.ಟಿ. ಹಾಲಪ್ಪ, ಜಿ.ಡಿ. ಮಂಜುನಾಥ್, ಕಲೀಂ ಪಾಶ, ಶಿವಕುಮಾರ್, ಯು. ಶಿವಾನಂದ್, ತಾನಾಜಿ, ಜಾವೀದ್, ಶಿ.ಜು. ಪಾಶ. ಜಿ. ಪದ್ಮನಾಭ್ ಮೊದಲಾದವರಿದ್ದರು.

ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆ

ಹೊಸನಗರ: ಮನುಷ್ಯ ಎಷ್ಟೇ ದುಡಿದರೂ ಆರೋಗ್ಯ ಸರಿಯಿಲ್ಲದಿದ್ದರೇ ಎನೂ ಪ್ರಯೋಜನ ಎಂದು ಹೊಸನಗರ ತಾಲೂಕು ವೈದ್ಯಾಧಿಕಾರಿ ಡಾ. ಗುರುಮೂರ್ತಿಯವರು ಹೇಳಿದರು.

ಹೊಸನಗರದ ಸರಕಾರಿ ಸಾರ್ವಜನಿಕ ಆಸ್ವತ್ರೆಯ ಆವರಣದಲ್ಲಿ ಪಟ್ಟಣ ಪಂಚಾಯಿತಿ ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರವನ್ನು ಎರ್ಪಡಿಸಲಾಗಿದ್ದು ಆರೋಗ್ಯ ತಪಾಸಣೆ ನಡೆಸಿ ಮಾತನಾಡಿದರು.

ಹಿಂದಿನ ದಿನದಲ್ಲಿ ನಾವು ತಿನ್ನುವ ಆಹಾರದಲ್ಲಿ ಪೋಷ್ಟಿಕಾಂಶ ಇರುತ್ತಿತ್ತು ಆದರೆ ಇತ್ತಿಚೇನ ದಿನದಲ್ಲಿ ಪ್ರತಿಯೊಬ್ಬರಿಗೂ ಪೋಷ್ಟಿಕಾಂಶದ ಕೊರತೆ ಕಾಣುತ್ತಿದ್ದೇವೆ ಮನುಷ್ಯರಿಗೆ ಲೀವರ್ ಪ್ರಮುಖ ಅಂಗವಾಗಿದ್ದು ಆದರೆ ಕುಡಿಯುವ ಚಟವಿರುವವರ ಲಿವರ್ ಹಾನಿಯಾಗುತ್ತಿದೆ ನಮ್ಮ ಆರೋಗ್ಯವನ್ನು ನಾವು ಕಂಡುಕೊಳ್ಳಬೇಕು ಎಂದರು. ಈ ಆರೋಗ್ಯ ಶಿಬಿರಾದಲ್ಲಿ ಡಾ. ಹೇಮಾಂತ್ ಎಲ್ಲ ಪೌರ ಕಾರ್ಮಿಕರನ್ನು ತಪಾಸಣೆ ನಡೆಸಿದರು.

ಮುಖ್ಯ ಅತಿಥಿಯಾಗಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಉಮೇಶ್ ಎಸ್ ಗುಡ್ಡದ್, ಪಟ್ಟಣ ಪಂಚಾಯತಿ ಆರೋಗ್ಯಾಧಿಕಾರಿ ಶೃತಿ, ಪಟ್ಟಣ ಪಂಚಾಯತಿ ಅದ್ಯಕ್ಷ ನಾಗಪ್ಪ, ಉಪಾಧ್ಯಕ್ಷೆ ಚಂದ್ರಕಲಾ ನಾಗರಾಜ್, ನೇತ್ರಾ ಸುಬ್ರಾಯಭಟ್, ಶಾಹಿನ, ಸಿಂಥೀಯ, ಉಮೇಶ್, ಜಯನಗರ ಗುರು ಹಾಗೂ 29ಜನ ಪೌರ ನೌಕರರು ಉಪಸ್ಥಿತರಿದ್ದು ಎಲ್ಲರೂ ಆರೋಗ್ಯ ತಪಾಸಣೆ ಮಾಡಿಕೊಂಡರು.

ಹೊಸನಗರದ ಸರ್ಕಾರಿ ಸಾರ್ವಜನಿಕ ಆಸ್ವತ್ರೆಯ ಆವರಣದಲ್ಲಿ ಪಟ್ಟಣ ಪಂಚಾಯತಿ ಪೌರ ನೌಕರರಿಗೆ ಆರೋಗ್ಯ ತಪಾಸಣೆ ನಡೆಸುತ್ತಿರುವುದು ಮತ್ತು ಗುರುಮೂರ್ತಿಯವರು ಮಾತನಾಡುತ್ತಿರುವುದು.

40ವರ್ಷ ಮೇಲ್ಪಟ್ಟ ಮಹಿಳೆಯರು ಪ್ರತಿ ವರ್ಷ ಆರೋಗ್ಯ ತಪಾಸಣೆ ಮಾಡಿಕೊಳ್ಳುತ್ತಿರಬೇಕು ಇತ್ತಿಚ್ಚಿನ ಕಾಯಿಲೆಗಳು ಕಣ್ಣಿಗೆ ಕಾಣದಂತೆ ಬರುತ್ತಿದೆ ಕೊನೆಯ ಹಂತಕ್ಕೆ ತಲುಪಿದಾಗ ಮಾತ್ರ ತಿಳಿಯುತ್ತದೆ ಪ್ರತಿಯೊಬ್ಬರು ಪುರುಷ ಮತ್ತು ಮಹಿಳೆಯರು 40ವರ್ಷದ ನಂತರ ಬಿ.ಪಿ ಶುಗರ್ ಇತ್ಯಾದಿ ಕಾಯಿಲೆಗಳನ್ನು ತಪಾಸಣೆ ಮಾಡಿಸಿಕೊಳ್ಳುತ್ತಿರಬೇಕು.
- ಡಾ. ಗುರುಮೂರ್ತಿ, ವೈದ್ಯಾಧಿಕಾರಿ

'ಶಿವಮೊಗ್ಗ ಹಬ್ಬ' ಯಶಸ್ವಿಗೊಳಿಸಲು ಮನವಿ

ಶಿವಮೊಗ್ಗ: ಪ್ರವಾಸೋದ್ಯಮ ಹಾಗೂ ಜಿಲ್ಲೆಯ ಉದ್ಯಮಿಗಳ ಪ್ರೋತ್ಸಾಹಿಸುವ ದೃಷ್ಟಿಯಿಂದ ಆಯೋಜಿಸಲಿರುವ ಶಿವಮೊಗ್ಗ ಹಬ್ಬ ಯಶಸ್ವಿಗೊಳಿಸಿ ಎಂದು ಮೈಸೂರು ಸಂಸ್ಥಾನದ ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಜಯಚಾಮರಾಜ ಒಡೆಯರ್ ಹೇಳಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್.ಶಂಕರಮೂರ್ತಿ ನಿವಾಸದಲ್ಲಿ ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ನೂತನ ಪದಾಧಿಕಾರಿಗಳೊಂದಿಗೆ ಸಮಾಲೋಚಿಸಿ ಮಾತನಾಡಿದ ಅವರು, ಶಿವಮೊಗ್ಗ ಹಬ್ಬ ಒಳ್ಳೆಯ ಅಲೋಚನೆ ಆಗಿದ್ದು, ಉತ್ತಮವಾಗಿ ಆಯೋಜಿಸಿ ಎಂದು ತಿಳಿಸಿದರು.

ಪ್ರಸ್ತುತ ಶಿವಮೊಗ್ಗ ಜಿಲ್ಲೆಯ ವಾಣಿಜ್ಯ ಮತ್ತು ಕೈಗಾರಿಕಾ ಪ್ರಗತಿಯ ಬಗ್ಗೆ ಹಾಗೂ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು. ವಾಣಿಜ್ಯ ಮತ್ತು ಕೈಗಾರಿಕಾ ಸಂಘಕ್ಕೆ ಆಯ್ಕೆಯಾಗಿರುವ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು.

ವಿಶೇಷವಾಗಿ ಉದ್ಯಮಿಗಳಿಗೆ ಪ್ರೋತ್ಸಾಹಿಸಲು ಹಾಗೂ ಪ್ರವಾಸೋದ್ಯಮಕ್ಕೆ ಪೂರಕ ಚಟುವಟಿಕೆ ನಡೆಸುವ ದೃಷ್ಟಿಯಿಂದ ಮರ್ನಾಲ್ಕು ತಿಂಗಳಲ್ಲಿ ಶಿವಮೊಗ್ಗ ಹಬ್ಬ ಆಯೋಜಿಸಲು ಉದ್ದೇಶಿಸಲಾಗಿದೆ. ಇ-ವೇಸ್ಟ್ ಮ್ಯಾನೇಜ್‌ಮೆಂಟ್ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ರಾಜವಂಶಸ್ಥ, ಸಂಸದ ಯದುವೀರ ಕೃಷ್ಣದತ್ತ ಜಯಚಾಮರಾಜ ಒಡೆಯರ್ ಅವರನ್ನು ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದಿಂದ ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್, ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜಿ.ವಿಜಯಕುಮಾರ್, ಕಾರ್ಯದರ್ಶಿ ಎ.ಎಂ.ಸುರೇಶ್, ಜಂಟಿ ಕಾರ್ಯದರ್ಶಿ ಕೆ.ಎಸ್.ಸುಕುಮಾರ್, ಖಜಾಂಚಿ ಆರ್.ಮನೋಹರ್, ಲಕ್ಷ್ಮೀದೇವಿ ಗೋಪಿನಾಥ್, ಪಿ. ರುದ್ರೇಶ್ ಉಪಸ್ಥಿತರಿದ್ದರು.

ಸಂಸದ ಯದುವೀರ ಕೃಷ್ಣದತ್ತ ಜಯಚಾಮರಾಜ ಒಡೆಯರ್ ಅವರನ್ನು ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದಿಂದ ಸನ್ಮಾನಿಸಲಾಯಿತು.

ನೂತನ ಆಡಳಿತ ಮಂಡಳಿಯು ಶಿವಮೊಗ್ಗ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಆಲೋಚನೆ ನಡೆಸಲಾಗಿದ್ದು, ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯಲಾಗುವುದು.
- ಬಿ.ಗೋಪಿನಾಥ್, ಅಧ್ಯಕ್ಷ

ಹೃದಯ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ

ಹೃದಯ ದಿನದ ಪ್ರಯುಕ್ತ ಯೂತ್ ಹಾಸ್ಟೆಲ್ ಮತ್ತು ಶಿವಮೊಗ್ಗ ಸೈಕಲ್ ಕ್ಲಬ್ ಆಯೋಜಿಸಿದ್ದ ಜಾಥಾಕ್ಕೆ ಚಾಲನೆ ನೀಡಲಾಯಿತು.

ಶಿವಮೊಗ್ಗ: ಸೈಕಲ್ ಅಭ್ಯಾಸ ಮಾಡುವುದರಿಂದ ಹೃದಯ ಸಂಬಂಧಿ ಕಾಯಿಲೆ ಸೇರಿದಂತೆ ಅನೇಕ ಕಾಯಿಲೆಗಳನ್ನು ದೂರ ಇಡಲು ಸಾಧ್ಯವಿದ್ದು, ಸೈಕಲ್ ಅಭ್ಯಾಸವು ಜನಸಾಮಾನ್ಯರ ವ್ಯಾಯಾಮ ಶಾಲೆಯಾಗಿದೆ ಎಂದು ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಮಾಜಿ ಅಧ್ಯಕ್ಷ ಎನ್. ಗೋಪಿನಾಥ್ ಹೇಳಿದರು.

ಹೃದಯ ದಿನದ ಪ್ರಯುಕ್ತ ಯೂತ್ ಹಾಸ್ಟೆಲ್ ಮತ್ತು ಶಿವಮೊಗ್ಗ ಸೈಕಲ್ ಕ್ಲಬ್ ಆಯೋಜಿಸಿದ್ದ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ಯೂಸ್ ಹಾರ್ಟ್ ಫಾರ್ ಆಕ್ಷನ್ ಈ ವರ್ಷದ ಧ್ಯೇಯವಾಕ್ಯ. ನಿತ್ಯ ಯೋಗ, ವ್ಯಾಯಾಮ, ಧ್ಯಾನದಿಂದ, ಸದಾ ಚಟುವಟಿಕೆಯಿಂದ ಇರುವುದರಿಂದ ಅಪಾಯ ಕಡಿಮೆ ಮಾಡಲು ಸಾಧ್ಯ. ಹೃದಯ ಸಮಸ್ಯೆ ಬಾರದಂತೆ ತಡೆಯೋಡ್ಡುವುದು ಜಾಣತನ. ಪ್ರತಿ ದಿನ ಸೈಕಲ್ ತುಳಿಯುವುದರಿಂದ ಎಲ್ಲರೂ ಆರೋಗ್ಯವಂತರಾಗಲು ಸಾಧ್ಯ ಎಂದು ತಿಳಿಸಿದರು.

ತರುಣೋದಯ ಘಟಕದ ಚೇರ್ಮನ್ ಎಸ್.ಎಸ್. ವಾಗೇಶ್ ಮಾತನಾಡಿ, ಶಿವಮೊಗ್ಗ ಸೈಕಲ್ ಕ್ಲಬ್ ಹಲವಾರು ಸಂಘ ಸಂಸ್ಥೆಗಳ ಜೊತೆಗೂಡಿ ಸಾಕಷ್ಟು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸಾಕಷ್ಟು ಜನ ಗಿನ್ನೆಸ್ ದಾಖಲೆ ಪಡೆದ ಸೈಕ್ಲಿಸ್ಟ್ ಗಳು ತಂಡದಲ್ಲಿರುವುದು ವಿಶೇಷವಾಗಿದೆ ಎಂದು ಹೇಳಿದರು.

ಸೈಕಲ್ ಕ್ಲಬ್ ಅಧ್ಯಕ್ಷ ಶ್ರೀಕಾಂತ್, ಕಾರ್ಯದರ್ಶಿ ಗಿರೀಶ್ ಕಾಮತ್, ಸಂಚಾಲಕ ಹರೀಶ್ ಪಾಟಿಲ್, ಯೂತ್ ಹಾಸ್ಟೆಲ್ಸ್ ಕಾರ್ಯದರ್ಶಿ ಸುರೇಶ್ ಕುಮಾರ್, ನರಸಿಂಹಮೂರ್ತಿ, ಪ್ರಕಾಶ್, ಮಲ್ಲಿಕಾರ್ಜುನ್ ಕಾನೂರು, ನೂರಕ್ಕಿಂತ ಹೆಚ್ಚು ಸೈಕಲ್ ಪಟುಗಳು ಭಾಗವಹಿಸಿದ್ದರು.

ಶಿವಮೊಗ್ಗದಲ್ಲಿ ಅತ್ಯುತ್ತಮ ಉದ್ಯಮ ಸ್ಥಾಪಿಸಿ ನಗರದ ಮನೆ ಮಾತಾಗಿರುವ ಗೋಪಿನಾಥ್ ಅವರ ಕಾರ್ಯ ಮೆಚ್ಚಿ ಅವರ ಅಭಿಮಾನಿಗಳು ವರ್ಷಪೂರ್ತಿ ಸಂಭ್ರಮದಲ್ಲಿ ಭಾಗಿಯಾಗುತ್ತಿದ್ದಾರೆ. ಈ ದಿನ ಶಿವಮೊಗ್ಗ ಸೈಕಲ್ ಕ್ಲಬ್ ನಮ್ಮ ಕಾರ್ಯಕ್ರಮದ ಜತೆ ಕೈ ಜೋಡಿಸುತ್ತಿರುವುದು ಸಂತೋಷ ತಂದಿದೆ.
- ವಸಂತ ಹೋಬಳಿದಾರ್, ಅಧ್ಯಕ್ಷ

ಸಮಯ ಪ್ರಜ್ಞೆ, ನಾಯಕತ್ವ ಗುಣ ಬೆಳೆಸಿಕೊಳ್ಳಿ

ಶಿಕಾರಿಪುರ: ಗ್ರಾಮೀಣ ಪ್ರದೇಶದ ಜನರ ಜೀವನ ಕ್ರಮ ಅರಿಯುವ ಜತೆಗೆ ಶಿಸ್ತು, ಭಾತೃತ್ವ, ಸಂಯಮ, ಸಮಯ ಪ್ರಜ್ಞೆ ಹಾಗೂ ನಾಯಕತ್ವ ಗುಣ ಬೆಳೆಸಿಕೊಳ್ಳಲು ಎನ್‌ಎಸ್‌ಎಸ್ ಸಹಕಾರಿಯಾಗಿದೆ ಎಂದು ಶಿಕಾರಿಪುರ ವಿರಕ್ತಮಠದ ಶ್ರೀ ಚನ್ನಬಸವ ಸ್ವಾಮೀಜಿ ಹೇಳಿದರು.

ತಾಲೂಕಿನ ಈಸೂರು ಗ್ರಾಮದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ರಂಗಮಂದಿರದಲ್ಲಿ ಶ್ರೀ ಸಿಗಂದೂರೇಶ್ವರಿ ಎಜುಕೇಶನ್ ಟ್ರಸ್ಟ್ ನ ಉಳ್ಳೂರಿನ ಸಾಗರ ಗಂಗೋತ್ರಿ ಶಿಕ್ಷಣ ಮಹಾವಿದ್ಯಾಲಯ ವತಿಯಿಂದ ಹಮ್ಮಿಕೊಂಡ ಪೌರತ್ವ ತರಬೇತಿ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎನ್‌ಎಸ್‌ಎಸ್ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಈಸೂರಿನ ಜನ ಐಕ್ಯತೆಯಿಂದ ಮುನ್ನಡೆದಾಗ ಗ್ರಾಮದ ಅಭಿವೃದ್ಧಿ ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ ಮತ್ತು ಸ್ಥಳೀಯ ಜನಪ್ರತಿನಿಧಿಗಳು ಈಸೂರು ಗ್ರಾಮವು ರಾಷ್ಟ್ರದಲ್ಲಿಯೇ ಮಾದರಿ ಗ್ರಾಮವನ್ನಾಗಿಸುವ ನಿಟ್ಟಿನಲ್ಲಿ ಗಮನ ನೀಡಬೇಕು ಎಂದರು.

ರೈತ ಹೋರಾಟ ಮತ್ತು ರೈತ ಚಳುವಳಿ ಕುರಿತು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ಮಾತನಾಡಿ, ಜಿಲ್ಲೆಯು ಹಲವು ಹೋರಾಟಗಳಿಗೆ ಮುನ್ನುಡಿ ಬರೆದಿದೆ. ರೈತ ಸಮುದಾಯ ಒಗ್ಗಟ್ಟಿನಿಂದ ಇದ್ದಾಗ ಮಾತ್ರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿದೆ. ರೈತರು ಅತಿವೃಷ್ಟಿ ಅನಾವೃಷ್ಟಿಯಿಂದ ಬಳಲುತ್ತಿದ್ದಾರೆ. ಬೆಳೆಗಳಿಗೆ ಸಮರ್ಪಕವಾದ ಬೆಂಬಲ ಬೆಲೆ ದೊರೆಯದೆ ರೈತರು ನಲುಗಿ ಹೋಗಿದ್ದಾರೆ. ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರಕಾರ ರೈತರ ಹಿತಕಾಯಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಎಂ.ಪಿ. ವಿಜಯಕುಮಾರ್ ಮಾತನಾಡಿ, ಈಸೂರು ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರ ಆಯೋಜನೆ ಮಾಡಿದ ಸಂದರ್ಭದಿಂದಲೂ ಗ್ರಾಮಸ್ಥರು ಉತ್ತಮವಾದ ಸಹಕಾರ ನೀಡುತ್ತಿದ್ದಾರೆ. ಕಿತ್ತೂರಿನ ಸಂಗೊಳ್ಳಿ ರಾಯಣ್ಣ ರಾಕ್ ಗಾರ್ಡನ್ ಮಾದರಿಯಲ್ಲಿ ಈಸೂರಿನಲ್ಲಿ ಹೋರಾಟಗಾರರ ಪಾರ್ಕ್ ನಿರ್ಮಾಣಮಾಡಬೇಕು ಎಂದರು.

ಶಿವ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ. ಗಂಗಾಧರಪ್ಪ, ಜಾನಪದ ಕಲಾವಿದ ಬಿ. ಶಿವಪ್ಪ, ಗ್ರಾಪಂ ಸದಸ್ಯ ಮಂಜಪ್ಪ, ಮಾಜಿ ಸದಸ್ಯ ಡಿ. ನಾಗರಾಜಪ್ಪ ಬಡಗಿ, ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕಿ ಕೆ. ಪುಷ್ಪಾ ಸೇರಿದಂತೆ ಗ್ರಾಮಸ್ಥರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿಗಳಾದ ಅಶ್ವಿನಿ ಪ್ರಾರ್ಥಿಸಿ, ಎಚ್.ಎಸ್. ಮಂಜುನಾಥ್ ಸ್ವಾಗತಿಸಿ, ಚಲುವರಾಜ್ ವಂದಿಸಿ, ಪ್ರಜ್ವಲ್ ನಿರೂಪಿಸಿದರು.

ಗ್ರಾಮದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ರಂಗಮಂದಿರದಲ್ಲಿ ಉಳ್ಳೂರಿನ ಸಾಗರ ಗಂಗೋತ್ರಿ ಶಿಕ್ಷಣ ಮಹಾವಿದ್ಯಾಲಯ ವತಿಯಿಂದ ಹಮ್ಮಿಕೊಂಡ ಎನ್‌ಎಸ್‌ಎಸ್ ಶಿಬಿರದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಿಕಾರಿಪುರ ವಿರಕ್ತಮಠದ ಶ್ರೀ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ದೇಶದಲ್ಲಿಯೇ ಮೊದಲು ತ್ರಿವರ್ಣ ಧ್ವಜ ಹಾರಿದ ಈಸೂರು ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ದೇಶದಲ್ಲೇ ಎತ್ತರದ ಧ್ವಜ ಸ್ಥಂಭ ನಿರ್ಮಾಣವಾಗಬೇಕು. ದೇಶದ ಮೊದಲ ಸ್ವಾತಂತ್ರ್ಯ ಗ್ರಾಮಕ್ಕೆ ಈವರೆಗೂ ಯಾವುದೇ ಪ್ರಧಾನಿ ಭೇಟಿ ನೀಡಿಲ್ಲ, ಆದ್ದರಿಂದ ಪ್ರಧಾನಿ ನರೇಂದ್ರ ಮೋದಿಯವರು ಭೇಟಿ ನೀಡಬೇಕು.
-ಜೆ.ಎಸ್. ಚಿದಾನಂದಗೌಡ, ಹೋರಾಟಗಾರ

ಅ.3ಕ್ಕೆ 'ಲಂಕಾ ದಹನ' ಯಕ್ಷಗಾನ ಪ್ರಸಂಗ

ಶಿವಮೊಗ್ಗ: ಮಹಾನಗರ ಪಾಲಿಕೆ, ಸಾಂಸ್ಕೃತಿಕ ದಸರಾ ಸಮಿತಿ ವತಿಯಿಂದ ಯಕ್ಷ ದಸರಾ ಅಂಗವಾಗಿ ಅ. 3ರಂದು ಸಂಜೆ 6 ಗಂಟೆಗೆ ಕುವೆಂಪು ರಂಗಮಂದಿರದಲ್ಲಿ ಎರಡು ಯಕ್ಷಗಾನ ಪ್ರಸಂಗಗಳನ್ನು ಆಯೋಜಿಸಲಾಗಿದೆ. 6 ಗಂಟೆಗೆ ನಾಟ್ಯಶ್ರೀ ಕಲಾತಂಡ ಶಿವಮೊಗ್ಗ ಹಾಗೂ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ಲಂಕಾದಹನ ಕಥಾಪ್ರಸಂಗ ನಡೆಯಲಿದ್ದು, ಇದರ ಹಿಮ್ಮೇಳದಲ್ಲಿ ಕೇಶವ ಹೆಗಡೆ ಕೊಳಗಿ, ಮಂಜುನಾಥ ಗುಡ್ಡೆದಿಂಬ, ಗಣೇಶಭಟ್ ಕೆರೆಕೈ ಇದ್ದರೆ, ಮುಮ್ಮೇಳದಲ್ಲಿ ವಿ. ದತ್ತಮೂರ್ತಿ ಭಟ್, ಅಶೋಕ್ ಭಟ್ ಸಿದ್ದಾಪುರ, ಶಶಾಂಕ್ ಪಟೇಲ್ ಬ್ರಹ್ಮಾವರ, ವೆಂಕಟೇಶ್ ಬಗರಿಮಕ್ಕಿ, ಶಿವು ಶಿರಳಗಿ, ಅವಿನಾಶ್ ಕೊಪ್ಪ ಇರುತ್ತಾರೆ. ಹಾಗೆಯೇ ರಾತ್ರಿ 8 ಗಂಟೆಗೆ ಶ್ರೀ ಮಹಾಗಣಪತಿ ಯಕ್ಷಗಾನ ಕಲಾಬಳಗದಿಂದ ಸುದರ್ಶನ ವಿಜಯ ಪ್ರಸಂಗ ನಡೆಯಲಿದೆ. ಹಿಮ್ಮೇಳದಲ್ಲಿ ನಾಗರಾಜರವ್ ಮಗಳ್ಳೆ, ಮಂಜುನಾಥ್ ಗುಡ್ಡೆದಿಂಬ, ಗಣೇಶ್ ಕೆರೆಕೈ, ಶ್ರೀಶ ಐತುಮನೆ, ಮುಮ್ಮೇಳದಲ್ಲಿ ಸಂಜಯ ಬೆಳೆಯೂರು, ಮಹಾಬಲೇಶ್ವರ ಗೌಡ, ಪ್ರಣವ್ ಭಟ್, ರಾಮಚಂದ್ರ ಕಾರ್ಗಲ್, ರಮೇಶ್ ಐತುಮನೆ, ಕಾವ್ಯ ಶಿವಮೊಗ್ಗ, ಕೀರ್ತಿ ಶಿವಮೊಗ್ಗ, ಗುರುಮೂರ್ತಿ ಶಿವಮೊಗ್ಗ ಇರುವರು. ಯಕ್ಷಗಾನ ಪ್ರಸಂಗಗಳನ್ನು ರಾಜ್ಯ ಪ್ರಶಸ್ತಿ ಪುರಸ್ಕೃತ ಎಂ.ಕೆ. ರಮೇಶಾಚಾರ್ಯ ಉದ್ಘಾಟಿಸುವರು. ಶಾಸಕ ಎಸ್.ಎನ್. ಚನ್ನಬಸಪ್ಪ ಮೊದಲಾದ ಗಣ್ಯರು ಭಾಗವಹಿಸಲಿದ್ದಾರೆ.

'ಆಯೋಗದ ವರದಿ ಸಚಿವ ಸಂಪುಟದ ಮುಂದಿಟ್ಟು ಚರ್ಚಿಸಲಿ | ಮಾಜಿ ಡಿಸಿಎಂ ಈಶ್ವರಪ್ಪ ಆಗ್ರಹ

ಜಾತಿ ಗಣತಿ ವರದಿ ಜಾರಿಗೆ ಮುಂದಾಗಬೇಕು

ಶಿವಮೊಗ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಗಣತಿ ವರದಿಯನ್ನು ತಕ್ಷಣವೇ ಸಚಿವ ಸಂಪುಟದಲ್ಲಿಟ್ಟು ಸಾರ್ವಜನಿಕ ಚರ್ಚೆಗೆ ತಂದು ಜಾರಿಗೆ ಮುಂದಾಗಬೇಕು ಎಂದು ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಾತಿ ಗಣತಿ ವರದಿ ಸರಕಾರದ ಕೈಸೇರಿ ಈಗಾಗಲೇ ತಿಂಗಳುಗಳೇ ಕಳೆದಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿ ಸಚಿವ ಸಂಪುಟದ ಮುಂದಿಟ್ಟು ಜಾರಿಗೆ ತರುವುದಾಗಿ ಹೇಳಿರುವುದು ಸ್ವಾಗತಾರ್ಹ. ಆದರೆ ಕೇವಲ ಇದು ಬೂಟಾಟಿಕೆಯ ಅಥವಾ ಬಾಯಿಮಾತಿನ ಹೇಳಿಕೆಯಾಗಬಾರದು. ತಕ್ಷಣವೇ ಸಾರ್ವಜನಿಕ ಚರ್ಚೆಗೆ ಬಿಡಬೇಕು ಎಂದರು.

ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಯನ್ನು ಕರಾರುವಕ್ಕಾಗಿ ತಿಳಿಸಲು ಮತ್ತು ಮೀಸಲಾತಿಯ ಬಗ್ಗೆ ಕ್ರಮ ಕೈಗೊಳ್ಳಲು ಈ ವರದಿ ಬಹುಮುಖ್ಯವಾಗಿದೆ. ಸುಮಾರು 164 ಕೋಟಿ ರು. ವೆಚ್ಚದಲ್ಲಿ ಈ ಸಮೀಕ್ಷೆ ಮಾಡಲಾಗಿದೆ. ಈಗ 7 ವರ್ಷಗಳ ಹಿಂದೆಯೇ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಯಾಗಿದ್ದಾಗ ಈ ವರದಿ ಜಾರಿಗೆ ತರುವುದಾಗಿ ಹೇಳಿ ದ್ದರು. ಆದರೆ, ತಮ್ಮ ಹುದ್ದೆಗೆ ಎಲ್ಲಿ ಕುತ್ತು ಬರುತ್ತದೋ ಎಂದು ಇದನ್ನು ಜಾರಿಗೆ ತಂದಿರಲಿಲ್ಲ. ಈಗಲೂ ಕೂಡ ಮುಡಾ ಹಗರಣ ಹಿನ್ನಲೆಯಲ್ಲಿ ಬೇರೆಡೆ ಗಮನಸೆಳೆ ಯಲು ಜಾತಿಗಣತಿಯ ವಿಷಯ ಮಾತನಾಡುತ್ತಿದ್ದಾರೆ ಅಷ್ಟೇ. ಆದರೆ, ಇದು ಕೇವಲ ಬೂಟಾಟಿಕೆ ಆಗದೇ ಕಾರ್ಯರೂಪಕ್ಕೆ ತರಬೇಕು ಎಂದರು.

ಮುಖ್ಯಮಂತ್ರಿಗಳು ತಾವು ಹಿಂದುಳಿದ ನಾಯಕರು ಎಂದು ಹೇಳಿಕೊಳ್ಳುತ್ತಾರೆ. ಆದರೆ ಇತ್ತೀಚಿನ ಬೆಳವಣಿ ಗೆಗಳನ್ನು ನೋಡಿದರೆ ಪರಿಶಿಷ್ಟರ ಹಣ ದುರುಪಯೋಗ ವಾಗುತ್ತಿದೆ. ಕಾಂಗ್ರೆಸ್ ನಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಹಲವರು ಜೈಲಿಗೆ ಹೋಗಿದ್ದಾರೆ. ಹಿಂದುಳಿದ ವರ್ಗಗಳ ಸುಮಾರು 1073 ಯೋಜನೆಗಳಿಗೆ ಬಿಜೆಪಿ ಸರಕಾರದಲ್ಲಿ ಹಣ ನೀಡಲಾಗಿತ್ತು. ಆದರೆ ಆ ಹಣವನ್ನೇ ಈಗ ರದ್ದು ಮಾಡಿದ್ದಾರೆ. ಹೀಗಿರುವಾಗ ನಾನು ಹಿಂದುಳಿದ ಹಾಗೂ ಪರಿಶಿಷ್ಟರ ಪರ ಎಂದು ಮುಖ್ಯಮಂತ್ರಿಗಳು ಹೇಗೆ ಹೇಳುತ್ತಾರೆ. ಈಗಲಾದರೂ ಅವರು ಜಾತಿ ಗಣತಿ ವರದಿಯನ್ನು ಪ್ರಾಮಾಣಿಕವಾಗಿ ಜಾರಿಗೊಳಿಸಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆಯವರು ಹಿರಿಯರು. ಅವರಿಗೆ ಹೇಳುವಷ್ಟು ನಾನು ದೊಡ್ಡವನಲ್ಲ. ಆದರೆ ಅವರು ನಾನು ಸಾಯುವುದರೊಳಗೆ ಮೋದಿ ಅಧಿಕಾರದಿಂದ ಇಳಿಯುವುದನ್ನು ನೋಡಬೇಕು ಎಂದು ಹೇಳಿದ್ದಾರೆ.

ಇದು ನನ್ನ ಮನಸಿಗೆ ನೋವಾಗಿದೆ. ಮೋದಿಯವರು ವಿಶ್ವದಲ್ಲಿಯೇ ಹೆಸರು ಮಾಡಿದವರು. ಹಿಂದೂ ಧರ್ಮದ ಉಳಿವಿಗಾಗಿ ಹೋರಾಡುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಇ. ವಿಶ್ವಾಸ್, ಸತ್ಯಣ್ಣ, ಶಂಕರ್ ನಾಯ್ಕ್, ರಾಜು, ವಾಗೀಶ್, ಕುಬೇಂದ್ರಪ್ಪ, ಶಿವಕುಮಾರ್, ನಾಗರಾಜ್, ಮಂಜುನಾಥ್ ಮೊದಲಾದವರಿದ್ದರು.

ಸುದ್ದಿಗೋಷ್ಠಿಯಲ್ಲಿ ಕೆ.ಎಸ್. ಈಶ್ವರಪ್ಪ ಮಾತನಾಡಿದರು.

ಶಿವಮೊಗ್ಗ ಮಹಾನಗರ ಪಾಲಿಕೆ ಚುನಾವಣೆ ಸದ್ಯಕ್ಕೆ ಆಗುವ ಸೂಚನೆಗಳು ಕಂಡು ಬರುತ್ತಿಲ್ಲ. ಚುನಾವಣಾಧಿಕಾರಿಗಳು ಇನ್ನು 15 ದಿನದಲ್ಲಿ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂದಿದ್ದರು. ಆದರೆ ಆ ಬಗ್ಗೆ ಈಗ ಮಾತೇ ಇಲ್ಲ. ಜನ ಗೊಂದಲದಲ್ಲಿದ್ದಾರೆ. ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ದಸರಾ ಹಬ್ಬ ಅಧಿಕಾರಿಗಳ ಕೈಗೆ ಸಿಕ್ಕಂತಾಗಿದೆ. ಸರಕಾ ರಕ್ಕೆ ಚುನಾವಣೆ ಬೇಡವಾಗಿದೆ. ನಗರದ ಅಭಿವೃದ್ಧಿಗಾಗಿ ಆದಷ್ಟು ಬೇಗ ಪಾಲಿಕೆ ಚುನಾವಣೆ ನಡೆಯಬೇಕು.
- ಕೆ.ಎಸ್. ಈಶ್ವರಪ್ಪ, ಸಂಚಾಲಕ

ವಿಶ್ವವಾಣಿ
ಬೆಂಗಳೂರು
ಮಂಗಳವಾರ
01 | 10 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ

ಚಿತ್ತ ವಿಹಾರ

ಕಂಗೆಡದಿರಲಿ ಮನಸ್ಸು

ಬದುಕಿನ ಕೆಲವು ಸಂದರ್ಭಗಳಲ್ಲಿ 'ನಾನು ಅನಗತ್ಯವಾಗಿ ಇತರರಿಗೆ ದಾಳವಾಗುತ್ತಿದ್ದೇನೆ. ನನ್ನನ್ನು ಗುರಿಯಾಗಿಸಿಕೊಂಡೇ ಕೆಲಸ ಮಾಡುತ್ತಿದ್ದಾರೆ. ನನ್ನ ಕುರಿತಾಗಿ ಅವರಿಗೆ ಇಲ್ಲದ ಹೊಟ್ಟೆಕಿಚ್ಚು, ಇದರಿಂದಾಗಿಯೇ ನನಗೆ ಇವೆಲ್ಲ ನೋವು, ಸಂಕಟ, ಅಪಜಯ ಕಾಡುತ್ತಲಿವೆ' ಎಂಬ ಆತಂಕ ಕಾಡುತ್ತಲಿರುತ್ತದೆ. ಇಂತಹ ಆತಂಕದ ಛಾಯೆ ನಮ್ಮನ್ನು ಮತ್ತಷ್ಟು ಆವರಿಸತೊಡಗಿದಾಗ ಬದುಕು ಭಾರವೆನಿಸತೊಡಗುತ್ತದೆ. ಆತ್ಮವಿಶ್ವಾಸ ಕುಸಿಯುತ್ತಿರುವುದರ ಫಲವಿದು. ಇಂತಹ ನಕಾರಾತ್ಮಕ ಬೆಳವಣಿಗೆ ನಮಗೆ ಇನ್ನಷ್ಟು ಹಾನಿಯನ್ನುಂಟು ಮಾಡುತ್ತದೆ. ಕನಸುಗಳನ್ನು ಮುಲಾಜಿಲ್ಲದಂತೆ ಕಸಿದುಕೊಂಡು ಬಿಡುತ್ತದೆ. ಬದುಕನ್ನೆಲ್ಲ ಬರುಡಾಗಿಸುವಲ್ಲಿ ಯಶಸ್ವಿಯಾಗುತ್ತದೆ.

ವಾಸ್ತವದಲ್ಲಿ ನಮ್ಮ ವಿವೇಚನೆಯಿಲ್ಲದ ಗ್ರಹಿಕೆಯೇ ಇಂಥದೊಂದು ಅಸಂಗತ ಬೆಳವಣಿಗೆ ಮುಖ್ಯ ಕಾರಣ. ಪಾಂಡವರು ಶಕುನಿಯ ಕುತಂತ್ರದಿಂದಾಗಿ ಪಗಡೆಯಾಟದಲ್ಲಿ ಎಲ್ಲವನ್ನೂ ಕಳೆದುಕೊಂಡು ದಟ್ಟವಾದ ಕಾಡಿನಲ್ಲಿದ್ದರು. ರಾಜ್ಯವನ್ನೆಲ್ಲ ಕಳೆದುಕೊಳ್ಳುವುದು ಮಾತ್ರವಲ್ಲದೇ ದ್ರೌಪದಿಯ ವಸ್ತ್ರಾಪಹರಣದಿಂದಾಗಿ ಸಾಕಷ್ಟು ನೋವು ಹಿಂಸೆ, ಅಪಮಾನದ ಬೇಗುದಿಯ ದಿನಗಳಲ್ಲಿ ದ್ರೌಪದಿಯ ಮನಸ್ಸನ್ನು ಒಂದು ಹೂವಿನ ಸುವಾಸನೆ ಸೂರೆಗೊಳ್ಳುತ್ತದೆ. ಸುವಾಸನೆಯ ಇಷ್ಟೊಂದು ಸುಮಧುರುವಾಗಿರುವಾಗ ಆ ಹೂವು ಅದೆಷ್ಟು ಅಂದವಾಗಿರಬಹುದು ಎಂದೆನಿಸಿತು ಅವಳಿಗೆ. ಎಲ್ಲವನ್ನು ಮರೆತು ಅವಳು ಆ ಹೂವು ಮುಡಿಯಬೇಕೆಂದು ಭೀಮನಿಗೆ ಹೇಳುತ್ತಾಳೆ. ಅವನು ನಿರ್ಗತಿಕರಂತೆ ನಾವೀಗ ವನವಾಸದಲ್ಲಿದ್ದೇವೆ ಎಂಬ ಸಂಗತಿಯನ್ನು ಮರೆತು ಹೂವು ತಂದು ಕೊಡುತ್ತಾನೆ. ಹೂವಿನ ಸುಗಂಧ ಅವರೆಲ್ಲ ನೋವು ಮರೆಸುತ್ತದೆ. ಇಂತಹ ಮನೋಸ್ಥಿತಿ ನಮ್ಮದಾಗಬೇಕು. ಪ್ರಗಾಢವಾದ ಕತ್ತಲು ಆವರಿಸಿದ್ದರೂ ಅದರಲ್ಲಿ ತೂರಿ ಬರುವ ಸಣ್ಣದೊಂದು ಬೆಳಕಿನ ಕಿರಣದತ್ತ ನಮ್ಮ ಗಮನವನ್ನು ಕೇಂದ್ರಿಕರಿಸಬೇಕು.

ಏನನ್ನೋ ಕಲ್ಪಿಸಿಕೊಳ್ಳುತ್ತ ಸತ್ಯವಾದ ಸಂಗತಿಗಳಿಂದ ದೂರ ಸರಿಯುವುದರಲ್ಲಿ ಯಾವುದೇ ಅರ್ಥವಿಲ್ಲ. ನಮ್ಮ ಸಂಕುಚಿತ ಅರಿವಿನ ಲಕ್ಷ್ಮಣ ರೇಖೆಯನ್ನು ದಾಟಲಾಗದ ಅಸಹಾಯಕತೆಯಿಂದ ನಾವು ಹೊರಬರಬೇಕು. ವಸ್ತುನಿಷ್ಠವಾಗಿ ಸಂಗತಿಗಳನ್ನು, ಸಂದರ್ಭಗಳನ್ನು ವಿಶ್ಲೇಷಿಬೇಕು. ಭಿನ್ನವಾಗಿ ಯೋಚಿಸಬೇಕು. ಲಭ್ಯವಿರುವ ಸಾವಿರಾರು ಸಾಧ್ಯತೆಗಳನ್ನು ಮತ್ತೆ ಮತ್ತೆ ಹುಡುಕಾಡಬೇಕು. ಕಷ್ಟ-ನಷ್ಟಗಳ ಸೆರಗಿನಲ್ಲಿ ನಲಿವು-ಸಂತಸಗಳು ಅಡಗಿಕೊಂಡಿರುತ್ತವೆ ಎಂಬುದನ್ನು ಮನಸ್ಸಿಗೆ ಮತ್ತೆ ಮತ್ತೆ ಅರ್ಥವಾಗುವಂತೆ ಮಾಡಬೇಕು. ಗಾಳಿಗೆ ಸಿಕ್ಕ ತರಗೆಲೆಯಂತೆ ಬದುಕು ಎತ್ತತ್ತಲೋ ಸಾಗದಂತೆ ಕಡಿವಾಣ ಹಾಕಬೇಕು. ಯಾಂತ್ರಿಕತೆಯಿಂದ ಹೊರಬರಬೇಕು. ಇದು ಕಷ್ಟಸಾಧ್ಯವಾದರೂ ಪ್ರಯತ್ನದಿಂದ ಖಂಡಿತವಾಗಿಯೂ ಸಾಧ್ಯವಾಗಬಲ್ಲದು.

• ಮಹಾದೇವ ಬಸರಕೋಡ

ಯುವ ಕಾವ್ಯ

ಸವಾಲುಗಳ ಸ್ವೀಕರಿಸೋಣ

ನಮ್ಮ ಬದುಕು ಬಂದಂತೆಯೇ ಹೊರತು, ನಾವು ಬಯಸಿದಂತಲ್ಲ. ನಾವಿಡುವ ಪ್ರತಿ ಹೆಜ್ಜೆ ಹೆಜ್ಜೆಗೂ ಸವಾಲುಗಳು ಬಂದೇ ಬರುತ್ತವೆ. ಮನುಷ್ಯನ ಬದುಕಿನಲ್ಲಿ ಸವಾಲುಗಳು ಇರಲೇಬೇಕು. ಅಕಸ್ಮಾತ್ ಇರದೇ ಹೋದರೆ ನಮ್ಮ ಬದುಕಿನ ಸಾತ್ವಿಕತೆಯು ನಮಗೊಂದೆನಿತು ಸುಳಿವೇ ಸಿಗದಂತೆ ಕಳೆದು ಹೋಗುತ್ತದೆ. ಸವಾಲುಗಳೇ ಬದುಕಿನ ಬಹುದೊಡ್ಡ ಅಖಾಡಕ್ಕೆ ನಮ್ಮನ್ನು ಹುರಿಗೊಳಿಸುವ ಅಗ್ನಿಪರೀಕ್ಷೆಗಳು. ಇಂತಹ ಸವಾಲುಗಳಿಗೆ ತಕ್ಕ ಸವಾಲು ಹಾಕಿ ಗೆದ್ದು



ಬೀಗುವ ಚಾಕಚಕ್ಯತೆ ನಮ್ಮಲ್ಲಿರಬೇಕು. ದಿನದಿಂದ ದಿನಕ್ಕೆ ಮನುಷ್ಯ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಹೊಂದಿ ಸಾಧನೆ ಮಾಡಬೇಕು. ಆಗಲೇ ಅವನ ಬದುಕು ಪ್ರಗತಿಯ ಹಾದಿಯಲ್ಲಿ ಸಾಗುವುದು.ಇಲ್ಲದಿದ್ದರೆ ಬದುಕು ಅಸಮತೋಲನದಿಂದ ಗೊಂದಲಗಳ ಗೂಡಾಗುವುದು. ನಮಗೆ ಎದುರಾಗುವ ಪ್ರತಿಯೊಂದು ಸವಾಲುಗಳಲಿ ಒಳ್ಳೆಯ ಅವಕಾಶಗಳಿದ್ದು,ನಮ್ಮ ಬದುಕಿನಲ್ಲಿ ನಿರೀಕ್ಷೆಗೂ ಮೀರಿದ ಉನ್ನತ ಸ್ಥಾನಮಾನಗಳ ಪಡೆದುಕೊಳ್ಳಲು, ಗಳಿಸಿಕೊಳ್ಳಲು ಸಹಕಾರ ನೀಡುತ್ತವೆ.

ಒಂದೇ ಒಂದು ಸವಾಲಿಗೆ ಯಶಸ್ಸು ದಕ್ಕುವ ಮಾತಲ್ಲ. ನಾವು ಎದುರಿಸುವ ಅನೇಕ ಬಗೆಯ ಸವಾಲುಗಳ ಒಟ್ಟು ಮೊತ್ತವೇ ಯಶಸ್ಸು.ಸವಾಲುಗಳ ದಾರಿಯಲ್ಲಿ ಒಬ್ಬಂಟಿಯಾಗಿ ನಡೆದು ಹೋಗುವಾಗ ಯಾವುದಕ್ಕೂ ಯಾವುದೇ ಕಾರಣಕ್ಕೂ ಹೆದರದೆ,ಬೆದರದೆ,ಧೃತಿಗೆಡದೆ ದೃಢವಾಗಿ ನಡೆಯುತ್ತ ಹೋಗಬೇಕು. ಅಂದಾಗಲೇ ನಮಗೆ ಗೆಲುವು ಶತಸಿದ್ಧ. ಸವಾಲುಗಳೇ ಗಾಢ ನಿದ್ದೆಯಲ್ಲಿರುವ ನಮ್ಮನ್ನು ಬಡಿದೆಬ್ಬಿಸಿ ಎಚ್ಚರಿಸುವ ಎಚ್ಚರಿಕೆಯ ಘಂಟೆಗಳು.ನಮಗೆ ಗೆಲುವು ಬೇಕು. ಆದರೆ ಗೆಲುವಿನ ಮುಂದಿರುವ ಸವಾಲುಗಳು ಬೇಡವೇ ಬೇಡ.ನಮ್ಮ ಬದುಕಿನ ಮೇಲೆ ಅತೀವವಾದ ಪ್ರೀತಿ,ವಿಶ್ವಾಸ,ನಂಬಿಕೆಗಳಿರಲಿ. ಹೇಳದೇ, ಕೇಳದೇ ಬರುವ ಪ್ರತಿಯೊಂದು ಸವಾಲುಗಳಿಗೆ ಅಂಜದೆ, ಅಳುಕದೆ ಮುನ್ನುಗ್ಗಿದಾಗ ಮಾತ್ರವೇ ನಮ್ಮ ಬದುಕಿಗೆ ಮತ್ತೆ ಸವಾಲುಗಳಿಗೆ ಅರ್ಥವಿರುತ್ತದೆ.

• ರಂಗನಾಥ್ ಗುಡಿಮನಿ

ನೀವೂ ಬರೆಯಬಹುದು

ನಮ್ಮ ವಿಳಾಸ:

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಶ್ವಾಸಗುರು ಎಂದೇ ಹೆಸರಾಗಿರುವ ಶ್ರೀ ವಚನಾನಂದ ಸ್ವಾಮೀಯವರು ಇತ್ತೀಚೆಗೆ ಅಮೆರಿಕ ಪ್ರವಾಸ ಮುಗಿಸಿ, ನಂತರ ಇಟೆಲಿಯಲ್ಲಿ ಧ್ಯಾನ ಮತ್ತು ಅಧ್ಯಾತ್ಮದ ಕುರಿತು ಪ್ರವಚನ ನೀಡುತ್ತಾ, ಇಟೆಲಿಗೆ ಭೇಟಿ ಇತ್ತಿದ್ದರು. ಅಲ್ಲಿನ ಪೀಸಾ ಪಟ್ಟಣದಲ್ಲಿ ಶ್ರೀ ವಚನಾನಂದ ಸ್ವಾಮಿಯವರನ್ನು ಭೇಟಿಯಾದ ಲೇಖಕಿ ಜಯ ಮೂರ್ತಿಯವರು ತಮ್ಮ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ನೆನೆದವರು ಪ್ರತ್ಯಕ್ಷರಾದಾಗ!

• ಜಯ ಮೂರ್ತಿ, ಪೀಸಾ, ಇಟಲಿ

ಕೆಲವೇ ದಿನಗಳ ಹಿಂದೆ ನನ್ನ ತಂಗಿ ವಿಜಿ ಹತ್ತಿರ ಮಾತಾಡುತ್ತಿದ್ದಾಗ ನೊಂದುಕೊಂಡೆ. 'ಇಲ್ಲಿಗೆ ಯಾರು ಸಂತರು, ಸ್ವಾಮಿಗಳು ಬರುವುದಿಲ್ಲ. ಅವರಿಗೆ ಉಣಬಡಿಸುವ ಅವಕಾಶ ಇಲ್ಲ' ಎಂದು. ಇದೇ ಆಗಿತ್ತು ನನ್ನ ಬೇಜಾರಿಗೆ ಕಾರಣ. ಅನ್ನದಾನ ಮಾಡುವ ಪುಣ್ಯ, ಇಲ್ಲಿ ಇಲ್ಲ - ಅದು ಮೋಕ್ಷದ ಹಾದಿ ಅಂತ ಹೇಳಿಕೊಂಡೆವು.

ನನ್ನ ಮನದರಿಕೆ ಶಿವನಿಗೆ ತಲುಪಿತೇನೋ, ಸತ್ಯಸಾಯಿ ಬಾಬಾ ಅನುಗ್ರಹಿಸಿದರು. ಇದ್ದಕ್ಕಿದ್ದಂತೆ ನಮ್ಮ ಸ್ನೇಹಿತರು ಮಧು ಹೇಮಗೌಡ ಅವರು ಕರೆ ಮಾಡಿ 'ನಿಮ್ಮ ಮನೆಗೆ ಒಬ್ಬರು ಗುರುಗಳನ್ನು ಕಳಿಸುತ್ತಿದ್ದೇನೆ, ಅವರಿಗೆ ಪೀಸಾ ಓಲುಗೋಪುರ ತೋರಿಸಿ' ಎಂದರು. ಇದೆಂತಹ ಸುವರ್ಣಾವಕಾಶ! ನಾನು ಅವರನ್ನು ನಮ್ಮ ಮನೆಗೆ ಊಟಕ್ಕೆ ಬನ್ನಿ ಅಂದಾಗ ಸಂತೋಷದಿಂದ 'ಆಗಲಿ 'ಅಂದರು.

ಇವರು ನಿಮಗೆಲ್ಲ ಪರಿಚಿತರೇ! ಕರ್ನಾಟಕದ ಆಸ್ತಿಕರಿಗೆ, ಪ್ರಾಜ್ಞರಿಗೆ, ಅಧ್ಯಾತ್ಮ ಜೀವಿಗಳಿಗೆ, ಶಾಂತಿಯಿಂದ ಬದುಕು ನಡೆಸುವ ಆಸಕ್ತಿ ಇರುವವರಿಗೆ ಇವರ ಪರಿಚಯ ಇದ್ದದ್ದೇ. ಇವರ ಹೆಸರು ಶ್ರೀ ವಚನಾನಂದ ಸ್ವಾಮೀಜಿ; ಇವರನ್ನು

ಶ್ವಾಸಗುರು ಎಂದೂ ಕರೆಯುತ್ತಾರೆ. ಇವರು ಯೋಗಪುರುಷ, ಯೋಗ ಪ್ರಸಾರ ಮಾಡಿದ್ದಾರೆ. ಅದರಲ್ಲೂ ಪ್ರಾಣಾಯಾಮದ ಬಗ್ಗೆ ಇವರ ವಿಶೇಷತೆ. ಇಷ್ಟು ಚಿಕ್ಕವಯಸ್ಸಿನಲ್ಲೇ ಅಷ್ಟು ದೊಡ್ಡ ಸಾಧನೆ ! ಭಾರತದಲ್ಲಿ ಆಶ್ರಮಗಳನ್ನು ನಡೆಸುವುದಲ್ಲದೆ ವಿದೇಶದಲ್ಲೂ ಪ್ರಚಾರ ಮಾಡುತ್ತಿರುವುದು ಇವರ ಹಿರಿಮೆ.

ಇವರ ಜ್ಞಾನಶಕ್ತಿ ಹಿಮಾಲಯ ಪರ್ವತಕ್ಕೆ ಏರಿದೆ ಅಂದರೆ ಅತಿಶಯೋಕ್ತಿ ಅಲ್ಲ. ಹಿಮಾಲಯದಲ್ಲಿ ಇವರು ವ್ಯಾಪಕವಾಗಿ ಸಂಚರಿಸಿದದಾರೆ, ಅಲ್ಲಿನ ಅಲೌಕಿಕ ಶಕ್ತಿಯನ್ನು ಗುರುತಿಸಿದ್ದಾರೆ; ಅಲ್ಲೂ ಧ್ಯಾನ, ಯೋಗಾಸನಗಳನ್ನು ಕೈಗೊಂಡಿದ್ದಾರೆ . ಪುಟ್ಟಪರ್ತಿ ಶ್ರೀ ಸತ್ಯಸಾಯಿ ಬಾಬಾ ಹಾಗು ಪರಮಹಂಸ ಯೋಗಾನಂದ ಅವರ ಬಗ್ಗೆ ತಿಳಿದವರು.

ಅಂದಹಾಗೆ ಇಟಲಿಯ ಪೀಸಾ ಪಟ್ಟಣದಲ್ಲೂ ಒಂದು ಯೋಗ ಕೇಂದ್ರ ಇದೆ. ಇದನ್ನು ನಡೆಸುವವರು ಗಬ್ರಿಯೇಲ್ಲಾ ರಿಚ್ಚಿ ಅನ್ನುವವರು. ಆದಿನ, ಶ್ರೀ ವಚನಾನಂದ ಸ್ವಾಮೀಜಿಯವರು ಬಂದಾಗ, ಪೀಸಾದ ಯೋಗ ಕೇಂದ್ರದ ಗಬ್ರಿಯೇಲ್ಲಾ ರಿಚ್ಚಿ ಅವರು ಕೂಡ ನಮ್ಮ ಮನೆಗೆ ಊಟಕ್ಕೆ ಬಂದರು. ಮಹಿಪ್ ಅಂತ ಒಬ್ಬ ಗುಜರಾತಿ ಯುವಕ ಅವರು ನಮ್ಮ ಮನೆಯ ಹತ್ತಿರ ಇದ್ದು ಅವರು ಊಟಕ್ಕೆ ಸೇರಿದ್ದರು.

ನಾನು ಮಾಡಿದ ಸರಳ ಅಡುಗೆ 'ಪ್ರಸಾದ' ಎಂದು ಹೇಳಿದ್ದಲ್ಲದೇ, ಅನ್ನಪೂರ್ಣೆ ಶ್ಲೋಕ ಹೇಳಿ ಸ್ವೀಕರಿಸಿದರು. ನನ್ನ ಮನದಲ್ಲಿ ಧನ್ಯತಾ ಭಾವ ಮೂಡಿತು. ಸ್ವಾಮಿಯವರು ನಗು ನಗುತ್ತ ಊಟ ಮಾಡಿದ್ದು ಅಡುಗೆ ರುಚಿ ಇಮ್ಮಡಿಸಿತ್ತು.

ಊಟದ ನಂತರ ಪರಮಹಂಸ ಯೋಗಾನಂದ ಯೋಗ ಮತ್ತು ಧ್ಯಾನ ಕೇಂದ್ರಕ್ಕೆ ಭೇಟಿ ಕೊಟ್ಟೆವು. ಅಲ್ಲೂ ಸಹ ಶ್ವಾಸಗುರುಗಳು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ ಮೆಡಿಟೇಶನ್ ಮಾಡಿಸಿದರು. ಇವರ ಸರಳತೆ, ತಿಳಿವಳಿಕೆ, ಈಗಿನ ಕಾಲಮಾನಕ್ಕೆ ತಕ್ಕಂತೆ ಆಧುನಿಕ ಜೀವನಕ್ಕೆ ಹೊಂದಾಣಿಕೆ ನಿಜಕ್ಕೂ ಅಚ್ಚರಿ ತಂದಿತ್ತು.

ಪೀಸಾ ವಾಲುಗೋಪುರವನ್ನು ನೋಡಲು ಸ್ವಾಮೀಜಿಯವರ ಜತೆ ಹೋದೆವು. ವಾಲುಗೋಪುರ ನೋಡಲು ಬಂದಿದ್ದ ಯುವಕ ಯುವತಿಯರು ಶ್ವಾಸಗುರು ಅವರ ಆಯಸ್ಕಾಂತ ವ್ಯಕ್ತಿತ್ವಕ್ಕೆ ಆಕರ್ಷಿತರಾದರು. ಶ್ರೀ ವಚನಾನಂದ ಸ್ವಾಮೀಜಿಯವರು ಅವರಿಗೆಲ್ಲಾ ಓಂಕಾರ ಮಂತ್ರ ಮತ್ತು ಧ್ಯಾನ ಹೇಳಿಕೊಟ್ಟು ಅವರನ್ನೆಲ್ಲಾ ಮಂತ್ರ ಮುಗ್ದಗೊಳಿಸಿದರು. ತದನಂತರ ಚಿತ್ರ ತೆಗೆದರು ಮಹಿಪ.

ನನಗೆ ಗಬ್ರಿಯೇಲ್ಲಾ ಅವರಿಗೆ 'ಪೀಸಾದಲ್ಲಿ ಭಾರತ' ವೆಂಬ ಭಾವ ಮೂಡಿ, ನಾವು ಭಕ್ತಿಪರವಶರಾದೆವು! ಆನಂದಸಾಗರದಲ್ಲಿ ಮುಳುಗಿದೆವು. ಒಟ್ಟಿನಲ್ಲಿ ಇಷ್ಟೆಲ್ಲಾ ಕರುಣಿಸಿದ ಶ್ರೀ ಸತ್ಯಸಾಯಿ ಬಾಬಾ ಅವರಿಗೆ ನನ್ನ ನಮನಗಳು. ಇದಕ್ಕೆ ಹೇಳುತ್ತಾರೇನೋ 'ಮನಸ್ಸಿದ್ದರೆ ಮಾರ್ಗ 'ಎಂದು. ಶ್ವಾಸಗುರು ಶ್ರೀ ವಚನಾನಂದ ಸ್ವಾಮೀಜಿ ಅವರಿಗೆ ನನ್ನ ವಂದನೆಗಳು ಮತ್ತು ಅಭಿನಂದನೆಗಳು.

ಬೇಕರಿ ಬೇಬಿ ಬೇಡ!

ಹಳ್ಳಿಯಿರಲಿ, ಪಟ್ಟಣವಿರಲಿ ಇಂದು ಚಿಕ್ಕ ಮಕ್ಕಳು ಜಂಕ್ ಫುಡ್‌ಗೆ, ಬೇಕರಿ ತಿನಿಸುಗಳಿಗೆ ಅಡಿಕ್ಟ್ ಆಗಿದ್ದಾರೆ. ಇದು ಕಳವಳಕಾರಿ ವಿಚಾರ.

• ಸುಮಾವೀಣಾ

ಸ್ಕೂಲಿಗೆ ಹೊರಟ ರೋಹನ್ 'ಅಮ್ಮಾ ಸ್ನ್ಯಾಕ್ಸ್ ಬಾಕ್ಸಿಗೆ ಏನ್ ಹಾಕಿದ್ದೀರ? ಓ ಮೊಳಕೆ ಕಾಳು ಬೇಡ. ಚಿಪ್ಸ್ ಹಾಕಿ' ಎನ್ನುತ್ತಿದ್ದರೆ, ಅಮ್ಮಾ 'ಶಾಲೆಯವರು ಡೈರಿಲಿ ಬರಿತಾರೆ ಹಣ್ ತಗೊಂಡು ಹೋಗು' ಎಂದು ಅವನಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳಬೇಕು. ಇದು ಒಂದು ಮನೆ ಸಮಸ್ಯೆಯಲ್ಲ,ಮಕ್ಕಳಿರುವ ಎಲ್ಲ ಮನೆಯ ಸಮಸ್ಯೆ ಕೂಡ. 'ಹೊರಗಡೆ ಇದ್ದೆ ಏನ್ ಬೇಕು' ಎಂದು ಅಪ್ಪ ಅಂದ್ರೆ ನಮ್ಮ ಮಕ್ಕಳು ಬಹಳ ಮುದ್ದಿನಿಂದ 'ಐದು ನಕ್ಷತ್ರ (ಫೈವ್ ಸ್ಟಾರ್), ಕತ್ತಲೆಯ ರಮ್ಯತೆ, ಕಿಶೋರ ಸಂತೋಷ, ಅವಿತು ಹುಡುಕು, ಒಳ್ಳೆಯ ದಿನ, ಡೈರಿಹಾಲು , , ಖುಷಿ ಖುಷಿ, ನಡುವಿನ ತಾಜಾ' ಎಂದು ಪ್ರಸಿದ್ಧ ಬಿಸ್ಕೆಟುಗಳ ಮೂಲ ಹೆಸರನ್ನು ಕನ್ನಡಕೆ ಪರಿವರ್ತಿಸಿ ಉದ್ಗರಿಸುತ್ತಾರೆ. ಪೋಷಕರಿಗೆ ಅದೇ ಹೆಚ್ಚುಗಾರಿಕೆ. ಆಫರ್ ಇರುವುದನ್ನು ನೋಡಿ ತಂದು ಕೊಟ್ಟು ಬೆಳಗ್ಗೆ ವಾಶ್ ರೂಮಿಂದ ಬೇಗ ಬಾ ಬಾ ಹೊತ್ತಾಯ್ತು!''ಎಂದು ಗದರುತ್ತೇವೆ. ನಾವೇನೇ ರುಚಿಯಾಗಿರುವುದನ್ನು ಮಾಡಿಕೊಟ್ಟರೂ ಮಕ್ಕಳಿಗೆ ಪೀಸ್ ಪೀಸ್ ಪಿಜಾ, ಬರ್ಗೆಟ್ಟ ಬರ್ಗರ್ ಬೇಕು. ಹುರಿಗಾಳು,ಉಪ್ಪೇರಿ, ನಿಪ್ಪಟ್ಟು ಕೋಡುಬಳೆಯಂಥ ಮನೆತಿಂಡಿ ಅಂದರೆ ನಮ್ಮ ಮಕ್ಕಳು ಓಲ್ಡ್ ಕಾಲ,ಅಜ್ಜಿ ಕಾಲದ್ದು ಆಯ್ಲಿ ಆಯ್ಲೀ. ಎನ್ನುವ ವ್ಯಾಖ್ಯಾನ ಮಾಡುತ್ತಾರೆ.

ಪೋಷಕರು ಅದೇನೆ ಕಡಿವಾಣ ಹಾಕುತ್ತೇವೆಂದರೂ ನಮ್ಮ ಮಕ್ಕಳ ಜಂಕ್ ವ್ಯಸನ ಹೆಚ್ಚುತ್ತಲೇ ಇದೆ. ನಮ್ಮ ಟಿ.ವಿ.ಯಲ್ಲಿ ಬರುವ ಧಾರಾವಾಹಿಗಳೇ ಇದಕ್ಕೆ ಮೂಲ. ತಿನಿಸುಗಳನ್ನು ಎಷ್ಟು ವೈಭವೀಕರಿಸಬೇಕೋ ಅದಕ್ಕೂ ಹೆಚ್ಚಾಗಿ ವೈಭವೀಕರಿಸಿ ಆಫರ್ ಗಳ ಸರಮಾಲೆಯನ್ನೆ ಪೋಣಿಸಿ ಪ್ರಚೋದಿಸುತ್ತಾರೆ. ಯಾವುದನ್ನು ನೋಡದೆ ಇದ್ದರೂ ಜಾಹೀರಾತು ನೋಡಿ ಮಕ್ಕಳು ಸಮಯ ನೋಡಿ ಪೋಷಕರ ಮೇಲೆ ಒತ್ತಡ ಹೇರುತ್ತಾರೆ. ಆದರೆ ಬೇಕರಿ ತಿನಿಸು, ಬಿಸ್ಕೀಟ್ ತಿನಿಸು ಎಲ್ಲವೂ ಮಕ್ಕಳ ಆರೋಗ್ಯಕ್ಕೆ ಹಾನಿಕಾರಕ! ಇದರಲ್ಲಿ ಪಾಮ್ ಆಯಿಲ್ ಇದೆ, ಮೈದಾ ಇದೆ, ಇವೆಲ್ಲವೂ ನಿಧಾನವಾಗಿ ಮಕ್ಕಳ ಆರೋಗ್ಯವನ್ನು ಕೆಡಿಸುತ್ತವೆ! ಇದಕ್ಕೆ ವೈಜ್ಞಾನಿಕ ಆಧಾರಗಳಿವೆ.

ನಿಧಾನ ವಿಷ

ನಾವು ಕೊಡುತ್ತಿರುವುದು ಮಕ್ಕಳಿಗೆ ನಿಧಾನ ವಿಷವನ್ನು. ಸುಮಾರು 1500 ಕ್ಕೂ ಹೆಚ್ಚು ರಾಸಾಯನಿಕಗಳು ತಿನ್ನುವ ಪದಾರ್ಥದ ಮೂಲಕವೆ ಮನುಷ್ಯನ ಹೊಟ್ಟೆ ಸೇರುತ್ತಿದೆ.

ಕರುಳಿನಕ್ಯಾನ್ಸರ್, ಸ್ಥೂಲಕಾಯದಂಥ ಸಮಸ್ಯೆಗಳು ಈ ರೆಡಿ ಫುಡ್‌ನಿಂದ ಬರುತ್ತಿವೆಯಾದರೂ ನಮಗೆ ವಾಸ್ತವವನ್ನು ಮಕ್ಕಳಿಗೆ ಅರ್ಥ ಮಾಡಿಸಲು ಬಹಳ ಕಷ್ಟವಾಗುತ್ತಿದೆ. ಚಿಕ್ಕ ಮಕ್ಕಳಿಗೆ ಹಿಂದೆ ರವೆ ಉಂಡೆ ರವೆ ಉಂಡೆ ಬೀರಿನಲ್ಲಿ ಕಂಡೆ.. ಎಂಬ ಶಿಶು ಗೀತೆಯಲ್ಲಿ ರವೆ ಉಂಡೆಯನ್ನು, ರೊಟ್ಟಿ ಅಂಗಡಿ ಕಿಟ್ಟಪ್ಪ ನನಗೊಂದು ತಟ್ಟಪ್ಪ ಎಂಬ ಹಾಡಿನಲ್ಲಿ, ರೊಟ್ಟಿಯನ್ನು, ಒಂದು ಎರಡು ಬಾಳೆಲೆ ಹರಡು ಶಿಶುಗೀತೆಯಲ್ಲಿ ಅನ್ನ, ಬೇಳೆ ಸಾರು, ಪಲ್ಯದ ಪರಿಚಯ ಮಾಡಿಸುತ್ತಿದ್ದೆವು.

ಆದರೆ ಈಗ ಹೇಳುವುದೊಂದು! ಮಾಡುವುದೊಂದು! ನಮ್ಮ ಮಕ್ಕಳ ಆರೋಗ್ಯ ಹಿರಿಯರಿಂದಲೆ ಹಾಳಾಗುತ್ತಿದೆ. ರಾಸಾಯನಿಕಯುಕ್ತ ಕಣ್ಣ ಕುಕ್ಕುವ ಬಣ್ಣಗಳ ತಿಂಡಿ ನಮ್ಮ ಮಕ್ಕಳಲ್ಲಿ ಅನೇಕ ರೋಗಗಳನ್ನು ತಂದಿಡುತ್ತಿದೆ. ಇವತ್ತಿಗೆ ಯೂಟ್ಯೂಬ್, ಫೇಸ್‌ಬುಕ್, ಇನ್ ಸ್ಟಗ್ರಾಂ ನಂಥ ಜಾಲತಾಣಗಳಲ್ಲಿ ಎಷ್ಟೋ ಆರೋಗ್ಯಕರವಾದ ತಿಂಡಿಗಳನ್ನು ಸುಲಭವಾಗಿ ಮಾಡುವುದನ್ನು ತೋರಿಸುತ್ತಾರೆ. ಅವುಗಳಿಂದ ಪ್ರೇರಣೆ ಪಡೆದು ಇನ್ನೂ ಸೃಜನಾತ್ಮಕವಾಗಿ ತಿಂಡಿಗಳನ್ನು ತಯಾರಿಸಿ ಮಕ್ಕಳನ್ನು ಆಕರ್ಷಿಸೋಣ, ಬೇಕರಿ ಬೇಬಿಗಳಾಗಿ ಪರಿವರ್ತನೆಯಾಗುತ್ತಿರುವ ನಮ್ಮ ಮಕ್ಕಳನ್ನು ಪ್ಯೂರ್ ಹೋಂ ಫುಡ್ ಬೇಬಿಗಳನ್ನಾಗಿಸೋಣ. ಇದು ಪೋಷಕರ ಕರ್ತವ್ಯ ಮತ್ತು ಜವಾಬ್ದಾರಿಯೂ ಕೂಡ.

• ರಶ್ಮಿ ಗೋಖಲೆ

ಮುಳ್ಳುಸೌತೆ ಗೊತ್ತೇ?

ನವರಾತ್ರಿ ಮತ್ತು ಬತ್ತದ ತೆನೆಯನ್ನು ಮನೆಗೆ ತರುವ ಶುಭ ಸಂದರ್ಭದಲ್ಲಿ ಮುಳ್ಳು ಸೌತೆಕಾಯಿಯನ್ನೂ ಪೂಜಿಸುತ್ತಾರೆ!

ನಮ್ಮ ರಾಜ್ಯದ ಕರಾವಳಿ ಮತ್ತು ಮಲೆನಾಡಿನಲ್ಲಿ ಸೆಪ್ಟೆಂಬರ್ - ಅಕ್ಟೋಬರ್ ತಿಂಗಳ ಸಮಯದಲ್ಲಿ ಮುಳ್ಳುಸೌತೆಕಾಯಿ ಯಥೇಚ್ಛವಾಗಿ ಬೆಳೆಯುವ ಸಮಯ. ಮುಳ್ಳು ಸೌತೆಕಾಯಿಯ ಹೆಸರಲ್ಲಿ ಮುಳ್ಳಿದ್ದರೂ ಕೂಡ ರುಚಿಯಲ್ಲಿ ಹಾಗೂ ಅದನ್ನು ಸೇವಿಸಿದ ನಂತರ ಶರೀರಕ್ಕೆ ಕೊಡುವ ಪರಿಣಾಮದಲ್ಲಿ ಇದು ಶುದ್ಧ ತಂಪು. ಈ ಕಾಯಿಯ ಹೊರಭಾಗದಲ್ಲಿ ಪುಟ್ಟ ಪುಟ್ಟ ಮುಳ್ಳಿದ್ದರೂ ನಮಗದು ಹಿತವಾದುದು.

ಸೌತೆಕಾಯಿಯ ಹಲವು ಪ್ರಭೇದಗಳಲ್ಲಿ ಇದು ವಿಶಿಷ್ಟ. ಗಾತ್ರದಲ್ಲಿ ಕೂಡ ಬಹಳ ದೊಡ್ಡ ಗಾತ್ರದಲ್ಲಿ ಬೆಳೆಯಬಲ್ಲದು. ಕೆಲವು ಕಾಯಿಗಳು ಉದ್ದುದ್ದವಾಗಿ ಬೆಳೆದರೆ ಕೆಲವು ಕಂಠ ಭಾಗದಿಂದ ಕೆಳಗೆ ಮುರುಟಿಕೊಳ್ಳುತ್ತವೆ. ಇಂತಹ ಮುರುಟಿದ ಕಾಯಿಗಳನ್ನು ಎಳೆಯದನ್ನೇ ಬಳ್ಳಿಯಿಂದ ಕೊಯ್ದು ತಿನ್ನಲು ಬಹಳ ರುಚಿ. ಒಂದರಿಂದ ಎರಡು ಅಡಿ ಉದ್ದ ಬೆಳೆಯುವ ಈ ಕಾಯಿಗಳನ್ನು ಬಲಿತ ನಂತರ ಕೊಯ್ದು ಇಟ್ಟರೆ ಎರಡು ಮೂರು ತಿಂಗಳು ಹಾಳಾಗುವುದಿಲ್ಲ.

ಮಳೆಗಾಲದ ಆರಂಭದಲ್ಲಿ ಮುಳ್ಳುಸೌತೆಕಾಯಿ ಬೀಜವನ್ನು ಬಿತ್ತುತ್ತಾರೆ. ಎರಡು ಮೂರು ತಿಂಗಳ ಮಳೆಗಾಲದ ಅವಧಿಯಲ್ಲಿ ಬಳ್ಳಿ ಚೆನ್ನಾಗಿ ಬಲಿತು ಹಿಂಗಾರು ಮಳೆಯ ಸಮಯಕ್ಕೆ ಚೆನ್ನಾಗಿ ಫಲ ಕೊಡುತ್ತದೆ. ಹಟ್ಟಿ ಗೊಬ್ಬರ ಹಾಗೂ ಸುಡುಮಣ್ಣು ಬೆರೆಸಿ ಈ ಬಳ್ಳಿಗೆ ಕೊಟ್ಟರೆ ಉತ್ತಮ ಇಳುವರಿ. ಮುಳ್ಳು ಸೌತೆಕಾಯಿಯನ್ನು ಕೋಸಂಬರಿ, ಸಲಾಡ್‌ನಿಂದ ಮೊದಲುಗೊಂಡು ಕಾಯಿಸಾಸಿವೆ, ಹುಳಿ, ಮಜ್ಜಿಗೆ ಹುಳಿ, ದೋಸೆ, ಇಡ್ಲಿ, ಕಡುಬು, ಪಡ್ಡು ಹೀಗೆ ವಿವಿಧ ವ್ಯಂಜನಗಳಲ್ಲಿ ಇದನ್ನು ಬಳಸಲಾಗುತ್ತದೆ.

ನಮ್ಮ ದಿಡುಪೆಯ ಮನೆಯಲ್ಲಿ ದಂಡಿಯಾಗಿ ಬೆಳೆಯುತ್ತಿದ್ದ ಮುಳ್ಳುಸೌತೆಕಾಯಿಗಳು ಊರಿಗೆಲ್ಲ ಬಟವಾಡೆಯಾಗುತ್ತಿದ್ದವು. ಆಗೆಲ್ಲ ಅಕ್ಕಪಕ್ಕದ ಮನೆಗಳಲ್ಲಿ ಬೆಳೆದ ತರಕಾರಿಗಳು ಎಲ್ಲರ ಮನೆ ಸೇರುತ್ತಿದ್ದವು.

ನವಿಲಿನ ಕಾಟ!

ಈಚಿನ ವರ್ಷಗಳಲ್ಲಿ ನಾವು ಬೆಳೆದ ಬೆಳೆ ಇನ್ನೇನು ಕೈಗೆ ಬಂತು ಅನ್ನುವಷ್ಟರಲ್ಲಿ ಕೋತಿಗಳು ಬಂದು ಚೆಲ್ಲಾಡಿ ತಿನ್ನುವುದಕ್ಕಿಂತ ಹೆಚ್ಚಾಗಿ ನಾಶಪಡಿಸುತ್ತವೆ ಅನ್ನುವುದು ಬೇಸರದ ಸಂಗತಿ. ಇತ್ತೀಚಿನ ವರ್ಷಗಳಲ್ಲಿ ನವಿಲುಗಳ ಸಂಖ್ಯೆಯಲ್ಲಿ ಕೂಡ ಹೆಚ್ಚಳವಾಗಿದೆ. ಅವು ಕೂಡ ಬೆಳೆ ಹಾನಿ ಮಾಡುತ್ತವೆ.

ದೀಪಾವಳಿಯ ನೀರು ತುಂಬುವ ಹಬ್ಬದಂದು ಮುಳ್ಳು ಸೌತೆಕಾಯಿ ಬಳ್ಳಿಯನ್ನು ಸ್ನಾನದ ನೀರಿನ ಹಂಡೆ ತೊಳೆದು ಅದರ ಕಂಠದ ಸುತ್ತಲೂ ಕಟ್ಟಿ ಶೃಂಗಾರ ಮಾಡಲು ಉಪಯೋಗಿಸಲಾಗುತ್ತದೆ. ನವರಾತ್ರಿಯಲ್ಲಿ ಮನೆ ಹೊಸ ತೆನೆಯಿಂದ ಮನೆ ತುಂಬುವ ಸಂಪ್ರದಾಯ ನಂತರ ಕುಟುಂಬದ ಸದಸ್ಯರು ಹಾಗೂ ನೆಂಟರಿಷ್ಟರು ಸೇರಿ ಹೊಸಕ್ಕಿ ಊಟದ ಸಂಭ್ರಮವಿರುತ್ತದೆ. ಬತ್ತದ ತೆನೆಯನ್ನು ತಂದಿಡಲು ತುಳಸಿಕಟ್ಟೆಯ ಬಳಿ ಒಂದು ಬಿದಿರಿನ ತಡಪೆ (ತಟ್ಟೆ) ಯಲ್ಲಿ ತೆಂಗಿನ ಕಾಯಿ, ಅಡಿಕೆ ಜೊತೆಗೆ ಒಂದು ಮುಳ್ಳುಸೌತೆಕಾಯಿಯನ್ನು ಕೂಡ ಇಡುತ್ತಾರೆ. ಮರುದಿನ ಅದರಲ್ಲಿ ಮಾವಿನಸೊಪ್ಪು, ಭತ್ತದ ತೆನೆ ಇತ್ಯಾದಿ ಇಟ್ಟು ಘಂಟೆ ಜಾಗಟೆ ಸದ್ದಿನೊಂದಿಗೆ ಮನೆಮಂದಿಯೆಲ್ಲ ಸೇರಿ ಒಳಗೆ ಕೊಂಡೊಯ್ದು ದೇವರ ಮನೆಯಲ್ಲಿ ಅವನ್ನೆಲ್ಲ ಇಟ್ಟು ಪೂಜೆ ಮಾಡುತ್ತಾರೆ. ತದನಂತರ ಕುರಾಲ್ಲ್ (ಭತ್ತದ ತೆನೆಯ ಮಾವಿನಸೊಪ್ಪಲ್ಲಿ ಕಟ್ಟಿ ಇಡುವುದು) ಮುಖ್ಯ ಜಾಗಗಳಲ್ಲಿ ಕಟ್ಟುವುದು ಇದೆ.

ವ್ರತಾಚರಣೆಯ ಭಾಗದಲ್ಲಿ ಕೂಡ ಮುಳ್ಳುಸೌತೆಕಾಯಿ ಎಲೆಗಳ ಉಪಯೋಗವೂ ಇದೆ. ಶ್ರಾವಣ ಮಾಸದ ಶುದ್ಧ ಸಪ್ತಮಿಯಂದು ಕೆಲವು ಕುಟುಂಬಗಳು ಸಳಾ ಸಪ್ತಮಿ ಆಚರಿಸುವಾಗ, ಸೌತೆಕಾಯಿ ಎಲೆಯಲ್ಲಿ ಅನ್ನ ಹಾಗೂ ಮೊಸರು ಬಡಿಸಿ ಎಲೆಯನ್ನು ಮುಚ್ಚಿ ನದಿಗೆ ಬಿಡುತ್ತಾರೆ. ಜಲಮೂಲಗಳು ಬತ್ತದೆ ಇರಲಿ ಎಂಬುದು ಇದರ ಹಿಂದಿನ ಆಶಯ. ಒಂದು ತರಕಾರಿಗೆ ಈ ಮಟ್ಟದ ಪ್ರಾಶಸ್ತ್ಯ ಸಿಗುವುದು ಕೂಡ ಸೋಜಿಗವೇ. ಬಯಲುಸೀಮೆಯಲ್ಲಿ ಬೆಳೆಯುವ ಎಳೆ ಸೌತೆಕಾಯಿಯನ್ನು ಮುಳ್ಳುಸೌತೆ ಹೋಲುತ್ತದೆ.

ಸಾಹಿತ್ಯದಲ್ಲಿ ಮೊದಲ ನೊಬೆಲ್

ಅಕ್ಟೋಬರ್ ತಿಂಗಳು ಬಂತು ಎಂದರೆ, ಈ ವರ್ಷ ಯಾರ್‍ಯಾರಿಗೆ ನೊಬೆಲ್ ಪ್ರಶಸ್ತಿಯನ್ನು ಘೋಷಿಸಲಾಗುತ್ತದೆ ಎಂಬ ಕುತೂಹಲ ಜಗತ್ತಿನಾದ್ಯಂತ ಗರಿಗೆದರುತ್ತದೆ. ಈ ಹಿನ್ನೆಲೆಯಲ್ಲಿ, ಸಾಹಿತ್ಯದಲ್ಲಿ ಮೊದಲ ನೊಬೆಲ್ ಪ್ರಶಸ್ತಿ ಪಡೆದವರ ಕಿರು ಅವಲೋಕನ ಇಲ್ಲಿದೆ.-

• ಎಲ್.ಪಿ.ಕುಲಕರ್ಣಿ

ಭೌತಶಾಸ್ತ್ರ, ರಾಸಾಯನಶಾಸ್ತ್ರ, ಶರೀರಶಾಸ್ತ್ರ ಮತ್ತು ಔಷಧವಿಜ್ಞಾನ, ಸಾಹಿತ್ಯ, ಶಾಂತಿ ಹಾಗೂ ಅರ್ಥಶಾಸ್ತ್ರ ಹೀಗೆ ಒಟ್ಟು ಆರು ವಿಭಾಗಗಳಲ್ಲಿ ಅಪರೂಪದ ಸಾಧನೆಗೈದವರಿಗೆ ನೊಬೆಲ್ ಪ್ರಶಸ್ತಿಯನ್ನು ಕೊಡಲಾಗುತ್ತದೆ. ಆಯಾ ವರ್ಷ ಪ್ರಶಸ್ತಿ ಪಡೆದವರ ಆಯ್ಕೆ ಪಟ್ಟಿಯನ್ನು ಅಕ್ಟೋಬರ್ ತಿಂಗಳ ಮೊದಲ ವಾರದಿಂದಲೇ ಬಿಡುಗಡೆಮಾಡಲಾಗುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಮೊದಲ ನೊಬೆಲ್ ಪಡೆದ ವ್ಯಕ್ತಿ ಯಾರೆಂದು ಹುಡುಕುತ್ತ ಹೊರಟರೆ ಆಗ ಸಿಗುವ ವ್ಯಕ್ತಿಯೇ ಫ್ರೆಂಚ್ ಕವಿ, ಸಾಹಿತಿ ಸುಲ್ಲಿ ಪ್ರುದೊಮ್ಮೆ. ಮಾರ್ಚ್ 16, 1839 ರಂದು ಪ್ಯಾರಿಸ್‌ನಲ್ಲಿ ಜನಿಸಿದ ಪ್ರುದೊಮ್ಮೆ ಮೂಲತಃ ಇಂಜಿನಿಯರ್ ಆಗಬೇಕೆಂದು ಕನಸುಕಂಡು ಆನಿಟ್ಟಿನಲ್ಲಿ ಅಧ್ಯಯನ ಮಾಡಿದವರು, ಆದರೆ ಅವರ ಮನಸ್ಸು ತತ್ವಶಾಸ್ತ್ರಕ್ಕೆ ಮತ್ತು ನಂತರ ಕಾವ್ಯಕ್ಕೆ ತಿರುಗಿತು; ಆಧುನಿಕ ಕಾಲಕ್ಕೆ ವೈಜ್ಞಾನಿಕ ಕಾವ್ಯವನ್ನು ರಚಿಸುವುದು ಅವರ



ಉದ್ದೇಶವೆಂದು ಅವರೇ ಸ್ವತಃ ಹೇಳಿಕೊಂಡಿದ್ದಿದೆ.

ಪ್ರಾಮಾಣಿಕ ಮತ್ತು ವಿಷಣ್ಣತೆಗಳನ್ನು ಅವರು ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರು ಪಾರ್ನಾಸಸ್ ಶಾಲೆಗೆ ಸಂಪರ್ಕ ಹೊಂದಿದ್ದರು. ಅದೇ ಸಮಯದಲ್ಲಿ, ಅವರು ಕಾವ್ಯ ಹಾಗೂ ಬರವಣಿಗೆ ಯತ್ತ ಮನಸೋತರು. ಪ್ರಾಮಾಣಿಕ ಮತ್ತು ವಿಷಣ್ಣತೆಗಳನ್ನು ಅವರು ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಮತ್ತು ಹಲವು ಆಯಾಮದ ಆಲೋಚನೆಗಳನ್ನು ತೋರಿ ಸುವ ಅವರ ಸುಂದರವಾದ ಕವಿತೆಗಳಿಗಾಗಿ ಪ್ರುದೊಮ್ಮೆ 1901 ರಲ್ಲಿ ನೊಬೆಲ್ ಬಹುಮಾನವನ್ನು ಪಡೆದರು.

ಅವರ ಕೆಲವು ಕವನ ಸಂಕಲನಗಳು

- ನಿಲುವುಗಳು ಮತ್ತು ಕವಿತೆಗಳು -1865
- ಲೆಸ್ ಎಪ್ರೆವ್ಸ್ -1866.
- ಕ್ರೋಕ್ವಿಸ್ ಇಟಾಲಿಯನ್ಸ್ -1868.
- ಲೆಸ್ ಸಾಲಿಟ್ಯುಡ್ಸ್: ಪೊಯೆಸಿಸ್ -1869.
- ಲೆಸ್ ಡೆಸ್ಟಿನ್ಸ್ -1872.

ಕೆಲವು ಗದ್ಯಗಳು ಕೃತಿಗಳು

- ಕ್ಯೂ ಸೈಸ್-ಜೆ (1896) - ತತ್ವಶಾಸ್ತ್ರ
- ಟೆಸ್ಟಮೆಂಟ್ ಪೊಯೆಟಿಕ್ (1901) - ಪ್ರಬಂಧಗಳು
- ಲಾ ವ್ರೈ ರಿಲಿಜನ್ ಸೆಲೋನ್ ಪ್ಯಾಸ್ಕಲ್ (1905) - ಪ್ರಬಂಧಗಳು
- ಜರ್ನಲ್ ಟೈಮ್: ಲೆಟರ್ಸ್-ಪೆನ್ಸೀ (1922)

ಅವರು 1870 ರಿಂದಲೂ ಅವರು ಅನಾರೋಗ್ಯದಿಂದ ನರಳುತ್ತಿದ್ದರು. ಕೊನೆಗೆ ಅವರ ಅನಾರೋಗ್ಯ ಪಾರ್ಶ್ವವಾಯುವಿಗೆ ದಾರಿಮಾಡಿಕೊಟ್ಟಿತು. 6 ಸೆಪ್ಟೆಂಬರ್ 1907 ರಂದು ಅವರು ಕೊನೆಯುಸಿರೆಳೆದರು. ಪ್ಯಾರಿಸ್ ನ ಪೆರೆ-ಲಚೈಸ್ ಎಂಬಲ್ಲಿ ಅವರ ಸಮಾಧಿಯನ್ನು ಮಾಡಲಾಗಿದೆ.

ನೊಬೆಲ್ ಪ್ರಶಸ್ತಿ

ನೊಬೆಲ್ ಪ್ರಶಸ್ತಿಗಳು 1895 ರಲ್ಲಿ, ಡೈನಮೈಟ್ ವ್ಯಾಪಾರಿ ಆಲ್ಫ್ರೆಡ್ ನೊಬೆಲ್ ಅವರ ಇಚ್ಛೆಯ ಮೂಲಕ ಸ್ಥಾಪಿಸಲಾದ ಪ್ರತಿಷ್ಠಿತ ಪ್ರಶಸ್ತಿಗಳಾಗಿವೆ. ಮೊದಲ ಬಾರಿಗೆ 1901 ರಲ್ಲಿ ನೀಡಲಾಯಿತು, ಅವರು ಐದು ವಿಭಾಗಗಳಲ್ಲಿ ಮಾನವೀಯತೆಗೆ ಗಣನೀಯವಾಗಿ ಪ್ರಯೋಜನವನ್ನು ನೀಡಿದ ವ್ಯಕ್ತಿಗಳು ಅಥವಾ ಸಂಸ್ಥೆಗಳನ್ನು ಗುರುತಿಸುತ್ತಾರೆ: ಭೌತಶಾಸ್ತ್ರ, ರಸಾಯನಶಾಸ್ತ್ರ ಶರೀರಶಾಸ್ತ್ರ ಅಥವಾ ಔಷಧ, ಸಾಹಿತ್ಯ, ಮತ್ತು ಶಾಂತಿ. 1969 ರಲ್ಲಿ ಆರ್ಥಿಕ ವಿಜ್ಞಾನಕ್ಕೆ ಹೆಚ್ಚುವರಿ ಬಹುಮಾನವನ್ನು ಸೇರಿಸಲಾಯಿತು. ಇದಕ್ಕೆ ಸ್ವೀಡನ್‌ನ ಕೇಂದ್ರ ಬ್ಯಾಂಕ್‌ನಿಂದ ಧನಸಹಾಯ ಪಡೆಯಲಾಗುತ್ತದೆ. ಸಾಮಾನ್ಯವಾಗ ಪ್ರತಿವರ್ಷ ಅಕ್ಟೋಬರ್ ತಿಂಗಳ ಮೊದಲ ಮತ್ತು ಎರಡನೆಯ ವಾರದಲ್ಲಿ ನೊಬೆಲ್ ಪ್ರಶಸ್ತಿಗಳನ್ನು ಘೋಷಿಸಲಾಗುತ್ತದೆ. ನಮ್ಮ ದೇಶಕ್ಕೆ ಮೊದಲ ಪ್ರಶಸ್ತಿ ದೊರಕಿದ್ದು 1913ರಲ್ಲಿ - ಕವಿ ರವೀಂದ್ರ ನಾಥ ಟ್ಯಾಗೋರ್ ಅವರಿಗೆ.

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್
ವಿಶ್ವವಾಣಿ
01.10.2024 ಮಂಗಳವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಕೃಷ್ಣ ಪಕ್ಷ, ಚತುರ್ದಶಿ ತಿಥಿ, ಪುಬ್ಬ ನಕ್ಷತ್ರ, ಶುಕ್ಲ ಯೋಗ, ವಿಷ್ಟಿ ಕರಣ, 1946 ಕ್ರೋಧಿನಾಮ ಸಂವತ್ಸರ, ಮಂಗಳವಾರ, ಶರದ್ ದ್ರಿಕ್ ಋುತು, ದಕ್ಷಿಣಾಯಣ

ಮನೆಮದ್ದು

ಸ್ನಾಯುಗಳನ್ನು ಬೆಳೆಸುವುದಕ್ಕಾಗಿ ಜನ ಪ್ರೋಟೀನ್ ಹಾಗೂ ಇನ್ನಿತರೆ ರಾಸಾಯನಿಕ ಪದಾರ್ಥಗಳನ್ನು ತೆಗೆದುಕೊಳ್ಳುತ್ತಾರೆ. ಅದರ ಬದಲು, ಒಂದು ಕಪ್ ಮೊಳಕೆ ಬರಿಸಿದ ಧಾನ್ಯದಲ್ಲಿ ಸುಮಾರು 33 ಗ್ರಾಂನಷ್ಟು ಪ್ರೋಟೀನ್ ಇದೆ. ಈ ಕಾಳುಗಳನ್ನು ನಿಯಮಿತವಾಗಿ ಸೇವಿಸಿದರೆ ಸ್ನಾಯುಗಳು ಬಲವಾಗುತ್ತವೆ ಮತ್ತು ದೇಹದಲ್ಲಿ ಸಂಗ್ರಹವಾಗಿರುವ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ.

ಸೌಂದರ್ಯ ಸೂತ್ರ

ತುಪ್ಪವು ಅದ್ಭುತ ನೈಸರ್ಗಿಕ ಮಾಯಿಶ್ಚರೈಸರ್ ಗುಣವನ್ನು ಹೊಂದಿದೆ. ಮೊಣಕೈಗಳು, ಮೊಣಕಾಲುಗಳು ಮತ್ತು ಹಿಮ್ಮಡಿಗಳಂತಹ ಶುಷ್ಕವಾಗಿರುವ ಚರ್ಮದ ಪ್ರದೇಶಗಳಿಗೆ ತೇವಾಂಶ ನೀಡಲು ಈ ತುಪ್ಪವನ್ನು ಹಚ್ಚಬಹುದು. ಇದನ್ನು ನೇರವಾಗಿ ಚರ್ಮಕ್ಕೆ ಹಚ್ಚಿಕೊಳ್ಳಿ ಅಥವಾ ಜೇನುತುಪ್ಪದೊಂದಿಗೆ ಬೆರೆಸಿ ಹಚ್ಚಬಹುದು.

ದಿನ ಭವಿಷ್ಯ

ಮೇಷ: ಕ್ರೀಡೆಗಳು ಮತ್ತು ಇತರ ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಳೆದುಕೊಂಡ ಚೈತನ್ಯ ಕಂಡುಕೊಳ್ಳಲು ಸಹಾಯ ಮಾಡುತ್ತದೆ.

ವೃಷಭ: ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಆಸ್ತಿ ವ್ಯವಹಾರಗಳು ಅಸಾಧಾರಣ ಲಾಭ ತರುತ್ತವೆ.

ಮಿಥುನ: ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಸ್ನೇಹಿತರು ಸಹಾಯಕ್ಕೆ ಬರುತ್ತಾರೆ. ಬೆಂಬಲ ನೀಡುತ್ತಾರೆ.

ಕಟಕ: ಇಂದು ಚುರುಕುತನವನ್ನು ನೋಡಬಹುದು. ಆರೋಗ್ಯವು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಸ್ನೇಹಿತರ ಜೊತೆ ಸಮಯ ಕಳೆಯಿರಿ.

ಸಿಂಹ: ಹೊರಾಂಗಣ ಚಟುವಟಿಕೆಗಳು ಇಂದು ದಣಿವು, ಒತ್ತಡ ತರುತ್ತವೆ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

ಕನ್ಯಾ: ಫಿಟ್ ಆಗಿ, ಚೆನ್ನಾಗಿರಿಸಿಕೊಳ್ಳಲು ಹೆಚ್ಚಿನ ಕ್ಯಾಲೊರಿಯ ಆಹಾರ ತಪ್ಪಿಸಿ. ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಲಾಸ್ ಆಗಬಹುದು.

ತುಲಾ: ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೊಭಾವದಲ್ಲಿರುತ್ತೀರಿ. ವಿವಿಧ ಮೂಲಗಳಿಂದ ಲಾಭ.

ವೃಶ್ಚಿಕ: ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ಸಾಲ ಪಡೆಯಬಹುದು.

ಧನು: ಅನಾವಶ್ಯಕ ಉದ್ವೇಗ ಮತ್ತು ಚಿಂತೆ ನಿಮ್ಮ ಜೀವನದ ಖುಷಿಯನ್ನು ಕಿತ್ತುಕೊಳ್ಳುತ್ತದೆ, ಖಾಲಿತನ ಬರಿಸುತ್ತದೆ.

ಮಕರ: ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ.

ಕುಂಭ: ದೈಹಿಕ ರಚನೆ ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರಿಡಾ ಚಟುವಟಿಕೆಗಳನ್ನು ಇಂದು ಆನಂದಿಸಬಹುದು.

ಮೀನ: ಭಾವನಾತ್ಮಕವಾಗಿ ಸ್ಥಿರವಾಗಿರುವುದಿಲ್ಲ- ಇತರರ ಮುಂದೆ ಹೇಗೆ ವರ್ತಿಸು ತ್ತೀರಿ, ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1949: ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ ಶುರುವಾಯಿತು. ಇದು ಚೀನಾದ ರಾಷ್ಟ್ರೀಯ ದಿನ
- 1908: ಹೆನ್ರಿ ಫಾರ್ಡ್ ತನ್ನ ಮಾಡೆಲ್ ಟಿ ಕಾರನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದನು.
- 1854: ಬ್ರಿಟೀಷ್ ಸರಕಾರವು ಕೋಲ್ಕತ್ತದಲ್ಲಿ ಮೊದಲ ಪೋಸ್ಟ್ ಸ್ಟ್ಯಾಂಪ್‌ಗಳನ್ನು ಬಿಡುಗಡೆಗೊಳಿಸಿದರು.
- 1953: ಮದ್ರಾಸ್ ರಾಜ್ಯದಿಂದ ಆಂಧ್ರ ಬಿಡುಗಡೆಯಾಯಿತು

ಚಿತ್ರಸ್ಫೂರ್ತಿ



ವಿಧಾನಸೌಧದ ನೆರಳಿನಲ್ಲಿ ವಾಲಿಬಾಲ್ ಆಡಿದರೆ...! ಚಿತ್ರಕೃಪೆ: ಸುಧಾಕರ್ ದೇವರಾಜ್

ಅಪೇಕ್ಷೆ ಇಲ್ಲದೆ ಮಾಡಿದ ಕೆಲಸದ ಸಾರ್ಥಕತೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಬಹಳ ಹಿಂದೆ ಇಂದ್ರದ್ಯುಮ್ನನೆಂಬ ರಾಜ ಮಾಡಿದ ಅನೇಕ ಒಳ್ಳೆಯ ಕಾರ್ಯದಿಂದಾಗಿ ಸತ್ತು ಬಹಳ ವರ್ಷಗಳ ಕಾಲ ಸ್ವರ್ಗದಲ್ಲಿ ಸುಖವಾಗಿದ್ದ. ಒಂದು ದಿನ ದೇವದೂತ ಬಂದು, 'ರಾಜ ನೀನು ಮಾಡಿದ ಪುಣ್ಯದ ಕೆಲಸಗಳ ಅವಧಿ ಮುಗಿಯಿತು, ಮತ್ತೆ ನೀನಿನ್ನು ಭೂಮಿಗೆ ಹೊರಡಬೇಕು' ಎಂದ. ರಾಜನಿಗೆ ಗಾಬರಿಯಾಯಿತು, ಆತ, 'ನಾನು ಎಷ್ಟೊಂದು ದಾನ ಧರ್ಮಗಳನ್ನು ಅಷ್ಟು ವರ್ಷಗಳ ಕಾಲ ಮಾಡಿದ್ದೆನಲ್ಲ, ಅವೆಲ್ಲ ಮುಗಿದು ಹೋಯಿತೇ?' ಎಂದು ಕೇಳಿದ.

ಆಗ ದೇವದೂತ, 'ಸ್ವಾಮಿ, ಸ್ವರ್ಗದಲ್ಲೊಂದು ಪದ್ಧತಿ ಇದೆ, ಭೂಮಿಯ ಮೇಲಿನ ಜನ ನೀವು ಮಾಡಿದ ಒಳ್ಳೆಯ ಕೆಲಸಗಳನ್ನು ಎಲ್ಲಿಯವರೆಗೆ ನೆನಪಿಸಿಕೊಳ್ಳುತ್ತಾರೋ ಅಲ್ಲಿಯವರೆಗೆ ಮಾತ್ರ ನೀವು ಇಲ್ಲಿರಬಹುದು, ಯಾವಾಗ ನಿಮ್ಮನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲವೋ ಅಂದಿಗೆ ನಿಮ್ಮ ಸ್ವರ್ಗದ ಅವಧಿ ಮುಗಿಯಿತು, ಹಾಗಾಗಿ ಸಣ್ಣ ಪುಟ್ಟ ಉಪಕಾರ ಒಳ್ಳೆಯ ಕಾರ್ಯ ಮಾಡಿದವರು ಕೇವಲ ಸ್ವಲ್ಪಕಾಲ ಇಲ್ಲಿರುತ್ತಾರೆ. ಶಾಶ್ವತವಾದಂತ ಕಾರ್ಯವನ್ನು ಮಾಡಿದವರು ಮಾತ್ರ, ಯಾವಾಗಲೂ ಇಲ್ಲಿಯೇ ಉಳಿಯುತ್ತಾರೆ. ಈಗ ನಿಮ್ಮ ಕಾರ್ಯಗಳನ್ನು ಕೃತಜ್ಞತೆಯಿಂದ ಸ್ಮರಿಸುವವರು ಯಾರೂ ಇಲ್ಲ. ಬೇಕಾದರೆ ನೀವು ಭೂಮಿಗೆ ಹೋಗಿ ನಿಮ್ಮ ಕಾರ್ಯಗಳನ್ನು ಈಗಲೂ ಯಾರಾದರೂ ನೆನೆಪಿಸಿ ಕೊಳ್ಳುವವರಿದ್ದರೆ ತಿಳಿಸಿ. ಆಗ ನಿಮ್ಮ ಸ್ವರ್ಗದ ಅವಧಿ ಮುಂದುವರಿಯಬಹುದು' ಎಂದು ಹೇಳಿದ.

ಏನೂ ಮಾತನಾಡದೆ ರಾಜ ಭೂಮಿಗೆ ಬಂದ. ಅವನಿದ್ದ ರಾಜ್ಯದಲ್ಲಿ ಈಗ ಯಾರಿಗೂ, ಈ ರಾಜನ ಹೆಸರು ಕೂಡಾ ಗೊತ್ತಿರಲಿಲ್ಲ. ಹುಡುಕಿ ಹುಡುಕಿ ಕೊನೆಗೊಬ್ಬ ಹಣ್ಣು, ಹಣ್ಣು ಮುದುಕನ ಮನೆಗೆ ಬಂದ. ಅವನಿಗೂ ಕೂಡ ಇವನ ಹೆಸರು ಗೊತ್ತಿರಲಿಲ್ಲ.

ಆದರೆ ಆತನೊಂದು ವಿಷಯ ತಿಳಿಸಿದ. ನನಗಿಂತ ಬಹಳ ವಯಸ್ಸಾದ ಒಂದು ಗೂಬೆ ಊರ ಹೊರಗೆ ವಾಸವಾಗಿದೆ, ಅದಕ್ಕೆ ನಿನ್ನ ಹೆಸರು ಗೊತ್ತಿದ್ದರೂ ಗೊತ್ತಿರಬಹುದು ಎಂದ.

ಆ ಗೂಬೆ ಕೂಡಾ, ಈ ರಾಜನ ಹೆಸರನ್ನು ಕೇಳಿರಲಿಲ್ಲ, ಆದರೆ ನನಗಿಂತ ವಯಸ್ಸಾದ ಆಮೆಯೊಂದು ಊರ ಹೊರಗಿನ ಕೆರೆಯಲ್ಲಿದೆ ಬಹುಶಃ ಅದಕ್ಕೆ ನಿನ್ನ ವಿಷಯ ಗೊತ್ತಿರಬಹುದು ಎಂದಿತು.

ರಾಜ ಅಂತೂ ಇಂತೂ ವಯಸ್ಸಾದ ಆಮೆಯನ್ನು ಒಂದು ಕೆರೆಯಲ್ಲಿ ಕಂಡ. ತುಂಬಾ ಕೃಶವಾಗಿದ್ದ ಆಮೆ ಕಷ್ಟಪಟ್ಟು ಮೇಲೆ ಬಂದು ಇವನ ಕಥೆ ಕೇಳಿ, 'ನನಗೆ ಇಂದ್ರದ್ಯುಮ್ನ ರಾಜನ ಹೆಸರು ಗೊತ್ತು, ಅವನೇ ಈ ಕೆರೆಯನ್ನು ಕಟ್ಟಿಸಿದ್ದು, ನಾನು ಚಿಕ್ಕವನಿದ್ದಾಗ ನನ್ನಜ್ಜ ನನಗೆ ಇದನ್ನು ಹೇಳಿದ' ಎಂದು ಹೇಳಿತು.

ರಾಜ ಹೇಳಿದ, 'ನಾನೇ ಇಂದ್ರದ್ಯುಮ್ನ, ಆದರೆ ನಾನು ಈ ಕೆರೆಯನ್ನು ಕಟ್ಟಿಸಿದ್ದಲ್ಲ' ಎಂದ.

'ನನ್ನಜ್ಜ ಸುಳ್ಳು ಹೇಳುವವನಲ್ಲ, ಈ ರಾಜ ಸ್ವರ್ಗದಾಸೆಗಾಗಿ ಸಾವಿರಾರು ಹಸುಗಳನ್ನು ದಾನ ಮಾಡುತ್ತಿದ್ದನಂತೆ, ಅವು ಊರ ಹೊರಗೆ ಬಂದಾಗ ಮುಂದೆಕ್ಕೆ ಹೋಗದೆ ಅಲ್ಲೇ ನಿಂತು ಬಿಡುತ್ತಿದ್ದವಂತೆ. ದಾನ ಪಡೆದವರು ಅವುಗಳನ್ನು ಬಲವಂತವಾಗಿ ಎಳೆದು ಕರೆದುಕೊಂಡು ಹೋಗುತ್ತಿದ್ದರಂತೆ. ಆ ಎಳೆದಾಟದಲ್ಲಿ, ಅವುಗಳ ಪಾದದಿಂದ ನೆಲ ಕೆದರಿ, ಕೆದರಿ ದೊಡ್ಡ ಗುಂಡಿಯಾಯಿತಂತೆ. ಮಳೆ ಬಂದಾಗ ಆ ಗುಂಡಿಗಳಲ್ಲಿ ನೀರು ನಿಂತು ಈ ಕೆರೆಯಾಯಿತಂತೆ. ಈ ಕೆರೆ ಎಷ್ಟೋ ಪ್ರಾಣಿ, ಪಕ್ಷಿಗಳಿಗೆ ರಾಜನಿಗೆ ಗೊತ್ತಿಲ್ಲದೇ ಆಸರೆಯಾಯಿತು. ಅವನ ಕೃಪೆಯಿಂದಾದ ಕೆರೆ ಇದು. ಹಾಗಾಗಿ ನಾವೆಲ್ಲ ಅದನ್ನು ಈಗಲೂ ನೆನೆಸಿಕೊಳ್ಳುತ್ತೇವೆ' ಎಂದು ಹೇಳಿತು ಮುದಿ ಆಮೆ. ಆಗ ತಕ್ಷಣ ಪ್ರತ್ಯಕ್ಷನಾದ ದೇವದೂತ 'ಬನ್ನಿ ಸ್ವಾಮಿ ನಿಮ್ಮ ಸ್ವರ್ಗದ ಅವಧಿ ಇನ್ನೂ ಇದೆ' ಎಂದು ಕರೆದುಕೊಂಡು ಹೋದ.

ತಮಾಷೆ ಎಂದರೆ ಸ್ವರ್ಗದ ಆಸೆಯಿಂದಾಗಿ ಮಾಡಿದ ಕೆಲಸ, ಸ್ವರ್ಗದಲ್ಲಿ ಅವನನ್ನು ಹೆಚ್ಚು ಸಮಯ ಉಳಿಸಲಿಲ್ಲ. ಆದರೆ ರಾಜನಿಗೆ ಗೊತ್ತಿಲ್ಲದಂತೆ, ಅನಿರೀಕ್ಷಿತವಾಗಿ ಆದ ಒಳ್ಳೆಯ ಕೆಲಸದಿಂದ ಅವನಿಗೆ ಮತ್ತೆ ಸ್ವರ್ಗ ಲಭಿಸಿತು.

ಲಾಭದ ಆಸೆಗಾಗಿ, ಜನರ ಹೊಗಳಿಗಾಗಿ ಮಾಡಿದ ಕೆಲಸ ಎಂದೂ ಶಾಶ್ವತವಾಗಿರುವುದಿಲ್ಲ. ಯಾವುದೇ ಅಪೇಕ್ಷೆ ಇಲ್ಲದೆ ಮಾಡಿದ ಸಹಾಯ, ಒಳ್ಳೆಯ ಕೆಲಸಗಳ ಒಳ್ಳೆಯ ಫಲ ನಮಗೆ ಖಂಡಿತ ದೊರೆಯುತ್ತದೆ.

ಪ ದ ಬಂ ಧ



ಎಡದಿಂದ ಬಲಕ್ಕೆ

2. ದ್ರವರೂಪದ ಲೋಹವನ್ನು ಅಚ್ಚಿಗೆ ಎರೆಯುವಿಕೆ (3)
5. ಒಣಜಂಭವು ಬರದ ಮಧ್ಯೆ ಬಂದಿದೆ (4)
6. ಬಣ್ಣವೇರು ಎನ್ನುವ ಪದ (4)
8. ಮಾನಿನಿಗೇನೋ ಸಂಶಯ (3)
11. ಸವಾಲಿಗೆ ಸಿಕ್ಕ ಉತ್ತರ (3)
12. ನೀರಿನ ನಳ (3)
13. ಮುಖಕ್ಕೆ ಮತ್ತೊಂದು ಪದ (3)
17. ಒಂದು ಭಾಷೆಯಿಂದ ಮತ್ತೊಂದಕ್ಕೆ ಮಾಡಿದ ತರ್ಜುಮೆ (4)
18. ಬಾಣಸಿಗನಿಗೆ ಮತ್ತೊಂದು ಹೆಸರು (4)
19. ಅಸ್ತವ್ಯಸ್ತವಾಗಿ ಬಂದಿರುವ ದೊಡ್ಡ ಪಟ್ಟಣ (3)

ಎಡದಿಂದ ಬಲಕ್ಕೆ

1. ಅಮ್ಮನ ಉಡಿ (3)
2. ಹಾನಿಯಾಗುವುದನ್ನು ಹೇಳುವ ಪದ (4)
3. ಮರುಕವು ಇಲ್ಲಿ ಅಸ್ತವ್ಯಸ್ತವಾಗಿ ಬಂದಿದೆ (4)
4. ವಿಶ್ವ ಅಥವಾ ಪ್ರಪಂಚ (3)
7. ಹಕ್ಕಿಗಳ ಧ್ವನಿಯಲ್ಲಿ ಮಂದಿಯೂ ಇದ್ದಾರೆ (3)
9. ಅಳತೆ ಮಾಡುವಿಕೆಗೆ ಮತ್ತೊಂದು ಹೆಸರು (3)
10. ಮೃತ್ಯು ಪತ್ರಕ್ಕೆ ಮತ್ತೊಂದು ಹೆಸರು (3)
13. ವೇದನೆಯೇನಿಲ್ಲ, ಮನವಿಯಷ್ಟೇ (4)
14. ದೇವಾಲಯದ ಸಭಾಮಂಟಪ (4)
15. ತಮ್ಮನಿಗೆ ಮತ್ತೊಂದು ಹೆಸರು (3)
16. ನವರತ್ನಗಳಲ್ಲಿ ಒಂದಾದ ಕೆಂಪುಹರಳು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ಅಡಮಾನ 5. ಪಯಣಿಗ 6. ಕುಹಕ 7. ಸಮತಲ 9. ಗರಿ 11. ನಾದ 12. ವಾಸುಕಿ 13. ಆಲಸಿ 14. ನಂಜು 16. ಕವಿ 18. ಅನಿಯತ 20. ದೀನಾರ 21. ನಮಸ್ಕಾರ 22. ಸಮುದಾಯ

ಮೇಲಿನಿಂದ ಕೆಳಕ್ಕೆ: 1. ಉಪಯೋಗ 2. ಅಗಸ 3. ನಕುಲ 4. ಮಕರಂದ 8. ಮಗ್ಗ 10. ರಿವಾಜು 11. ನಾಸಿಕ 14. ನಂದಾದೀಪ 15. ಗಾಯ 17. ವಿಸ್ತರಣೆ 18. ಅರಸ 19. ತನಯ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಕಾಮನಬಿಲ್ಲು ಬೆಟ್ಟ

ಪೆರುನಲ್ಲಿ ಹಲವಾರು ರೀತಿಯ ನೈಸರ್ಗಿಕ ದೃಶ್ಯಕಾವ್ಯಗಳನ್ನು ಹೊಂದಿದೆ. ಅದರಲ್ಲಿ ಅಮೆಜಾನ್ ನದಿಯಿಂದ, ಸೆಚುರಾ ಮರಭೂಮಿಯೆಡಗೆ, ಅದರ ಜತೆ ಅಮೆಜಾನ್ ಕಾಡುಗಳನ್ನೂ ಹೊಂದಿದೆ. ಅದರಲ್ಲು ಪೆರುವಿನಲ್ಲಿ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವೆಂದರೆ, ವಿನಿಕುಂಕಾ. ಅದು ಕಾಮನಬಿಲ್ಲುವಿನ ಬೆಟ್ಟ ಎಂದು ಕರೆಯುತ್ತಾರೆ. ಇದರ ಬಣ್ಣದ

ಕಾರಣ ಇಲ್ಲಿರುವ 14 ಕ್ಕೂ ಹೆಚ್ಚು ವಿವಿಧ ಖನಿಜಗಳು ಸೇರಿರುವುದರಿಂದ ಈ ಶೃಂಗಶ್ರೇಣಿಗಳಿಗೆ ವಿವಿಧ ಬಣ್ಣಗಳು ಬಂದಿದ್ದು, ಪ್ರವಾಸಿಗರ ಅತ್ಯಂತ ಮೆಚ್ಚಿನ ತಾಣವೂ ಹೌದು. ಏನಾದರೂ ಪೆರುವಿಗೆ ಹೋಗುವ ಪ್ಲಾನ್ ಇದ್ದರೆ, ವಿನಿಕುಂಕಾ ಪರ್ವತಕ್ಕೂ ಭೇಟಿ ನೀಡಿ.

ಪುಸ್ತಕ ಲೋಕ

ಸತ್ಕುಲಪ್ರಸೂತರು

ಗುರುಪ್ರಸಾದ ಕಾಗಿನೆಲೆ ಅವರ ಕಾದಂಬರಿ, ಹಲವು ಪದರಗಳಿರುವ ನಿರೂಪಣೆ, ಹಲವು ಕೋನಗಳಿಂದ ನಡೆಯುವ ನಿರೂಪಣೆ ಇರುವ ಕನ್ನಡ ಕಾದಂಬರಿ ಓದಿ ಬಹಳ ಬಹಳ ವರ್ಷಗಳೇ ಕಳೆದಿವೆ. ಒಂದು ಮಾತಲ್ಲಿ ಹೇಳಬೇಕು ಅಂದರೆ ಇದು ನಾವು ಬದುಕುತ್ತಿರುವ ಈ 2024ರ ಬದುಕಿಗೆ ನನ್ನ ತಲೆಮಾರಿನವರೊಬ್ಬರು ಅಮೆರಿಕದಲ್ಲಿ ಕೂತು ಹಿಡಿದಿರುವ ಕನ್ನಡಿ. ಬೇರೆ ಬೇರೆ ಕಾಲಘಟ್ಟಗಳಲ್ಲಿಯೂ ಬದಲಾಗದ ಸಮಸ್ಯೆಯನ್ನು 'ಸತ್ಕುಲಪ್ರಸೂತರು' ಪರಿಶೀಲಿಸಿದೆ. ಕಾದಂಬರಿಯೊಂದು ಕಥೆಯ ಕಾಲವನ್ನು ಹೇಗೆ ನಿರ್ವಹಿಸುತ್ತದೆ ಎಂಬುದು ಮುಖ್ಯ ಸಂಗತಿಯಾಗುತ್ತದೆ. ಈ ಕಾದಂಬರಿಯು ನವೋದಯ, ನವ್ಯಗಳ ಮಾರ್ಗವನ್ನು ಬಿಟ್ಟು ಕಾಲವನ್ನು ಕೌದಿಯ ಹಾಗೆ ಹೆಣೆದಿದೆ. ಇದು ಆತ್ಮಕಥೆಯೋ, ಸಮುದಾಯವೊಂದರ ಆಚರಣೆಗಳ ದಾಖಲೆಯೋ, ಹುಟ್ಟಿದ ನೆಲ ಮತ್ತು ಸಾಕಿದ ಕುಟುಂಬ, ನಂಟಸ್ತನ, ಪರಿಚಿತ ಉದ್ಯೋಗಗಳಿಲ್ಲದರಿಂದ ದೂರವಾಗಿ ಬದುಕುವ ಜನಸಮೂಹದ ಸ್ವವಿಮರ್ಶೆಯೋ, ಬರೆಯಲಿರುವ ಕಾದಂಬರಿಯೊಂದರ ಟಿಪ್ಪಣಿಯೋ, ಇದೇ ಕಾದಂಬರಿಯೋ, ಇಲ್ಲಿರುವಂಥ ನಿರೂಪಣೆ ಕಾದಂಬರಿಯ ನಿರೂಪಕನ ಅಗತ್ಯ ಮತ್ತು ಕಾದಂಬರಿಯ ಪಾತ್ರವೊಂದರ ಒತ್ತಾಯದಿಂದ ರೂಪುಗೊಂಡದ್ದೋ ಎಂದು 'ಸತ್ಕುಲಪ್ರಸೂತ'ರನ್ನು ಹಲವು ಕೋನಗಳಿಂದ ನೋಡಲು ಸಾಧ್ಯವಿದೆ ಎಂಬುವುದನ್ನು ಈ ಪುಸ್ತಕದಲ್ಲಿ ನೋಡಬಹುದು.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● 2023 ರ 'ವಿಶ್ವ ಏಡ್ಸ್ ದಿನ'ದ ವಿಷಯ ಯಾವುದು?

- ಎ. ಸಮುದಾಯಗಳು ಮುನ್ನಡೆಸಲಿ.
- ಬಿ. ಹೀಲಿಂಗ್‌ಗಾಗಿ ಸಮುದಾಯ.
- ಸಿ. ಅರಿತು ನಡೆ.
- ಡಿ. ಏಡ್ಸ್ ಮುಕ್ತ ಸಮಾಜ.

ಉತ್ತರ: ಎ. ಸಮುದಾಯಗಳು ಮುನ್ನಡೆಸಲಿ.

ಮಾಹಿತಿ

ಪ್ರತಿ ವರ್ಷ ಡಿಸೆಂಬರ್ 1 ನ್ನು ವಿಶ್ವ ಏಡ್ಸ್ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. 2023 ರ ಥೀಮ್ 'ಸಮುದಾಯಗಳು ಮುನ್ನಡೆಸಲಿ' ಎಂದಾಗಿದೆ. ಈ ಥೀಮ್ ಎಚ್‌ಐವಿ ಪ್ರತಿಕ್ರಿಯೆಯಲ್ಲಿ ಸಮುದಾಯಗಳ ಪ್ರಾಮುಖ್ಯತೆ ಮತ್ತು 2030 ರ ವೇಳೆಗೆ ಏಡ್ಸ್ ಅನ್ನು ಕೊನೆಗೊಳಿಸುವ ಗುರಿಯನ್ನು ಎತ್ತಿ ತೋರಿಸುತ್ತದೆ. ವಿಶ್ವ ಏಡ್ಸ್ ದಿನವು ಏಡ್ಸ್ ಸಾಂಕ್ರಾಮಿಕದ ಬಗ್ಗೆ ಜಾಗೃತಿ ಮೂಡಿಸುವ ಮತ್ತು ರೋಗದಿಂದ ಮೃತಪಟ್ಟವರಿಗೆ ಶೋಕ ವ್ಯಕ್ತಪಡಿಸುವ ಅಂತಾರಾಷ್ಟ್ರೀಯ ದಿನವಾಗಿದೆ. ಇದು ಚಿಕಿತ್ಸೆ ಮತ್ತು ತಡೆಗಟ್ಟುವ ಸೇವೆಗಳಿಗೆ ಹೆಚ್ಚಿನ ಪ್ರವೇಶದಂತಹ ವಿಜಯಗಳನ್ನು ಆಚರಿಸುತ್ತದೆ.

ನಮ್ಮ ದೃಷ್ಟಿಯಂತೆ ನಮ್ಮ ಯೋಚನೆಗಳು

● ವಿದ್ಯಾ ಶಂಕರ ಶರ್ಮ

ಅವರವರ ಭಾವಕ್ಕೆ ಅವರವರ ಭಕುತಿಗೆ ಎಂಬಂತೆ ಹೊರಗಿನ ಪ್ರಪಂಚವು ನಮಗೆ ತೋರುವುದು ನಮ್ಮ ಸಂಸ್ಕಾರದ ಮೂಲಕವೇ. ನಮ್ಮ ಗುಣ ಸ್ವಭಾವಗಳು ನಮ್ಮ ಭಾವನೆಗಳನ್ನು ಆಳುತ್ತವೆ. ಈ ಕಾರಣದಿಂದ ಹೊರಗಿನ ಘಟನೆಗಳಿಗೆ ಒಬ್ಬೊಬ್ಬರ ಪ್ರತಿಕ್ರಿಯೆ ಭಿನ್ನ. ಸೃಷ್ಟಿಯ ವೈಚಿತ್ರ್ಯವೂ ಇದೆ. ಹೀಗಾದಾಗ ಅನುಭವಗಳು ವಿಧವಿಧವಾಗಿ ರೂಪುಗೊಳ್ಳುತ್ತವೆ. ಬದುಕಿನ ಸನ್ನಿವೇಶಗಳಲ್ಲಿ ಪ್ರತಿ ವ್ಯಕ್ತಿಯ ನಡೆಯೂ ಅದರದೇ ಆದ ರೀತಿಯಲ್ಲಿ ವಿಶಿಷ್ಟವಾಗಿರುವ ಸಾಧ್ಯತೆಯೇ ಹೆಚ್ಚು. ನಮ್ಮ ಹಾಗೆ ಇನ್ನೊಬ್ಬರು ಯೋಚಿಸಬೇಕೆಂಬ ನಮ್ಮ ನಿರೀಕ್ಷೆ ದೋಷಪೂರಿತವಾದದ್ದು. ಶ್ರೀರಾಮಕೃಷ್ಣ ಪರಮಹಂಸರ ಒಂದು ಸುಂದರ ದೃಷ್ಟಾಂತವು ಲೋಕವನ್ನು ನಾವು ನೋಡುವ ಕೋನಗಳು ಹೇಗೆ ವೈವಿಧ್ಯಮಯ ಎಂಬುದನ್ನು ನಿರೂಪಿಸುತ್ತದೆ.

ಒಮ್ಮೆ ಒಬ್ಬ ಸಾಧುವು ದಾರಿಯ ಪಕ್ಕದಲ್ಲಿ ಸಮಾಧಿಯಲ್ಲಿ ಮಗ್ನರಾಗಿದ್ದರು. ಕತ್ತಲಾದ ಆ ಸಮಯದಲ್ಲಿ ಕೆಲವು ಕಳ್ಳರು ಆ ದಾರಿಯಲ್ಲಿ ಹೋಗುತ್ತಿದ್ದಾಗ ಈ ಸಾಧುವನ್ನು ನೋಡಿದರು. ಆಗ ಅವರ ಪ್ರತಿಕ್ರಿಯೆ ಹೀಗಿತ್ತು: 'ಇವನು ಯಾರೋ ಕಳ್ಳನಿರಬೇಕು, ಪೋಲಿಸರಿಂದ ತಪ್ಪಿಸಿಕೊಳ್ಳಲು ಈ ರೀತಿ ನಿದ್ದೆಯಲ್ಲಿ ಇದ್ದಂತೆ ನಾಟಕ ಮಾಡುತ್ತಿದ್ದಾನೆ, ಪೋಲಿಸರು ಇದೇ ದಾರಿಯಲ್ಲಿ ಬರಬಹುದು' ಎನ್ನುತ್ತ ಬೇಗ ಬೇಗ ಅಲ್ಲಿಂದ ತೆರಳಿದರು. ತುಸು ಹೊತ್ತಿನ ನಂತರ ಒಬ್ಬ ಕುಡುಕನು ಆ ಹಾದಿಯಲ್ಲಿ ಬಂದವನು, ಸಾಧುವನ್ನು ನೋಡಿದನು. ಅವನ ಯೋಚನಾ ಲಹರಿ ಹೀಗಿತ್ತು: 'ಓ ನೀನು ಕುಡಿದು ಸಮತೋಲನ ತಪ್ಪಿ ಬಿದ್ದು ಬಿಟ್ಟಿದ್ದೀಯ, ನನ್ನನ್ನು ನೋಡು ಇನ್ನೂ ಸ್ಥಿರವಾಗಿ ಹೆಜ್ಜೆ ಹಾಕುತ್ತಿದ್ದೇನೆ'. ಇದಾದ ಸ್ವಲ್ಪ ಸಮಯದ ನಂತರ ಋಷಿಯೊಬ್ಬರು ಆ ಮಾರ್ಗವಾಗಿ ಬಂದರು. ಅವರು ಈ ಸಾಧುವನ್ನು ಕಂಡು, 'ಓಹೋ ಇವರು ಯಾರೋ ಸಾಧಕರು, ಗಾಢ ಸಮಾಧಿಯಲ್ಲಿ ಇದ್ದಾರೆ' ಎಂದುಕೊಂಡು ಅವರ ಕಾಲುಗಳನ್ನು ಒತ್ತಲು ಆರಂಭಿಸಿದರು.

ಒಂದೇ ಸಂದರ್ಭಕ್ಕೆ ಎಷ್ಟು ಬಗೆಯ ಪ್ರತಿಫಲನಗಳು! ಅಂದರೆ ನಾವು ಬೆಳೆದ ವಾತಾವರಣ, ನಮ್ಮ ಸಂಸ್ಕಾರಗಳು, ನಾವು ಜೀವನದಲ್ಲಿ ಅಂದುಕೊಂಡು ಆದರ್ಶಗಳು, ಮಾನಸಿಕ ಪ್ರಬುದ್ಧತೆ ಇವೆಲ್ಲವೂ ಕೂಡಿಕೊಂಡು ನಮ್ಮ ಅಭಿಪ್ರಾಯ ಅಥವಾ ಪ್ರತಿಕ್ರಿಯೆಯಾಗಿ ಹೊರ ಹೊಮ್ಮುತ್ತವೆ. ಈ ದೃಷ್ಟಿಯಿಂದ ಗಂಭೀರವಾಗಿ ಯೋಚಿಸಿದಾಗ ಅನಿಸುವುದು ನಾವು ಇಂದು ದಿನವೂ ನೋಡುತ್ತಿರುವ, ಕೇಳುತ್ತಿರುವ ಚಿತ್ರ, ವಿಚಿತ್ರ ಸಂಘರ್ಷಗಳು, ಪೈಶಾಚಿಕ ವರ್ತನೆಗಳು, ಸಂಬಂಧಗಳ ಮದ್ಯೆ ಅಪಾರ್ಥಗಳು, ಇವೆಲ್ಲವುಗಳ ಬೇರು ಮನುಷ್ಯನ ಸಂಸ್ಕಾರಗಳಲ್ಲಿಯೇ ಇರುವುದು. ಸಂಸ್ಕಾರದಿಂದ ವ್ಯಕ್ತಿತ್ವ, ಅದರಿಂದ ರೂಪಿತವಾದ ದೃಷ್ಟಿಕೋನ, ದೃಷ್ಟಿಕೋಪದಿಂದ ಯೋಚನೆಗಳು, ಯೋಚನೆಗಳಿಂದ ವರ್ತನೆಗಳು, ಕಾರ್ಯಗಳು ಎಲ್ಲ.

ಅನುಭವಗಳು ಬೇರೆಯಾಗುವುದು ಇದೇ ಕಾರಣಕ್ಕಾಗಿ. ಒಳ್ಳೆಯ ಕರ್ಮಗಳನ್ನು ಮಾಡುವ ಮನಸ್ಸಿರುವವನು ಅಂತಹ ಕೆಲಸಗಳ ಅನುಭವವನ್ನೇ ಎದುರುನೋಡುವುನು. ಅದೇ ಕಲ್ಮಷಪೂರಿತ ಯೋಚನೆಗಳ ದಾಸನು ಅದೇ ರೀತಿಯ ಅನುಭವಕ್ಕೆ ತೆರೆದುಕೊಳ್ಳುತ್ತಾನೆ, ಏಕೆಂದರೆ ಅದೇ ಅವನಿಗೆ ಸರಿ ಎಂದು ಕಾಣುವುದು. ನಮ್ಮ ನೈತಿಕತೆಯ ಆಧಾರ ಸ್ತಂಭಗಳು ದೃಢವಾಗಿರದ್ದಿದ್ದರೆ ನಾವು ಮತ್ತೆ ಮತ್ತೆ

ಅಸಂತೋಷದ ಅನುಭವಗಳಿಗೆ ಸಾಕ್ಷಿಯಾಗುತ್ತೇವೆ. ಅದು ನಮ್ಮ ದೈನಂದಿನ ಬದುಕಿರಬಹುದು, ವ್ಯಾವಹಾರಿಕ ಸಂಬಂಧಗಳಿರಬಹುದು, ಉದ್ಯೋಗ, ಹೀಗೆ ನಾವು ಭಾಗವಾಗುವ ಎಲ್ಲ ಆಗು ಹೋಗುಗಳಲ್ಲಿ ವಿಪ್ಲವಗಳು ಜರುಗುವುದಂತೂ ನಿಶ್ಚಿತ. ನಮಗೆ ಜೀವನ ಮೌಲ್ಯಗಳನ್ನು ಅರಿಯುವ, ಒಂದು ಸುಶಿಕ್ಷಿತ ವಾತಾವರಣ ಸಿಗುವ, ಆರೋಗ್ಯಕರ ಮಾರ್ಗದರ್ಶನ ಸಿಗುವ ಅವಕಾಶ, ಅದೃಷ್ಟ ಮತ್ತು ದೈವ ಕೃಪೆ ಇದ್ದರೆ ಅಷ್ಟರ ಮಟ್ಟಿಗೆ ನಮ್ಮ ಜೀವನ ಶಾಂತಿ ಮತ್ತು ಸಮಾಧಾನದ ಗೂಡಾದೀತು. ಅಂತಹ ಧನಾತ್ಮಕ ಚಿಂತನೆಗಳು ನಮ್ಮಲ್ಲಿ ಮತ್ತೆ ಮತ್ತೆ ಉದಯಿಸಿ ನಾಲ್ಕು ದಿನಗಳ ಈ ಬದುಕಿನ ಪಯಣವು ಧನ್ಯತೆಯನ್ನು ಪಡೆಯುತ್ತದೆ. ಹಾಗಾದಾಗ ಒಂದು ಉತ್ತಮ ಸಮಾಜದ ನಿರ್ಮಾಣವು ಸಾಧ್ಯವಾಗುತ್ತದೆ.

ಬಯಸಿದಂತಲ್ಲ ಬದುಕು!

● ಅಂಜಲಿ ಶ್ರೀನಿವಾಸ

ಬದುಕಿನಲ್ಲಿ ಪ್ರತಿಯೊಬ್ಬರಿಗೂ ತನ್ನದೆ ಆದ ಕನಸುಗಳು ಆಸೆ ಆಕಾಂಕ್ಷೆಗಳಿರುತ್ತವೆ. ತನ್ನ ಬದುಕನ್ನು ಹೀಗೆ ಬದುಕಬೇಕೆಂಬ ಹಂಬಲವಿರುತ್ತದೆ. ಆದರೆ ಬಯಸಿದಂತಲ್ಲ ಬದುಕು ನಮ್ಮ ನಿರೀಕ್ಷೆ ಆಸೆಗಳ ತದ್ವಿರುದ್ಧವಾಗಿರುತ್ತದೆ. ಕಂಡ ಕನಸುಗಳನ್ನ ಕಸವಾಗಿಸಲು ಕ್ಷಣಿಕ ಸಾಕು ಈ ಬಲಶಾಲಿ ಬದುಕಿಗೆ. ನಾಳೆಗಳು ಯಾರಿಗೆ ತಿಳಿದಿದೆ, ನಾಳೆಗಳ ನಿರೀಕ್ಷೆಯಲ್ಲೆ ಸಾಗಿದ ಬದುಕಿಗೆ ನಿರೀಕ್ಷೆಗಳೆ ನೋವು ತಂದೊಡ್ಡುತ್ತದೆ. ಕೆಲವು ವಾಸ್ತವಗಳು ಉಸಿರುಗಟ್ಟಿಸುವುದು.

ಸಮಯ ಕಳೆದಂತೆ ಅವೇ ವಾಸ್ತವಗಳು ನಿಟ್ಟುಸಿರು ಬಿಡುವಂತೆ ಮಾಡುವವು. ಎಲ್ಲರ ಜೀವನ ಒಂದೇ ರೀತಿಯಾಗಿರುವುದಿಲ್ಲ ಬರೀ ಸುಖವೇ ಕಂಡವರು ಸುಖವಾಗೆ ಇರತಾರೆ ಕಷ್ಟದಲ್ಲಿ ಬೆಳೆದವರು ಕಷ್ಟವೇ ಅನುಭವಿಸುತ್ತಾರೆ. ಹೀಗಿರುವಾಗ ಕೆಲವುಸಾರಿ ದೇವರು ಪಕ್ಷಪಾತಿಯಾ ಎಂದು ಮನಸ್ಸಿನೊಳಗೊಂದು ಪ್ರಶ್ನೆಯೂ ಹುಟ್ಟುತ್ತದೆ.

ಒಮ್ಮೆ ಸ್ನೇಹಿತೆಯರಿಬ್ಬರು ಬಹು ವರ್ಷಗಳ ನಂತರ ದೇವಸ್ಥಾನದಲ್ಲಿ ಭೇಟಿಯಾದರು. ತಮ್ಮ ಹಳೆ ನೆನಪುಗಳನ್ನು ಮೆಲುಕು ಹಾಕುತ ಕೂತರು ಮೊದಲಿನ ಜೀವನ ಅದೆಷ್ಟು ಸುಂದರ ಈಗಿನ ಬದುಕಿನ ಬಗ್ಗೆ ಜಿಗುಪ್ಸೆ ಹುಟ್ಟಿರುವುದಾಗಿ ಹೇಳಿಕೊಳ್ಳುತ್ತಾರೆ. ಒಬ್ಬ ಸ್ನೇಹಿತೆ ನಾನೊಬ್ಬ ಗೃಹಿಣಿ ಮನೆ ಮಕ್ಕಳು ಗಂಡ ಎಲ್ಲರ ಕಾಳಜಿಯಲ್ಲಿ ಜೀವನ ಸವೆಸುವುದು. ದಿನ ಬೆಳಗಾದರೆ ಬಿಡುವಿಲ್ಲದ ಜೀವನಕ್ಕೆ ಬೆಸೆತ್ತುಹೋಗಿರುವೆ. ಸಾಕಪ್ಪ ಈ ಜೀವನ! ಎಂಬ ಮಟ್ಟಿಗೆ ಬಂದಿರುವೆ ಎಂದಳು. ಇನ್ನೊಬ್ಬ ಸ್ನೇಹಿತಳು ಅವಳ ಮಾತಿಗೆ ನಿಜ ಮದುವೆಯಾದ ಬದುಕು ಹೀಗೆ ನಾನು ಕೂಡ ದಿನ ಬೆಳಗಾದರೆ ಮನೆಗೆಲಸ ಮಕ್ಕಳ ಟಿಫನ್ ತಯಾರಿಸಿ ಸ್ಕೂಲಿಗೆ ಕಳಸಿ ಗಂಡನನ್ನು ಆಫಿಸಿಗೆ ಕಳಸಿ ನನಗೆ ಟೀಫಿನ್ ಕಟ್ಟಿಕೊಂಡು ನಾನು ಕೂಡ ಆಫಿಸ್‌ಗೆ ಹೋಗಿ ಸಂಜೆ ಮತ್ತೆ ಸ್ಕೂಲಿಂದ ಮಕ್ಕಳನ್ನ ಕರೆದುಕೊಂಡು ಬಂದು ಅವರಿಗೆ ಹೋಮ್ ವರ್ಕ್ ಮಾಡಿಸಿ ಮತ್ತೆ ರಾತ್ರಿ ಅಡುಗೆ ಮಾಡಿ ಕೊಳ್ಳೊವಷ್ಟರಲ್ಲಿ ಸಾಕಾಗುತ್ತೆ ಪೇರೆಂಟ್ಸ್ ಮೀಟಿಂಗ್ ಆಫಿಸ್ ಕೆಲಸ ಅದು ಇದು ಅಂತ ಹತ್ತು ಟೆನ್ಸನ್‌ಗಳು ಈ ಬಾಳು ಗೋಳು ಎಂದು ಕೂತವರ ಮುಂದೆ ಅವಳೊಬ್ಬ ಮಹಿಳೆ ಗುರುಗಳ ಮುಂದೆ ತನ್ನ ಮಗ ಆಂಗ್ಲ ವರ್ಣಮಾಲೆ ಮತ್ತು 1ರಿಂದ 20ರವರೆಗೆ ಸಂಖ್ಯೆಯನ್ನು ಕಂಠಪಾಠ ಮಾಡಿ ಹೇಳಿತಿರುವುದನ್ನು ನೋಡಿ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುತ್ತ, ಆನಂದ ಭಾಷ್ಪ ಸುರಿಸುತ್ತಿದ್ದಳು. ಹದಿನಾರು ವರ್ಷದ ಮಗ ವರ್ಣಮಾಲೆ ಹೇಳುವುದೇನು ಮಹಾ ಎಂದು ಇವರಂದುಕೊಂಡು. ಆ ಹುಡುಗನನ್ನು ನೋಡತಾರೆ ಅವನು ವಯಸ್ಸಿಗೆ ಮೀರಿದ ದೇಹ ದೇಹಕ್ಕಿಂತ ತಲೆ ದೊಡ್ಡದು ಸಣ್ಣ ಕೈಕಾಲು ಬುದ್ಧಿಮಾಂಧ್ಯದ ಹುಡುಗ ತಾಯಿಯು ಕಂಕುಳಲ್ಲಿ ಕುರಿಸಿಕೊಂಡು, ಮತ್ತೆ ದೇವಸ್ಥಾನದ ಎದುರು ತೆಂಗಿನಕಾಯಿ ಅಂಗಡಿ ವ್ಯಾಪಾರ ಮಾಡತಾ ಕೂತಳು. ಈ ಇಬ್ಬರು ಮಹಿಳೆಯರಿಗೆ ಅಚ್ಚರಿ ಮರುಕವೂ ಆಯಿತು. ದೇವರು ಎಲ್ಲರ ಜೀವನ ಒಂದೇ ರೀತಿಯಾಗಿರಿಸಿಲ್ಲ. ಎಲ್ಲರಿಗೂ ಅವರದ್ದೆ ಆದ ಜವಾಬ್ದಾರಿಯ ಸಂಖಲೆಗಳಲ್ಲಿ ಇರುತ್ತಾನೆ. ಯಾವಾಗಲೂ ನಾವು ನಮಗಿಂತ ಸ್ಥಿತಿವಂತರನ್ನ ನೋಡಿ ನಮ್ಮ ಪರಿಸ್ಥಿತಿಯ ಬಗ್ಗೆ ತಲೆಕೆಡಿಸಿಕೊಳ್ಳುತ್ತವೆ ನಾವು ನಮಗಿಂತ ಕಷ್ಟದಲ್ಲಿರುವವರ ಬಗ್ಗೆ ನೆನಪಿಸಿಕೊಳ್ಳುವುದು ತೀರಾ ಕಡಿಮೆ. ಚಪ್ಪಲಿ ಇಲ್ಲ ಎಂದು ಅಳುವವರ ಮಧ್ಯ ಕಾಲಿಲ್ಲದವರ ಜೀವನ ಹೇಗೆ ಎಂಬುವುದು ಮರೆತು ಬಿಡುತ್ತೇವೆ.

ಬದುಕಿನ ದಾರಿ ಬರೀ ಹೂವುಗಳೇ ತುಂಬಿರಲಿ ಕಷ್ಟವೆ ಇರದಿರಲಿ ಜಗದಲ್ಲಿ ನಮ್ಮನ್ನ ಪ್ರೀತಿಸುವವರೇ ಇರಲಿ. ಶತೃಗಳೇ ಇರದಿರಲಿ ಎಂದು ಬಯಸಿದರೆ ಅದು ಸಾಧ್ಯವೇ..? ಬದುಕಿನ ಏಳು ಬೀಳಿನ ದಾರಿಯಲ್ಲಿ ಕುಗ್ಗದೆ ಸಮಸ್ಯೆಗಳ ಎದುರಿಸುವ ತಾಳ್ಮೆ ಶಕ್ತಿಯು ಇರಲಿ. ಅಂದುಕೊಂಡಂತೆ ಬದುಕಲ್ಲ ಬಂದಂತೆ ಬದುಕಬೇಕು ನೊಂದು ಕೂರುವುದಲ್ಲ ನೋವನ್ನು ಕೊಂದು ಬದುಕಬೇಕು.

ಸಮಾಚಾರ ಸಣ್ಣದಲ್ಲ

ಐಎಸ್ಸೆಸ್‌ಎಫ್: ಭಾರತಕ್ಕೆ ಎರಡು ಕಂಚು

ದೆಹಲಿ: ಭಾರತ ರೈಫಲ್ ಮತ್ತು ಪಿಸ್ತೂಲ್ ಶೂಟರ್‌ಗಳು, ಪೆರು ರಾಜಧಾನಿ ಲಿಮಾದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್‌ನ 10ಮೀ. ಮಿಶ್ರ ತಂಡ ಸ್ಪರ್ಧೆಯಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಭಾರತ ಈ ಮೂಲಕ ಕೂಟದಲ್ಲಿ ಐದು ಪದಕಗಳನ್ನು (ಎರಡು ಚಿನ್ನ, ಮೂರು ಕಂಚು) ಗೆದ್ದುಕೊಂಡಂತೆ ಆಗಿದೆ. ಐಎಸ್‌ಎಸ್‌ಎಫ್‌ನ ಪೂರ್ಣ ರೂಪ ಇಂಟರ್‌ನ್ಯಾಷನಲ್ ಶೂಟಿಂಗ್ ಸ್ಪೋರ್ಟ್ಸ್ ಫೆಡರೇಷನ್. ರೈಫಲ್ ಶೂಟಿಂಗ್‌ನಲ್ಲಿ ಗೌತಮಿ ಭಾನೋಟ್ ಮತ್ತು ಅಜಯ್ ಮಲಿಕ್ ಅವರನ್ನೊಳಗೊಂಡ ತಂಡ 628.09 ಸ್ಕೋರ್‌ನೊಡನೆ 34 ಜೋಡಿ ಸ್ಪರ್ಧಿಗಳ ಪೈಕಿ ಮೂರನೇ ಸ್ಥಾನ ಪಡೆದು ಕಂಚಿನ ಪದಕದ ಸ್ಪರ್ಧೆಗೆ ಅರ್ಹತೆ ಗಳಿಸಿತು. ಭಾರತದ ಜೋಡಿ, ಈ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದ ಕ್ರೊವೇಷ್ಯಾದ ಅನಾಮರಿಯಾ ಟರ್ಕ್ ಮತ್ತು ದಾರ್ಕೊ ಟೊಮೊಸೆವಿಕ್ ಜೋಡಿಯನ್ನು 17–9 ರಿಂದ ಸೋಲಿಸಿತು. ಚೀನಾ ಮತ್ತು ಫ್ರಾನ್ಸ್ ಜೋಡಿಗಳು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಪಡೆದವು. ಕಣದಲ್ಲಿದ್ದ ಭಾರತದ ಅಭಿನವ್ ಶಾ ಮತ್ತು ಶಾಂಭವಿ ಕ್ಷೀರಸಾಗರ ಜೋಡಿ (628.1) ಆರನೇ ಸ್ಥಾನ ಪಡೆಯಿತು.

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ತಂಡ ಟಾಪ್‌ಗೆ

ಬೆಂಗಳೂರು: ಅಭಿಷೇಕ್ ಶಂಕರ್ ಪವಾರ್ ಮತ್ತು ಸೈಖೋಮ್ ಬೋರಿಶ್ ಸಿಂಗ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ತಂಡವು ಇಲ್ಲಿ ನಡೆಯುತ್ತಿರುವ ಸಿ. ಪುಟ್ಟಯ್ಯ ಸ್ಮಾರಕ್ ಕಪ್ ಫುಟ್ಬಾಲ್ ಟೂರ್ನಿಯಲ್ಲಿ 7–2ರಿಂದ ಎಂಎಫ್‌ಎರ್‌ಆ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು. ಬೆಂಗಳೂರು ಫುಟ್ಬಾಲ್ ಮೈದಾನದಲ್ಲಿ ಸೋಮವಾರ ನಡೆದ ಬಿ ಗುಂಪಿನ ಕೊನೆಯ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು ಈ ಗೆಲುವಿನೊಂದಿಗೆ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು. ಡಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡವನ್ನು ಅ.4ರಂದು ಎರಡನೇ ಸೆಮಿಫೈನಲ್‌ನಲ್ಲಿ ಎದುರಿಸಲಿದೆ. ಕಿಕ್‌ಸ್ಟಾರ್ಟ್ ಪರ ಅಭಿಷೇಕ್ (12ನೇ, 42ನೇ ಮತ್ತು 88ನೇ ನಿಮಿಷ), ಸೈಖೋಮ್ (44ನೇ, 57ನೇ ಮತ್ತು 60ನೇ) ತಲಾ ಮೂರು ಗೋಲು ಗಳಿಸಿದರೆ, ಲೇನಾಲ್ಡ್ ಕ್ಯಾರಲ್ ಮಾರ್ಕ್ (63ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಸ್ಟೂಡೆಂಟ್ಸ್ ಯೂನಿಯನ್ ಪರ ಹೇಮಂತ್ ಕುಮಾರ್ (13ನೇ) ಮತ್ತು ಅಂಕಿತ್ ಸಿಂಗ್ (45+5ನೇ) ತಲಾ ಒಂದು ಗೋಲು ತಂದಿತ್ತರು. ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್ಸಿ ತಂಡವು 2–1 ಗೋಲುಗಳಿಂದ ಎಎಸ್‌ಇ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು. ರೂಟ್ಸ್ ಮೊಹಮ್ಮದ್ ತಮೀಮ್ ಟಿ.ಕೆ. (23ನೇ) ಮತ್ತು ಗಾಡ್ವಿನ್ ಜಾನ್ಸನ್ (88ನೇ) ತಲಾ ಒಂದು ಗೋಲು ಗಳಿಸಿದರು. ಎಎಸ್ಸಿ ಪರ ಏಕೈಕ ಗೋಲನ್ನು ನೀರಜ್ ಸಿಂಗ್ (79ನೇ) ದಾಖಲಿಸಿದರು.

ಅತಿ ವೇಗದ ಅರ್ಧಶತಕ, ಶತಕ, 250 ರನ್ ಗಳಿಸಿದ ಭಾರತ | ಟೆಸ್ಟ್‌ನಲ್ಲಿ ಕೊಹ್ಲಿಗೆ 27000 ರನ್ | ಜಡೇಜಾಗೆ 300 ವಿಕೆಟ್: ವಿಶ್ವ ದಾಖಲೆ

ಕಾನ್ಪುರ ಟೆಸ್ಟ್: ದಾಖಲೆ ಬರೆದ ಟೀಂ ಇಂಡಿಯಾ

ಬೆಂಗಳೂರು: ಬಾಂಗ್ಲಾದೇಶ ವಿರುದ್ಧ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಟೀಂ ಇಂಡಿಯಾ ಭರ್ಜರಿ ಬ್ಯಾಟಿಂಗ್ ಮಾಡಿದೆ. ಕಾನ್ಪುರದ ಗ್ರೀನ್ ಪಾರ್ಕ್‌ನಲ್ಲಿ ಉಭಯ ತಂಡಗಳ ನಡುವಿನ ಪಂದ್ಯ ನಡೆಯುತ್ತಿದ್ದು ಗೆಲುವಿಗಾಗಿ ಭಾರತ ತಂಡ ಶತ ಪ್ರಯತ್ನ ಮಾಡುತ್ತಿದೆ.

ಆತಿಥೇಯ ಬಾರತ ಬಾಂಗ್ಲಾದೇಶವನ್ನು ಕೇವಲ 233 ರನ್ ಗಳಿಗೆ ಆಲೌಟ್ ಮಾಡಿದ ನಂತರ ಭಾರತದ ಬ್ಯಾಟರ್‌ಗಳು ಅಬ್ಬರದ ಬ್ಯಾಟಿಂಗ ನಡೆಸಿದರು. ಯಶಸ್ವಿ ಜೈಸ್ವಾಲ್ ಮೊದಲ ಓವರ್‌ನಲ್ಲಿ ಮೂರು ಬೌಂಡರಿಗಳನ್ನು ಬಾರಿಸುವ ಮೂಲಕ ಪಂದ್ಯ ಪ್ರಾರಂಭಿಸಿದರು. ನಂತರ ರೋಹಿತ್ ಸತತ ಎರಡು ಸಿಕ್ಸರ್‌ಗಳ ಮೂಲಕ ಹೊಸ ದಾಖಲೆ ಬರೆದರು. ರೋಹಿತ್ ಶರ್ಮಾ ಕೇವಲ 11 ಎಸೆತಗಳಲ್ಲಿ 23 ರನ್ ಗಳಿಸಿದರು. ಮತ್ತೊಂದೆಡೆ, ಯಶಸ್ವಿ ಜೈಸ್ವಾಲ್ ಅದ್ಭುತ ಹೊಡತಗಳ ಮೂಲಕ ಬೌಂಡರಿಗಳನ್ನು ಬಾರಿಸಿದರು. ಹೀಗಾಗಿ ಭಾರತಕ್ಕೆ ಉತ್ತಮ ಆರಂಭ ತಂದಕೊಟ್ಟಿತು.

ಅತಿ ವೇಗದ ದಾಖಲೆಗಳು

50 ರನ್‌ಗಳು	300 ವಿಕೆಟ್ ಜಡೇಜಾಗೆ
100 ರನ್‌ಗಳು	27000 ರನ್ ವಿರಾಟ್ ಕೊಹ್ಲಿ
150 ರನ್‌ಗಳು	1166 ರನ್ ಯಶಸ್ವಿ ಜೈಸ್ವಾಲ್
200 ರನ್‌ಗಳು	
250 ರನ್‌ಗಳು	
2 ಸಿಕ್ಸ್ ಮೊದಲೆರಡು ಬಾಲ್‌ಗೆ	

ವೇಗದ ಶತಕಗಳು

- 10.1 ಓವರ್‌ಗಳಲ್ಲಿ, ಭಾರತ, ಬಾಂಗ್ಲಾದೇಶ ವಿರುದ್ಧ, ಕಾನ್ಪುರ, 2024
- 12.2 ಓವರ್‌ಗಳಲ್ಲಿ, ಭಾರತ, ವಿ ವಿಂಡೀಸ್ ವಿರುದ್ಧ, ಪೋರ್ಟ್ ಆಫ್ ಸ್ಪೇನ್, 2023
- 13.1 ಓವರ್‌ಗಳಲ್ಲಿ, ಶ್ರೀಲಂಕಾ, ಬಾಂಗ್ಲಾ ವಿರುದ್ಧ, ಕೊಲಂಬೊ, 2001
- 13.4 ಓವರ್‌ಗಳಲ್ಲಿ ಬಾನ್ ವಿರುದ್ಧ ಡಬ್ಲ್ಯು ಐ ಮಿರ್ಪುರ್ 2012
- 13.4 ಇಂಗ್ಲೆಂಡ್, ಪಾಕಿಸ್ತಾನ ವಿರುದ್ಧ, ಕರಾಚಿ 2022
- 13.4 ಇಂಗ್ಲೆಂಡ್, ಪಾಕಿಸ್ತಾನ ವಿರುದ್ಧ, ರಾವಲ್ಪಿಂಡಿ 2022
- 13.6 ಆಸ್ಟ್ರೇಲಿಯಾ, ಭಾರತ ವಿರುದ್ಧ, ಪರ್ತ್ 2012

ಟೆಸ್ಟ್‌ನಲ್ಲಿ ಅತಿ ವೇಗದ ಅರ್ಧಶತಕ

- 14.34 ಯಶಸ್ವಿ – ರೋಹಿತ್, ಬಾಂಗ್ಲಾ ವಿರುದ್ಧ, ಕಾನ್ಪುರ. 2024 (23 ಎಸೆತಗಳಲ್ಲಿ 55 ರನ್)
- 11.86 ಸ್ಟೋಕ್ಸ್ – ಡಕೆಟ್. ವಿಂಡೀಸ್ ವಿರುದ್ಧ, ಎಜ್ಬಾಸ್ಟನ್, 2024 (44 ಎಸೆತಗಳಲ್ಲಿ 87★ ರನ್)
- 11.55 ವ್ಯಾಗ್ನರ್ – ಬೌಲ್ಟ್. ಇಂಗ್ಲೆಂಡ್ ವಿರುದ್ಧ, ಲೀಡ್ಸ್ 2013 (27 ಎಸೆತಗಳಲ್ಲಿ 52 ರನ್)

ರೋಹಿತ್ ಶರ್ಮಾ ವಿನೂತನ ದಾಖಲೆ

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಟೆಸ್ಟ್ ಇನ್ನಿಂಗ್ಸ್ ಒಂದರ ಮೊದಲ ಎರಡು ಎಸೆತಗಳಲ್ಲಿ ಸಿಕ್ಸರ್ ಬಾರಿಸಿದ ನಾಲ್ಕನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ರೋಹಿತ್ ಶರ್ಮಾ ಪಾತ್ರರಾಗಿದ್ದಾರೆ. ಕುತೂಹಲಕಾರಿ ಸಂಗತಿಯೆಂದರೆ ಈ ಪಟ್ಟಿಯಲ್ಲಿರುವ ನಾಲ್ವರು ಆಟಗಾರರಲ್ಲಿ ಮೂವರು ಭಾರತೀಯರು.

ರೋಹಿತ್ ಮತ್ತು ಯಶಸ್ವಿ ನೆರವಿನಿಂದ ಭಾರತ ಕೇವಲ 3 ಓವರ್‌ಗಳಲ್ಲಿ 50 ರನ್ ಕಲೆಹಾಕಿತು. ಇದು ಕ್ರಿಕೆಟ್‌ನ ಸುದೀರ್ಘ ಸ್ವರೂಪದ ಇತಿಹಾಸದಲ್ಲಿ ಯಾವುದೇ ತಂಡವು ಗಳಿಸಿದ ಅತಿ ವೇಗದ ಅರ್ಧಶತಕ. ಈ ಅವಧಿಯಲ್ಲಿ ಯಾವುದೇ ತಂಡವು ಅರ್ಧ ಶತಕವನ್ನು ದಾಟಿದ ಮೊದಲ ನಿದರ್ಶನವೂ ಇದಾಗಿದೆ. ಇದು ಟೆಸ್ಟ್ ಕ್ರಿಕೆಟ್‌ನ ಜತೆಯಾಟದಲ್ಲಿ ಅತ್ಯಧಿಕ ಸ್ಕೋರಿಂಗ್ ರೇಟ್ ಕೂಡ ಆಗಿದೆ.

ರೋಹಿತ್ ಔಟಾದ ನಂತರ, ಯಶಸ್ವಿ ಜೈಸ್ವಾಲ್ ಆಕರ್ಷಕ ಅರ್ಧಶತಕ ಬಾರಿಸಿದರು. 142 ಕ್ಕೂ ಹೆಚ್ಚು ಸ್ಟ್ರೈಕ್ ರೇಟ್‌ನಲ್ಲಿ ಆಡಿದರು. ಅವರು 51 ಎಸೆತಗಳಲ್ಲಿ 72 ರನ್ ಗಳಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 12 ಬೌಂಡರಿ ಮತ್ತು 2 ಸಿಕ್ಸರ್‌ಗಳಿದ್ದವು. ಈ ಮೂಲಕ ಭಾರತ 10.1 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಗೆಲುವಿನ ನಗೆ ಬೀರಿತು. ಇದು ಟೆಸ್ಟ್ ಕ್ರಿಕೆಟ್‌ನಲ್ಲಿ ತಂಡದ ವೇಗದ 100 ರನ್ ಆಗಿದೆ. ಅಂತಿಮವಾಗಿ ಭಾರತ 9 ವಿಕೆಟ್ ನಷ್ಟಕ್ಕೆ 285 ರನ್ ಕಲೆಹಾಕಿದೆ. ಭಾರತ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ವೇಗವಾಗಿ 150 (18.2 ಓವರ್), 200 (24.2 ಓವರ್) ಮತ್ತು 250 (30.1 ಓವರ್) ಸಾಧನೆ ಮಾಡಿದೆ. ಆತಿಥೇಯ ಭಾರತ ಕ್ಯಾಲೆಂಡರ್ ವರ್ಷದಲ್ಲಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದೆ. ಭಾರತ ಒಟ್ಟು 90 ಸಿಕ್ಸರ್ ಸಿಡಿಸಿದೆ. ಈ ಮೂಲಕ 2022ರಲ್ಲಿ ಇಂಗ್ಲೆಂಡ್‌ನ 89 ಸಿಕ್ಸರ್‌ಗಳ ದಾಖಲೆ ಮುರಿದಿದೆ.

ಸಚಿನ್ ದಾಖಲೆ ಹಿಂದಿಕ್ಕಿದ ಕೊಹ್ಲಿ

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 27,000 ರನ್ ಪೂರೈಸಿದ ಆಟಗಾರ ಎಂಬ ಹೆಗ್ಗಳಿಕೆಗೆ ವಿರಾಟ್ ಕೊಹ್ಲಿ ಕಾನ್ಪುರದಲ್ಲಿ ಪಾತ್ರರಾಗಿದ್ದಾರೆ. ಈ ಹಿಂದೆ ಸಚಿನ್ ತೆಂಡೂಲ್ಕರ್ ಈ ದಾಖಲೆ ಬರೆದಿದ್ದರು. ಭಾರತದ ಮಾಜಿ ಬ್ಯಾಟರ್ 2007 ರಲ್ಲಿ ತಮ್ಮ 623ನೇ ಇನ್ನಿಂಗ್ಸ್‌ನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 27,000 ರನ್ ಗಳಿಸಿದ್ದರು. ವಿರಾಟ್ ಕೊಹ್ಲಿ ತಮ್ಮ 594ನೇ ಇನ್ನಿಂಗ್ಸ್‌ನಲ್ಲಿ ಈ ಮೈಲಿಗಲ್ಲನ್ನು ತಲುಪಿದ್ದಾರೆ. ತೆಂಡೂಲ್ಕರ್, ಆಸ್ಟ್ರೇ ಲಿಯಾದ ರಿಕಿ ಪಾಂಟಿಂಗ್ ಮತ್ತು ಶ್ರೀಲಂಕಾದ ಕುಮಾರ ಸಂಗಕ್ಕಾರ ಬಳಿಕ 27,000 ಅಂತಾ ರಾಷ್ಟ್ರೀಯ ರನ್ ಗಳಿಸಿದ ನಾಲ್ಕನೇ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಕೊಹ್ಲಿ ಪಾತ್ರರಾದರು. ಸಂಗಕ್ಕಾರ ತಮ್ಮ 648 ನೇ ಇನ್ನಿಂಗ್ಸ್‌ನಲ್ಲಿ ಈ ಮೈಲಿಗಲ್ಲನ್ನು ತಲುಪಿದರೆ, ಪಾಂಟಿಂಗ್ 650 ಇನ್ನಿಂಗ್ಸ್‌ಗಳಲ್ಲಿ ಈ ಮೈಲಿಗಲ್ಲನ್ನು ತಲುಪಿದರು.

ಜಡೇಜಾಗೆ 300 ವಿಕೆಟ್‌ನ ಸಂಭ್ರಮ: ಟೀಮ್ ಇಂಡಿಯಾದ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 300 ವಿಕೆಟ್ ಗಳಿಸಿದ ಸಾಧನೆ ಮಾಡಿದ್ದಾರೆ. ಅವರು ಈ ಮೈಲುಗಲ್ಲು ದಾಟಿದ ಭಾರತದ ಏಳನೇ ಬೌಲರ್ ಎನಿಸಿಕೊಂಡಿದ್ದಾರೆ.

ಸೆಹ್ವಾಗ್ ದಾಖಲೆ ಮುರಿದ ಜೈಸ್ವಾಲ್

ಜೈಸ್ವಾಲ್ ಕೇವಲ 31 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಟೆಸ್ಟ್ ಕ್ರಿಕೆಟ್‌ಲ್ಲಿ ವೇಗವಾಗಿ ಅರ್ಧಶತಕ ಗಳಿಸಿದ ಭಾರತೀಯ ಆರಂಭಿಕ ಆಟಗಾರ ಮತ್ತು ಮೂರನೇ ವೇಗದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಒಟ್ಟಾರೆಯಾಗಿ, ಅವರು ಭಾರತೀಯ ತಂಡದ ಜಂಟಿ ಮೂರನೇ ವೇಗದ ಅರ್ಧಶತಕವಾಗಿದೆ. ಜುಲೈ 2023ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಪಾದಾರ್ಪಣೆ ಮಾಡಿದ 22 ವರ್ಷದ ಎಡಗೈ ಬ್ಯಾಟರ್ 2023–25 ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ (ಡಬ್ಲ್ಯುಟಿಸಿ) ಋತುವಿನಲ್ಲಿ 11 ಪಂದ್ಯಗಳಲ್ಲಿ 19 ಇನ್ನಿಂಗ್ಸ್‌ಗಳಲ್ಲಿ 1,166 ರನ್ ಗಳಿಸಿದ್ದಾರೆ. ಒಂದೇ ಡಬ್ಲ್ಯುಟಿಸಿ ಆವೃತ್ತಿ ಯಲ್ಲಿ ಭಾರತೀಯ ಕ್ರಿಕೆಟ್ ತಂಡದ ಪರ ಅತಿ ಹೆಚ್ಚು ರನ್ ಗಳಿಸಿದ ಅಜಿಂಕ್ಯ ರಹಾನೆ ಅವರ ದಾಖಲೆ ಮುರಿದಿದ್ದಾರೆ.



ಆವೃತ್ತಿಯಲ್ಲಿ ಭಾರತಕ್ಕಾಗಿ ಅತಿ ಹೆಚ್ಚು ರನ್

ಯಶಸ್ವಿ ಜೈಸ್ವಾಲ್	2023-25, 1166 ರನ್
ಅಜಿಂಕ್ಯ ರಹಾನೆ	2019-21, 1159 ರನ್
ರೋಹಿತ್ ಶರ್ಮಾ	2019-21, 1094 ರನ್

ಮೈಸೂರು ತಂಡ ಸಮಗ್ರ ವೀರಾಗ್ರಣಿ

ಬಾಗಲಕೋಟೆ: ನಗರದ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಭಾನುವಾರ ಮುಕ್ತಾಯಗೊಂಡ ಕಿವುಡರ ರಾಜ್ಯ ಮಟ್ಟದ 14ನೇ ಕ್ರೀಡಾಕೂಟದಲ್ಲಿ 173 ಅಂಕಗಳನ್ನು ಪಡೆಯುವ ಮೂಲಕ ಮೈಸೂರು ಕ್ರೀಡಾಪಟುಗಳು ಸಮಗ್ರ ವೀರಾಗ್ರಣಿ ಪಡೆದುಕೊಂಡಿದ್ದಾರೆ.

103 ಅಂಕಗಳನ್ನು ಗಳಿಸಿದ ಬೆಂಗಳೂರು ತಂಡ ದ್ವಿತೀಯ ಸ್ಥಾನ ಹಾಗೂ 64 ಅಂಕಗಳನ್ನು ಪಡೆದ ಮಂಡ್ಯ ಜಿಲ್ಲೆ ಕ್ರೀಡಾಪಟುಗಳು ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ಅತಿಥೇಯ ಬಾಗಲಕೋಟೆ ತಂಡ 29 ಅಂಕಗಳನ್ನು ಗಳಿಸುವ ಮೂಲಕ 7ನೇ ಸ್ಥಾನ ಪಡೆಯಿತು.

ಕರ್ನಾಟಕ ಕಿವುಡರ ಕ್ರೀಡಾ ಒಕ್ಕೂಟದ ಸಹಯೋಗದಲ್ಲಿ ಬಾಗಲಕೋಟೆ ಜಿಲ್ಲಾ ಕಿವುಡರ ಸಂಘ ಸೆ.27ರಿಂದ ಮೂರು ದಿನಗಳ ಕಾಲ ಕ್ರೀಡಾಕೂಟ ಆಯೋಜಿಸಲಾಗಿತ್ತು. 12 ವರ್ಷದಿಂದ 18 ವರ್ಷ ಮೇಲ್ಪಟ್ಟ 126 ವಿದ್ಯಾರ್ಥಿನಿಯರು ಸೇರಿ ಒಟ್ಟು ರಾಜ್ಯದ 20 ಜಿಲ್ಲೆಗಳ 465 ಕ್ರೀಡಾಪಟುಗಳು ಭಾಗವಹಿಸಿದ್ದರು. ಸಂಜ್ಞೆ ಭಾಷೆ ಹಾಗೂ ಧ್ವಜದ ಚಿಹ್ನೆಗಳನ್ನು ನೋಡುವ ಮೂಲಕ ಕ್ರೀಡೆಗಳಲ್ಲಿ ಸೆಣಸಾಟ ಆರಂಭಿಸುತ್ತಿದ್ದ ಕ್ರೀಡಾಪಟುಗಳು ಕೊನೆಯ ಕ್ಷಣದವರೆಗೂ ರೋಚಕವಾಗಿ ಹೋರಾಟ ನಡೆಸಿ ಗಮನ ಸೆಳೆದರು. ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಎಲ್ಲ ಕ್ರೀಡಾಪಟುಗಳಿಗೂ ಬಾಗಲಕೋಟೆ ಜಿಲ್ಲಾ ಉಡರ ಸಂಘದ ವತಿಯಿಂದ ಊಟ ಹಾಗೂ ಪ್ರತ್ಯೇಕ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು.

ಎತ್ತರ ಜಿಗಿತದಲ್ಲಿ ಹೊಸ ದಾಖಲೆ

18 ವರ್ಷ ಮೇಲ್ಪಟ್ಟ ಮಹಿಳೆಯರ ಎತ್ತರ ಜಿಗಿತದಲ್ಲಿ ಉತ್ತರ ಕನ್ನಡದ ಪ್ರೀತಿ ಹೆಗಡೆ 1.10 ಮೀ. ಜಿಗಿಯುವ ಮೂಲಕ ಹೊಸ ದಾಖಲೆ ಬರೆದರು. 18 ವರ್ಷದೊಳಗಿನ ಪುರುಷರ ಎತ್ತರ ಜಿಗಿತದಲ್ಲಿ ತುಮಕೂರಿನ ಗೋವಿಂದ ರಾಜು 1.50 ಮೀ. ಜಿಗಿಯುವ ಮೂಲಕ ನೂತನ ದಾಖಲೆ ಬರೆದರು. 18 ವರ್ಷದೊಳಗಿನ ಮಹಿಳೆಯರ ಎತ್ತರ ಜಿಗಿತದಲ್ಲಿ ತುಮಕೂರಿನ ಮೋಹಿತಾ.ಆರ್ 1.20 ಮೀ. ಜಿಗಿಯುವ ಮೂಲಕ ಹೊಸ ದಾಖಲೆ ನಿರ್ಮಿಸಿದರು. ಇದು ಇಲ್ಲಿಯವರೆಗೆ ನಡೆದ 14 ರಾಜ್ಯ ಮಟ್ಟದ ಕಿವುಡರ ಕ್ರೀಡಾಕೂಟದಲ್ಲಿ ಅತೀ ಹೆಚ್ಚು ಎತ್ತರ ಜಿಗಿತವಾಗುವ ಮೂಲಕ ಹೊಸ ದಾಖಲೆ ನಿರ್ಮಾಣವಾಗಿದೆ.

ಬಾಗಲಕೋಟೆ ನಗರದ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಮುಕ್ತಾಯಗೊಂಡ ಕಿವುಡರ ರಾಜ್ಯಮಟ್ಟದ 14ನೇ ಕ್ರೀಡಾಕೂಟದಲ್ಲಿ 173 ಅಂಕಗಳನ್ನು ಪಡೆದ ಮೈಸೂರು ತಂಡ ಸಮಗ್ರ ವೀರಾಗ್ರಣಿ ಪಡೆಯಿತು.